ಕರ್ನಾಟಕ ಸರ್ಕಾರ

# ಆಯವ್ಯಯ


## ೨೦೧೭ - ೨೦೧೮













೧೫ನೇ ಮಾರ್ಚ್ ೨೦೧೭

ಮಂಡಿಸಿದವರು

**ಶ್ರೀ ಸಿದ್ದರಾಮಯ್ಯ**

ಮಾನ್ಯ ಮುಖ್ಯಮಂತ್ರಿಗಳು

**ಸನ್ಮಾನ್ಯ ಸಭಾಧ್ಯಕ್ಷರೇ,**

1. 2017–18ನೇ ಸಾಲಿನ ಆಯವ್ಯಯವನ್ನು ನಿಮ್ಮ ಮೂಲಕ ರಾಜ್ಯದ ಜನತೆಯ ಮುಂದೆ ಮಂಡಿಸುತ್ತಿದ್ದೇನೆ.

2. ನಮ್ಮ ಸರ್ಕಾರಕ್ಕೆ ಇನ್ನೆರಡು ತಿಂಗಳುಗಳಿಗೆ ನಾಲ್ಕುವರ್ಷ ತುಂಬುವ ಈ ಸಂದರ್ಭದಲ್ಲಿ ಮುಂದಿನ ಆರ್ಥಿಕ ವರ್ಷದ ಮುನ್ನೋಟದ ಜತೆಯಲ್ಲಿ ಸಾಧನೆಯ ಹಿನ್ನೋಟವನ್ನೂ ಕೂಡಾ ಜನತೆಯ ಮುಂದಿಡುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

3. ನಮ್ಮದು ಸರ್ವರನ್ನೂ ಒಳಗೊಂಡ ಮಾನವೀಯ ಮುಖವುಳ್ಳ ಸರ್ವೋದಯದ ಅಭಿವೃದ್ಧಿ ಮಾದರಿ. ಇದಕ್ಕೆ ಪೂರಕವಾಗಿ ಸಂವಿಧಾನದ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ವಿಸ್ತೃತ ಆರ್ಥಿಕ ವಿನ್ಯಾಸವನ್ನು ಕಳೆದ ನಾಲ್ಕು ಆಯವ್ಯಯಗಳಲ್ಲಿ ನಾನು ಜನತೆಯ ಮುಂದಿಟ್ಟಿದ್ದೇನೆ. ಅದನ್ನು ಮತ್ತಷ್ಟು ವಿಸ್ತರಿಸುವ, ಎತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಈ ಆಯವ್ಯಯದಲ್ಲಿ ಮಾಡಿದ್ದೇನೆ.

4. ಅಭಿವೃದ್ಧಿಯ ಫಲ ಜನಜೀವನದಲ್ಲಿ ಪ್ರತಿಫಲಿತವಾಗಬೇಕೆಂಬುದು ನನ್ನ ಬಯಕೆ. ಇದೇ ನಮ್ಮ ಸರ್ಕಾರದ ಸಾಧನೆಯ ನಿಜವಾದ ಮಾನದಂಡವೆಂದು ನಾನು ನಂಬಿದ್ದೇನೆ. ಜನಾಭಿಪ್ರಾಯಕ್ಕೆ ನಮ್ಮದು ಸದಾ ತೆರೆದ ಮನಸ್ಸು. ಯೋಜನೆಗಳ ಫಲಾನುಭವಿಗಳ ಜತೆ 'ಜನಮನ' ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ. ಅಲ್ಲಿ ವ್ಯಕ್ತವಾದ

ಜನಾಭಿಪ್ರಾಯವನ್ನು ಗೌರವಿಸಿ ಯೋಜನೆಗಳನ್ನು ಮಾರ್ಪಾಡು ಮಾಡಿ ಇನ್ನಷ್ಟು ಜನೋಪಯೋಗಿ ಮಾಡಿದ್ದೇವೆ.

5. ರಾಮರಾಜ್ಯವೆನ್ನುವುದು ಹಸಿವು ಮುಕ್ತ, ಶೋಷಣೆ ಮುಕ್ತ, ಗಾಢ ಸಾಮರಸ್ಯದ, ಸರ್ವಾಂಗೀಣ ಪ್ರಗತಿಯನ್ನು ಪ್ರತಿನಿಧಿಸುವ ಒಂದು ಪರಿಕಲ್ಪನೆ. ಅಂಬೇಡ್ಕರ್ ರಚಿಸಿದ ಸಂವಿಧಾನದ ಹಿಂದಿನ ಪ್ರೇರಣೆಯಾಗಲಿ, ನನ್ನ ಬದುಕೇ ನನ್ನ ಸಂದೇಶವೆಂದ ಗಾಂಧೀಜಿಯ ಜೀವನವಾಗಲಿ, ಅಣ್ಣ ಬಸವಣ್ಣನ ಆದರ್ಶವಾಗಲಿ ಇವೆಲ್ಲವೂ ಧ್ವನಿಸುವುದು ಇದನ್ನೇ. ಹಾಗಾಗಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೋಧಿಸುವವರು ರಾಮರಾಜ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ.

6. ಜನಪರ ಸರ್ಕಾರವೆಂದರೆ ಅಭಿವೃದ್ಧಿ ವಿರೋಧಿ ಸರ್ಕಾರ ಎನ್ನುವಂಥ ಬಾಲಿಶವೂ, ಸಂಕುಚಿತವೂ ಆದ ಕಲ್ಪನೆಗಳು ಅದು ಹೇಗೋ ವಿತ್ತೀಯ ವಲಯದಲ್ಲಿ ನುಸುಳಿಬಿಟ್ಟಿವೆ ! ಆದರೆ, ಅಂಥದ್ದೊಂದು ಮಿಥ್ಯೆಯನ್ನು ಒಡೆದು ಹಾಕುವಲ್ಲಿ ನಮ್ಮ ಸರ್ಕಾರ ಯಶಸ್ವಿಯಾಗಿದೆ. ಯಾವ ಸರ್ಕಾರವನ್ನು ಜನಪರ ಸರ್ಕಾರ ಎಂದು ಜನಸಾಮಾನ್ಯರು ಗುರುತಿಸುತ್ತಾರೋ ಅದೇ ಸರ್ಕಾರದ ಆಡಳಿತ, ನೀತಿ–ನಿರೂಪಣೆಗಳೇ ಬೆಂಗಳೂರನ್ನು ಜಾಗತಿಕವಾಗಿ 'ಅತ್ಯಂತ ಕ್ರಿಯಾಶೀಲ ನಗರಿ' ಸ್ಥಾನಮಾನಕ್ಕೆ ಕೊಂಡೊಯ್ಯಲು ಯಶಸ್ವಿಯಾಗಿದೆ ಎನ್ನುವುದನ್ನು ವಿನಮ್ರತೆಯಿಂದ ಹೇಳಬಯಸುತ್ತೇನೆ.

7. ಯಾವ ಸರ್ಕಾರವನ್ನು ಸಾಮಾಜಿಕ ನ್ಯಾಯದ ಪರ ಎಂದು ಗುರುತಿಸಲಾಗುತ್ತದೆಯೋ ಅದೇ ಸರ್ಕಾರವೇ ಇಂದು ಉದ್ದೇಶಿತ ಬಂಡವಾಳ ಹೂಡಿಕೆಯಲ್ಲಿ ರಾಜ್ಯವನ್ನು ರಾಷ್ಟ್ರದಲ್ಲಿಯೇ ಮೊದಲ ಸ್ಥಾನದಲ್ಲಿ ಒಯ್ದು ನಿಲ್ಲಿಸಿದೆ ಎನ್ನುವುದನ್ನು ಮರೆಯಬಾರದು.

8. ಮೂಲಸೌಕರ್ಯ ಕಲ್ಪಿಸುವುದೇ ಅಭಿವೃದ್ಧಿ ಎಂದು ಕೊಂಡಿರುವ ಒಂದು ವರ್ಗ ನಮ್ಮಲ್ಲಿದೆ. ಅದು ಕೇವಲ ಆಂಶಿಕ ಸತ್ಯ. ಅದೇನೇ ಇರಲಿ, ಹೀಗೆ ನಂಬಿಕೊಂಡಿರುವ ವರ್ಗಕ್ಕೂ ಇಂದು ನಮ್ಮ ಸರ್ಕಾರದ ಸಾಧನೆಯ ಬಗ್ಗೆ ಹೆಚ್ಚಿನ ಆಕ್ಷೇಪಣೆಗಳಿರಲಾರದು. ನಮ್ಮ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಹಾಗೂ ರಾಜ್ಯದ ಮೂಲಸೌಕರ್ಯ ಕುರಿತಾದ ಯೋಜನೆಗಳು ಹಾಳೆಗಳ ಮೇಲೆ ಉಳಿದಿಲ್ಲ, ಬದಲಾಗಿ ಜನರ ಕಣ್ಣೆದುರಿಗಿವೆ. ಬೆಂಗಳೂರಿನ ಮೆಟ್ರೋ ಸಾರಿಗೆಯಾಗಲಿ, ಪ್ರಶಸ್ತಿಗಳ ಮೇಲೆ ಪ್ರಶಸ್ತಿ ಪಡೆಯುತ್ತಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಾಗಲಿ, ರಾಜ್ಯದ ಉದ್ದಗಲಕ್ಕೂ ಹುಬ್ಬೇರುವಂತೆ ಮೇಲ್ದರ್ಜೆಗೇರಿಸಲ್ಪಟ್ಟಿರುವ ರಾಜ್ಯ ಹೆದ್ದಾರಿಗಳೇ ಆಗಲಿ, ರಾಜ್ಯಾದ್ಯಂತ ತಲೆ ಎತ್ತುತ್ತಿರುವ ಕೈಗಾರಿಕಾ ಪಾರ್ಕುಗಳೇ ಇರಲಿ, ಇವೆಲ್ಲ ಸಾರಿ ಹೇಳುವ ಅಭಿವೃದ್ಧಿ ಚಹರೆಯನ್ನು ಸುಲಭದಲ್ಲಿ ಯಾರೂ ಅಲ್ಲಗಳೆಯಲಾಗದು.

9. ಯಾವ ನಾಡಿನಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಅಭಿವೃದ್ಧಿಯ ಕೇಂದ್ರಕ್ಕೆ ಬರಮಾಡಿಕೊಳ್ಳಲಾಗುತ್ತದೋ ಆ ನಾಡಿನ ಭವಿಷ್ಯಕ್ಕೆ ಅಂಧಃಕಾರವೆನ್ನುವುದು ಸುಳಿಯುವುದಿಲ್ಲ. ಇದು ನಾನು ಅನುಭವದಿಂದ ಕಂಡುಕೊಂಡಿರುವ ಸರಳ ಸತ್ಯ. ಇಂದು

ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಸಹ ರಾಜ್ಯವು ಮಹಿಳಾ ಸಬಲೀಕರಣದಲ್ಲಿ, ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಕ್ತವಾಗಿ ಪ್ರಶಂಸಿಸುತ್ತಿವೆ. ಇತ್ತೀಚೆಗಷ್ಟೇ, ಅಂತಾರಾಷ್ಟ್ರೀಯ ಸಂಸ್ಥೆಯೊಂದು ಕರ್ನಾಟಕ ಸರ್ಕಾರವು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವಲ್ಲಿ ಹಾಗೂ ಲಿಂಗಾಧಾರಿತ ಅಸಮಾನತೆಯನ್ನು ನಿವಾರಿಸಲು ಇಟ್ಟಿರುವ ಹೆಜ್ಜೆಗಳಿಗಾಗಿ **'ಅತ್ಯಂತ ಬೆಂಬಲ ನೀಡುವ ರಾಜ್ಯ ಸರ್ಕಾರ – 2017'** ಪ್ರಶಸ್ತಿಯನ್ನು ನೀಡಿದೆ ಎನ್ನುವುದನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ.

10. ಇದುವೇ ನಮ್ಮ ಅಭಿವೃದ್ಧಿಯ ಚಹರೆ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಿದೆ. ಈ ನಾಡನ್ನು, ಸಮಾಜವನ್ನು ಜತನದಿಂದ ಕಟ್ಟುವಲ್ಲಿ ಮಗಳಾಗಿ, ತಾಯಿಯಾಗಿ, ಅಕ್ಕತಂಗಿಯರಾಗಿ ಹೆಣ್ಣುಮಕ್ಕಳಿಗಿರುವ ಬದ್ಧತೆ ಪ್ರಶ್ನಾತೀತವಾದುದು. ಹಾಗಾಗಿಯೇ ನಮ್ಮ ವಿತ್ತೀಯ ನೀತಿ ನಿರೂಪಣೆಗಳ ವಿಷಯದಲ್ಲಿ ಲಿಂಗಾಧಾರಿತ ಅಸಮಾನತೆಯನ್ನು ತೊಡೆದು ಸಮಾನ ಆಯ್ಕೆ, ಅವಕಾಶಗಳನ್ನು ನೀಡುವ ಲಿಂಗಸಂವೇದಿ ಗುಣ ಗಾಢವಾಗಿ ಕಂಡುಬರುತ್ತದೆ.

11. ಕಳೆದ ನಾಲ್ಕು ವರ್ಷಗಳ ನಮ್ಮ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಕಳೆದೆರಡು ವರ್ಷಗಳ ನಿರಂತರ ಬರಗಾಲ, ಇತ್ತೀಚಿನ ನೋಟು ಅಮಾನ್ಯೀಕರಣದಿಂದಾಗಿ ಕುಂಠಿತಗೊಂಡ

ಆರ್ಥಿಕ ಚಟುವಟಿಕೆಯಿಂದಾದ ನಷ್ಟವೂ ಸೇರಿದಂತೆ ಎದುರಾದ ಪ್ರತಿಕೂಲಗಳನ್ನು ಆರ್ಥಿಕ ಶಿಸ್ತು, ಸಂಪನ್ಮೂಲ ಸಂಗ್ರಹಣೆಯ ಬದ್ಧತೆ ಮತ್ತು ದಕ್ಷ ಆಡಳಿತ ಮೂಲಕ ಎದುರಿಸುತ್ತಾ ಬಂದಿದ್ದೇವೆ.

## ರಾಜ್ಯದ ಅರ್ಥವ್ಯವಸ್ಥೆ

12. ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು 2015–16 ರಲ್ಲಿದ್ದ ಶೇ 7.3 ಕ್ಕೆ ಪ್ರತಿಯಾಗಿ 2016–17 ರಲ್ಲಿ ಶೇ 6.9ರಷ್ಟು ಬೆಳವಣಿಗೆಯಾಗಿದೆ. ಕೃಷಿ ವಲಯವು ಶೇ.1.5ರಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ. ಕೈಗಾರಿಕಾ ಹಾಗೂ ಸೇವಾ ವಲಯಗಳಲ್ಲಿ ಬೆಳವಣಿಗೆ ಕುಂಠಿತಗೊಂಡಿರುವುದು 2016–17ರ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ ಬೆಳವಣಿಗೆಯ ದರವು ಕಡಿಮೆಯಾಗುವುದಕ್ಕೆ ಕಾರಣ. ಕಳೆದ ಸಾಲಿನ ಶೇ.4.9ಕ್ಕೆ ಹೋಲಿಸಿದಲ್ಲಿ, ಈ ಸಾಲಿನಲ್ಲಿ ಕೈಗಾರಿಕಾ ವಲಯವು ಶೇ.2.2ರ ಬೆಳವಣಿಗೆಯನ್ನು ಹಾಗೂ ಕಳೆದ ಸಾಲಿನ ಶೇ.10.4ರ ಎದುರಾಗಿ ಸೇವಾ ವಲಯವು ಶೇ.8.5ರಷ್ಟು ಬೆಳವಣಿಗೆ ದರ ದಾಖಲಿಸುವ ನಿರೀಕ್ಷೆ ಇದೆ.

### ಅಪಮೌಲ್ಯೀಕರಣದ ಪರಿಣಾಮ

13. ಯಾವುದೇ ಸಾರ್ವಜನಿಕ ನೀತಿಯು ನಿಗದಿತ ಗುರಿಯನ್ನು ಸಾಧಿಸುವ ಉದ್ದೇಶದ ಜೊತೆಗೆ ಅದನ್ನು

ಕಾರ್ಯಗತಗೊಳಿಸುವುದರಲ್ಲಿಯೂ ಹೆಚ್ಚು ಸಮರ್ಥವಾಗಿರಬೇಕು. ಅಪಮೌಲ್ಯೀಕರಣವು ಜನಸಾಮಾನ್ಯರಿಗೆ ಅಪಾರ ಸಂಕಷ್ಟ ಉಂಟು ಮಾಡಿತು. ಆದರೆ, ಅದರಿಂದ ಸಾಧಿಸಿದ ಫಲಶೃತಿಯೇನು ಎಂಬುದನ್ನು ಕೇಂದ್ರ ಸರ್ಕಾರವು ಇನ್ನೂ ತಿಳಿಸಬೇಕಾಗಿದೆ. ರೈತರು ಹಾಗೂ ಗ್ರಾಮೀಣ ಜನತೆಗೆ ಸೇವೆ ನೀಡುವಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸುವ ಇಡೀ ಸಹಕಾರ ವಲಯವು ಅಕ್ಷರಶ: ಸ್ಥಬ್ದಗೊಂಡಿತು. ತಮಗೆ ವಹಿಸಿದ್ದ ಜವಾಬ್ದಾರಿಯನ್ನು ನಿರ್ವಹಿಸಲು ಬ್ಯಾಂಕಿಂಗ್ ವ್ಯವಸ್ಥೆಯು ಸನ್ನದ್ಧರಾಗಿಲ್ಲದೇ ಇದ್ದದ್ದು ಅದರ ಅನುಷ್ಠಾನದ ರೀತಿಯಲ್ಲಿನ ಸಿದ್ಧತೆಯ ಕೊರತೆಯನ್ನು ಜಾಹೀರುಪಡಿಸಿತು. ಅನುಷ್ಠಾನದ ನಡುವೆಯೇ ಗುರಿಯ ದಿಕ್ಕನ್ನು ಬದಲಿಸಲಾಯಿತು ಹಾಗೂ ನಿಯಮಗಳನ್ನು ಪದೇ ಪದೇ ಪರಿಷ್ಕರಿಸಲಾಯಿತು. ಅಪಮೌಲ್ಯೀಕರಣದ ಅಗತ್ಯತೆಯೇ ಚರ್ಚಾಸ್ಪದವಾಗಿದ್ದು, ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ಗಳು ಕನಿಷ್ಠ ಪಕ್ಷ ಮುಂದೆ ಒದಗಬಹುದಾದ ತೊಂದರೆಗಳನ್ನು ಮುಂದಾಲೋಚಿಸಿ, ಸಾಮಾನ್ಯ ಜನರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಸಾಧ್ಯ ಹಾಗೂ ಸಶಕ್ತವಾದ ವ್ಯವಸ್ಥೆಯನ್ನು ಆಚರಣೆಗೆ ತರಬೇಕಿತ್ತು ಎಂಬುದು ನನ್ನ ಅನಿಸಿಕೆ.

**ರಾಜ್ಯದ ಹಣಕಾಸು ಪರಿಸ್ಥಿತಿ**

**2016–17ರಲ್ಲಿ ಯೋಜನಾ ನಿರ್ವಹಣೆ**

14. ರಾಜ್ಯದ ಯೋಜನಾ ಗಾತ್ರವು 2016–17 ರಲ್ಲಿ 85,375 ಕೋಟಿ ರೂ.ಗಳಿಗೆ ನಿಗದಿಯಾಗಿತ್ತು. 75,665 ಕೋಟಿ ರೂ.ಗಳ ರಾಜ್ಯದ ಸಂಪನ್ಮೂಲ ಮತ್ತು 9,710 ಕೋಟಿ ರೂ.ಗಳ ರಾಜ್ಯ ಸಾರ್ವಜನಿಕ ಉದ್ಯಮಗಳ ಸಂಪನ್ಮೂಲಗಳ ಬೆಂಬಲವನ್ನು ಇದು ಒಳಗೊಂಡಿರುತ್ತದೆ. ಇದಕ್ಕೆ ಎದುರಾಗಿ 2016–17 ರ ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನಾ ಗಾತ್ರವು 85,933 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ನಾವು ಈ ಪರಿಷ್ಕೃತ ಅಂದಾಜುಗಳಲ್ಲಿ ನಿಗದಿಪಡಿಸಿರುವ ಹೆಚ್ಚಿನ ಗುರಿಯನ್ನು ತಲುಪುತ್ತೇವೆಂಬ ವಿಶ್ವಾಸವಿದೆ.

**ಯೋಜನೆ ಮತ್ತು ಯೋಜನೇತರ ವೆಚ್ಚಗಳ ನಡುವಿನ ಭಿನ್ನತೆಯ ತೆಗೆದುಹಾಕುವಿಕೆ**

15. ಆಯವ್ಯಯ ವಿಧಾನದಲ್ಲಿರುವ ಯೋಜನೆ ಮತ್ತು ಯೋಜನೇತರ ವೆಚ್ಚಗಳ ನಡುವಿನ ಈ ಭಿನ್ನತೆಯನ್ನು ಯೋಜನೆ ಆಧಾರಿತ ಆರ್ಥಿಕ ಬೆಳವಣಿಗೆಯನ್ನು ದೇಶದಲ್ಲಿ ಅಳವಡಿಸಿಕೊಂಡಂತಹ ಸಂದರ್ಭದಲ್ಲಿ ತರಲಾಯಿತು. ಕಾಲಾಂತರದಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚಗಳ ವಿಂಗಡಣೆಯಿಂದಾಗಿ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳಿಗೆ ಸಂಪನ್ಮೂಲಗಳ ಹಂಚಿಕೆಯ ದೃಷ್ಟಿಕೋನವನ್ನು ಸೀಮಿತಗೊಳಿಸುವಲ್ಲಿ

ಪರಿಣಮಿಸಿದೆ. ಸಿ.ರಂಗರಾಜನ್ ಸಮಿತಿ ಮತ್ತು ಆಡಳಿತ ಸುಧಾರಣೆ ಆಯೋಗ(ARC)ದ 14ನೇ ವರದಿಯು ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ಹೋಗಲಾಡಿಸಬೇಕೆಂದು ಶಿಫಾರಸ್ಸು ಮಾಡಿದೆ. ಇದರಂತೆ, ಕೇಂದ್ರ ಸರ್ಕಾರವು 2017–18ನೇ ಸಾಲಿನ ಆಯವ್ಯಯದಿಂದ ಯೋಜನೆ ಮತ್ತು ಯೋಜನೇತರದ ನಡುವಿನ ಭಿನ್ನತೆಯನ್ನು ತೆಗೆದು ಹಾಕಿದೆ. ರಾಷ್ಟ್ರೀಯ ಉಪಕ್ರಮದಂತೆ 2017–18 ನೇ ಸಾಲಿನಿಂದ ಈ ಭೇದವನ್ನು ತೆಗೆಯಬೇಕೆಂದು ರಾಜ್ಯ ಸರ್ಕಾರವು ನಿರ್ಧರಿಸಿದೆ.

**ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ಗೆ ತಿದ್ದುಪಡಿ**

16. ಈವರೆವಿಗೂ, ಯೋಜನಾ ಗಾತ್ರವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಮೂಲವೆಂದು ಪರಿಗಣಿಸಲಾಗುತ್ತಿತ್ತು. 2017–18ರಿಂದ ಯೋಜನೆ ಮತ್ತು ಯೋಜನೇತರದಲ್ಲಿನ ವಿಂಗಡಣೆಯು ಇಲ್ಲದೇ ಹೋಗುವುದರಿಂದ ಈ ಮೂಲವನ್ನು ಬದಲಾಯಿಸಬೇಕಾಗುತ್ತದೆ. ಸಂಚಿತ ನಿಧಿಯಿಂದ ವಿನಾಯಿತಿ ವೆಚ್ಚಗಳನ್ನು ಕಳೆದು ಸಿಗುವ ಹಂಚಿಕೆಗೊಳಿಸಬಹುದಾದ ಆಯವ್ಯಯವನ್ನು ಮೂಲವೆಂದು ಪರಿಗಣಿಸಲಾಗುವುದು. ವಿನಾಯಿತಿ ವೆಚ್ಚಗಳೆಂದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಗದಿಪಡಿಸಲು ಬಾರದ ವೆಚ್ಚಗಳಾದ ವೇತನ, ವೇತನಾನುದಾನ

(ಜಿಐಎ), ಪಿಂಚಣಿ, ಆಡಳಿತಾತ್ಮಕ ವೆಚ್ಚ, ರಾಜ್ಯ ಸರ್ಕಾರದ ಸಾಲ ಮತ್ತು ಆಯವ್ಯಯೇತರ ಸಾಲಗಳ ಕಾರಣದಿಂದ ಉಂಟಾಗುವ ಅಸಲು ಮರುಪಾವತಿ ಮತ್ತು ಬಡ್ಡಿ ಪಾವತಿ ಮತ್ತು ಪ್ರಕಟಿಸಲಾಗುವ ಇತರೆ ಆಡಳಿತಾತ್ಮಕ ಸ್ವರೂಪದ ವೆಚ್ಚಗಳು. ಈ ಹಂಚಿಕೆಗೊಳಿಸಬಹುದಾದ ಆಯವ್ಯಯದ 24.1% ಅನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಗಾಗಿ ನಿಗದಿಪಡಿಸಲಾಗುವುದು. ಈ ಸಂಬಂಧ ಈ ಅಧಿವೇಶನದಲ್ಲಿ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ತರಲಾಗುವುದು.

## ಕೃಷಿ

17. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

18. **ಬರ ಪರಿಸ್ಥಿತಿ ಹಾಗೂ ಆಪತ್ತು ಶಮನ:**

- ಸುಸ್ಥಿರ ಕೃಷಿಯಲ್ಲಿ ನೀರಿನ ಮಿತಬಳಕೆ ಒಂದು ಪ್ರಮುಖ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ಸೂಕ್ಷ್ಮ ನೀರಾವರಿಗೆ ಹೆಚ್ಚು ಒತ್ತು ನೀಡಲು ಶೇ.90ರಷ್ಟು ಸಹಾಯಧನ ಘೋಷಿಸಿ, ಕಳೆದ ನಾಲ್ಕು ವರ್ಷಗಳಲ್ಲಿ ಸಹಾಯಧನದ ಅನುದಾನವನ್ನು ತ್ರಿಗುಣಗೊಳಿಸಿದೆ. ರಾಮಥಲ್‌ನಂತಹ ಸಮುದಾಯ ಸೂಕ್ಷ್ಮ ನೀರಾವರಿ ಯೋಜನೆಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ 4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 3.9 ಲಕ್ಷ ರೈತರಿಗೆ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗಿದೆ.

- ಖುಷ್ಕಿ ಪ್ರದೇಶದಲ್ಲಿ ಸಂರಕ್ಷಣಾತ್ಮಕ ನೀರಾವರಿಯನ್ನು ಒದಗಿಸಲು ಕೃಷಿ ಭಾಗ್ಯ ಯೋಜನೆ ಜಾರಿಯಲ್ಲಿದ್ದು, ರಾಜ್ಯದಾದ್ಯಂತ ವ್ಯಾಪಕವಾಗಿ ರೈತರ ಪ್ರಶಂಸೆಗೆ ಪಾತ್ರವಾಗಿದೆ. ಈ ಯೋಜನೆಯಡಿಯಲ್ಲಿ 1.2 ಲಕ್ಷ ಕೃಷಿ ಹೊಂಡ ಮತ್ತು 2546 ಪಾಲಿಹೌಸ್ / ನೆರಳು – ಪರದೆ ನಿರ್ಮಾಣ ಮಾಡಲಾಗಿದೆ. ಇದಕ್ಕೆ 1121 ಕೋಟಿ ರೂ. ವೆಚ್ಚವಾಗಿದೆ.

- ಕೆರೆಗಳನ್ನು ಪುನಶ್ಚೇತನಗೊಳಿಸಲು "ಕೆರೆ ಸಂಜೀವಿನಿ" ಯೋಜನೆ ಹಾಗೂ ದೊಡ್ಡ ಪ್ರಮಾಣದಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿ ಮಾಡಿರುವುದರಿಂದ ರಾಜ್ಯದಲ್ಲಿ ಬರ ಸಹಿಷ್ಣುತೆ ವೃದ್ಧಿಸಿದೆ. ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಬೆಂಗಳೂರಿನ ಕೋರಮಂಗಲ–ಚಲ್ಲಘಟ್ಟ ಕಣಿವೆಯಿಂದ ಹರಿಯುವ 8 ಟಿ.ಎಂ.ಸಿ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 126 ಕೆರೆಗಳನ್ನು ಭರ್ತಿಗೊಳಿಸಿ ನೀರಾವರಿಗಾಗಿ ಬಳಸಲು 1,280 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

- "ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ"ಯಡಿಯಲ್ಲಿ ನೈಸರ್ಗಿಕ ವಿಪತ್ತಿನಿಂದ ಉಂಟಾಗುವ ಬೆಳೆ ವಿಫಲತೆಯ ಅಪಾಯವನ್ನು ಶಮನಗೊಳಿಸಿ ರೈತರಿಗೆ ಶೀಘ್ರವಾಗಿ ಪರಿಹಾರಧನ ಪಾವತಿಸಲು ಗಣಕೀಕರಣ ಕ್ರಮ

ಕೈಗೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ 29.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 22.2 ಲಕ್ಷ ರೈತರು ಲಾಭ ಪಡೆಯಲಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರವು ಶೇ.50ರಷ್ಟು ತನ್ನ ಪಾಲಿನ ಹಣ 876 ಕೋಟಿ ರೂ.ಗಳ ವೆಚ್ಚ ಭರಿಸಿದೆ.

- ದೀರ್ಘ ಕಾಲದಿಂದ ಬಾಕಿ ಇರುವ ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

19. **ರೈತರ ಆದಾಯವನ್ನು ಸುಧಾರಿಸಿ ಸ್ಥಿರಗೊಳಿಸುವುದು:**

- ರೈತರ ಆದಾಯ ಹೆಚ್ಚಿಸಲು ಪಶು ಭಾಗ್ಯ, ಕ್ಷೀರ ಧಾರೆ ಯೋಜನೆಗಳ ಮುಖಾಂತರ ಪಶು ಸಂಗೋಪನೆಗೆ ಒತ್ತು ನೀಡಲಾಗಿದೆ. ಇದು ರಾಜ್ಯದಲ್ಲಿ ಅತಿ ಸಣ್ಣ ರೈತರ ಆದಾಯವನ್ನು ಹೆಚ್ಚಿಸಿದೆಯಲ್ಲದೆ ಹಾಲು ಸಂಗ್ರಹಣೆಯಲ್ಲಿಯೂ ಸುಧಾರಣೆ ತಂದಿದೆ. ಪಶುಭಾಗ್ಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ /ಪಂಗಡದವರಿಗೆ ಶೇ.50 ಮತ್ತು ಸಾಮಾನ್ಯ ವರ್ಗದವರಿಗೆ ಶೇ.25ರ ಸಹಾಯಧನ ನೀಡಲಾಗುತ್ತಿದೆ. 2015-16 ಮತ್ತು 2016-17ನೇ ಸಾಲುಗಳಲ್ಲಿ 91 ಕೋಟಿ ರೂ. ವೆಚ್ಚದಲ್ಲಿ 27,869 ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಲಾಗಿದೆ.

- ಕೃಷಿ ಉತ್ಪಾದನಾ ವೆಚ್ಚ ತಗ್ಗಿಸಲು ಮತ್ತು ಕೃಷಿ ಕಾರ್ಮಿಕರ ಕೊರತೆ ನಿವಾರಿಸಲು ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ

ಪ್ರಮಾಣದಲ್ಲಿ ಅನುದಾನ ಒದಗಿಸಲಾಗಿದೆ. ಅಲ್ಲದೆ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಮುಖಾಂತರ ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ನೀಡುವ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ 10.5 ಲಕ್ಷ ರೈತರಿಗೆ ಕೃಷಿ ಯಂತ್ರಗಳು ಮತ್ತು ಕೃಷಿ ಸಂಸ್ಕರಣೆ ಸಲಕರಣೆಗಳನ್ನು ವಿತರಿಸಲಾಗಿದೆ. ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ನೀಡಲು 305 ಕೃಷಿಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು 4.3 ಲಕ್ಷ ರೈತರು ಈ ಕೇಂದ್ರಗಳ ಸೇವೆ ಪಡೆದಿರುತ್ತಾರೆ.

- 100 ಲಕ್ಷ ರೈತರಿಗೆ 28 ಲಕ್ಷ ಕ್ವಿಂಟಾಲ್ ಉತ್ತಮ ಗುಣಮಟ್ಟದ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗಿದೆ ಮತ್ತು 135 ಲಕ್ಷ ಟನ್ ರಸಗೊಬ್ಬರವನ್ನು ಸಮರ್ಪಕವಾಗಿ ವಿತರಿಸಲಾಗಿದೆ.

- **ಮಣ್ಣು ಆರೋಗ್ಯ ಅಭಿಯಾನ**ದಡಿಯಲ್ಲಿ 16 ಲಕ್ಷ ಮಣ್ಣು ಮಾದರಿಗಳನ್ನು ಸಂಗ್ರಹಿಸಲಾಗಿದೆ ಮತ್ತು 30 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ರೈತರಿಗೆ ವಿತರಿಸಲಾಗಿದೆ.

- ಮಾರುಕಟ್ಟೆ ಬೆಲೆ ಏರಿಳಿತಗಳಿಂದ ಉಂಟಾಗುವ ಬೆಲೆ ಅಸ್ಥಿರತೆಯಿಂದ ರೈತರನ್ನು ರಕ್ಷಿಸಲು ಆವರ್ತ ನಿಧಿಯ ಅನುದಾನ ಹೆಚ್ಚಿಸಲಾಗಿದೆ. ಪಾರದರ್ಶಕ ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಸ್ಥಾಪಿಸಿ, ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ

ಬೆಲೆ ದೊರಕಿಸಿ ಅವರ ಆದಾಯವನ್ನು ಹೆಚ್ಚಿಸಿದೆ. ಕೃಷಿ ಉತ್ಪನ್ನಗಳ ಸಂಗ್ರಹಣೆಗಾಗಿ ಉಗ್ರಾಣಗಳನ್ನು ಸ್ಥಾಪಿಸಲು ದಾಖಲೆ ಪ್ರಮಾಣದಲ್ಲಿ ಅನುದಾನ ಹೂಡಿಕೆ ಮಾಡಲಾಗಿದೆ.

20. **ಮಾಹಿತೀಕರಣ ಹಾಗೂ ಸಾಂಸ್ಥಿಕ ಬಲವರ್ಧನೆಯ ಮೂಲಕ ರೈತರ ಸಬಲೀಕರಣ:**

- ಕೃಷಿ ಸಂಬಂಧಿತ ಮಾರುಕಟ್ಟೆ ಮಾಹಿತಿ, ಬೆಳೆ ಸಲಹೆಗಳು ಹಾಗೂ ಹವಾಮಾನ ಮುನ್ಸೂಚನೆ ಇತ್ಯಾದಿ ಮಾಹಿತಿಗಳನ್ನು ವಿದ್ಯುನ್ಮಾನ ಮಾಧ್ಯಮಗಳ ಮುಖಾಂತರ ನೀಡಲು ಮಾಹಿತಿ ಸಂವಹನಾ ತಂತ್ರಜ್ಞಾನ (ICT)ವನ್ನು ಅಳವಡಿಸಲಾಗಿದೆ. ಸಮಗ್ರ ಸಹಾಯವಾಣಿ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ "ಸಮುದಾಯ ಆಕಾಶವಾಣಿ ಕೇಂದ್ರ"ಗಳನ್ನು ಸ್ಥಾಪಿಸುವ ಮೂಲಕ ರೈತರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.
- ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ "ಕರ್ನಾಟಕ ಕೃಷಿ ಅಭಿವೃದ್ಧಿ ಪರಿಷತ್" ಮುಖಾಂತರ ಕೃಷಿ ಸಂಬಂಧಿತ ವಿಷಯಗಳನ್ನು ನೇರವಾಗಿ ಉಸ್ತುವಾರಿ ಮಾಡಲಾಗುತ್ತಿದೆ.

## 2017–18 ನೇ ಸಾಲಿನ ಹೊಸ ಯೋಜನೆಗಳು

21. **"ಕೃಷಿ ಭಾಗ್ಯ"** ಯೋಜನೆಯು ರಾಜ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ ಬೆಳೆಗಳಿಗೆ ಸಂರಕ್ಷಣಾತ್ಮಕ ನೀರಾವರಿ ಒದಗಿಸುವ ಮೂಲಕ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮತ್ತು ಹೆಚ್ಚು

ಆದಾಯ ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಯ ಯಶಸ್ಸನ್ನು ಗಮನಿಸಿ 2017–18ನೇ ಸಾಲಿನಲ್ಲಿ ಈ ಯೋಜನೆಯನ್ನು ಕರಾವಳಿ ಮತ್ತು ಮಲೆನಾಡು ಪ್ರದೇಶಗಳ (ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಎಲ್ಲ ತಾಲ್ಲೂಕುಗಳಿಗೆ ವಿಸ್ತರಿಸಲಾಗುವುದು. ಇದಕ್ಕಾಗಿ 600 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

22. **ಕಳೆದ** ಐದು ವರ್ಷಗಳಿಂದ ರಾಜ್ಯವು ನಿರಂತರವಾಗಿ ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ **"ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ"** ಯು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ರೈತರಿಗೆ ವರದಾನವಾಗಿದೆ. ಈ ಸಾಲಿನಲ್ಲಿ ಕೇಂದ್ರದ ನೆರವಿನ ಜೊತೆಗೆ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ 845 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು ಒಟ್ಟಾರೆ 31.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೇರ್ಪಡೆಗೊಳಿಸಲಾಗುವುದು.

23. ನೀರಿನ ವಿವೇಕಯುತ ಮತ್ತು ದಕ್ಷ ಬಳಕೆಗೆ ಒತ್ತು ನೀಡುವ ದೃಷ್ಟಿಯಿಂದ ಒಟ್ಟಾರೆ 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 2 ಹೆಕ್ಟೇರ್ ಪ್ರದೇಶದವರೆಗೆ ಶೇ.90 ರಷ್ಟು ಮತ್ತು 5 ಹೆಕ್ಟೇರ್ ಪ್ರದೇಶದವರೆಗೂ ಶೇ.50 ರಷ್ಟು ಸಹಾಯಧನದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ವಿತರಿಸಲಾಗುವುದು. ಇದಕ್ಕಾಗಿ 375 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

24. "ಕೃಷಿ ಯಂತ್ರಧಾರೆ ಕಾರ್ಯಕ್ರಮ" ದಿಂದ ಹೆಚ್ಚಿನ ಸಂಖ್ಯೆಯ ರೈತರಿಗೆ ಪ್ರಯೋಜನವಾಗಿರುವುದರಿಂದ ಈ ಕಾರ್ಯಕ್ರಮವನ್ನು ಉಳಿದ ಹೋಬಳಿಗಳಿಗೂ ವಿಸ್ತರಿಸಲಾಗುವುದು. ಹೋಬಳಿಗಳಲ್ಲಿ 250 ಹೆಚ್ಚು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 122 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

25. ಬೇಸಾಯದ ವೆಚ್ಚವನ್ನು ಕಡಿಮೆ ಮಾಡಲು, ರಾಜ್ಯದಲ್ಲಿ ಮೊದಲ ಬಾರಿಗೆ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವುದನ್ನು ಉತ್ತೇಜಿಸಲು ವಿಶೇಷವಾಗಿ ಭತ್ತ, ದ್ವಿದಳ ಧಾನ್ಯಗಳು ಮತ್ತು ಎಣ್ಣೆಬೀಜಗಳ ಉತ್ಪಾದನೆಯನ್ನು ಹೆಚ್ಚಿಸಲು ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನವನ್ನು ವರ್ಗಾಯಿಸಲಾಗುವುದು ಹಾಗೂ ತಾಂತ್ರಿಕತೆಯನ್ನು ಉತ್ತೇಜಿಸುವವರಿಗೆ ಸಹ ಪ್ರೋತ್ಸಾಹಧನ ನೀಡಲಾಗುವುದು. ಇದಕ್ಕಾಗಿ 100 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

26. ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಮೂಲಕ, ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು, ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಒಂದರಂತೆ 174 "ಗ್ರಾಮೀಣ ಕೃಷಿ ಯಂತ್ರೋಪಕರಣ/ ಸೇವಾ ಕೇಂದ್ರಗಳನ್ನು" ಸ್ಥಾಪಿಸಲು ಉದ್ದೇಶಿಸಿದೆ. ಈ ಕೇಂದ್ರಗಳ ಸ್ಥಾಪನೆಗೆ 10 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದ್ದು ಪ್ರತಿ ಕೇಂದ್ರದ ಸ್ಥಾಪನೆಗೆ ಬ್ಯಾಂಕ್

ಲಿಂಕೇಜ್‌ನೊಂದಿಗೆ 5 ಲಕ್ಷ ರೂ.ಗಳ ಸಹಾಯಧನ ಅಥವಾ ಗರಿಷ್ಠ ಶೇ.50 ರಷ್ಟು ಮೊತ್ತವನ್ನು ಒದಗಿಸಲಾಗುವುದು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಗರಿಷ್ಠ ಶೇ.75 ರಷ್ಟು ನೀಡಲಾಗುವುದು.

27. 2017–18ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಒಟ್ಟಾರೆಯಾಗಿ 5,080 ಕೋಟಿ ರೂ. ಒದಗಿಸಲಾಗಿದೆ.

## ತೋಟಗಾರಿಕೆ

28. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ತೋಟಗಾರಿಕೆ ಕ್ಷೇತ್ರವು ಕಳೆದ ನಾಲ್ಕು ವರ್ಷಗಳಲ್ಲಿ ಭೀಕರ ಬರಗಾಲವಿದ್ದರೂ ಸಹ 18.35 ಲಕ್ಷ ಹೆ.ಗಳಿಂದ 21.36 ಲಕ್ಷ ಹೆ.ಗಳಿಗೆ ಹೆಚ್ಚಳವಾಗಿದ್ದು ಅದರಂತೆ ಉತ್ಪಾದನೆಯು 149.6 ಲಕ್ಷ ಟನ್‌ನಿಂದ 178.6 ಲಕ್ಷ ಟನ್‌ವರೆಗೆ ಹೆಚ್ಚಿದೆ. 2500 ಕೋಟಿ ರೂ.ಗಳನ್ನು ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 8 ಲಕ್ಷ ಫಲಾನುಭವಿಗಳಿಗೆ ಸಹಾಯಧನವಾಗಿ ಒದಗಿಸಲಾಗಿದೆ. ವಿವಿಧ ಜಾತಿಯ ತೋಟಗಾರಿಕೆ ಬೆಳೆಗಳ 77.5 ಲಕ್ಷ ಸಸಿ / ಕಸಿಗಳ ಉತ್ಪಾದನೆ, 1.3 ಲಕ್ಷ ಹೆಕ್ಟೇರ್‌ನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಕೆ, 36,094 ಹೆಕ್ಟೇರ್‌ನಲ್ಲಿ ತೋಟಗಾರಿಕೆ ಬೆಳೆಗಳ ಪುನರುಜ್ಜೀವನ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ರಾಜ್ಯವನ್ನು

2015ನೇ ಸಾಲಿಗೆ ರಾಷ್ಟ್ರದ ಅತ್ಯುತ್ತಮ ತೋಟಗಾರಿಕೆ ರಾಜ್ಯವೆಂದು ಘೋಷಿಸಲಾಗಿದೆ.

- ತೋಟಗಾರಿಕೆ ಬೆಳೆಯ ಉತ್ಪಾದನೆ ಮತ್ತು ವ್ಯಾಪಾರ ಚಟುವಟಿಕೆಗಳನ್ನು ಉತ್ತಮಗೊಳಿಸಲು 87,000 ರೈತರನ್ನೊಳಗೊಂಡ 87 ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲಾಗಿದೆ. ಈ ಸಂಸ್ಥೆಗಳು ಕೃಷಿ ಸಲಕರಣೆಗಳ ವ್ಯಾಪಾರ, ಬಾಡಿಗೆ ಆಧಾರಿತ ವ್ಯಾಪಾರ ಹಾಗೂ ಉತ್ಪಾದನಾ ವ್ಯಾಪಾರವನ್ನು ಪ್ರಾರಂಭಿಸಿರುತ್ತವೆ.

- ರಾಷ್ಟ್ರೀಯ ಬೀಜ ನಿಗಮದಿಂದ 2016–17ನೇ ಸಾಲಿನಲ್ಲಿ ಪ್ರಮಾಣೀಕರಿಸಿದ 2422 ಟನ್ ಬಿತ್ತನೆ ಆಲೂಗಡ್ಡೆ ಬೀಜವನ್ನು ಜಲಂಧರ್‌ನಿಂದ ಖರೀದಿಸಿ 2817 ರೈತರಿಗೆ ರೈತ ಉತ್ಪಾದಕ ಸಂಸ್ಥೆಗಳು ಮತ್ತು ಹಾಪ್‌ಕಾಮ್ಸ್ ಮೂಲಕ ವಿತರಿಸಲಾಗಿರುತ್ತದೆ. ಮುಂದಿನ ಮುಂಗಾರು ಅವಧಿಯಲ್ಲಿಯೂ ಸಹ ಈ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

## 2017–18ನೇ ಸಾಲಿನ ಹೊಸ ಯೋಜನೆಗಳು

29. ತೋಟಗಾರಿಕೆ ಇಲಾಖೆಯಡಿಯಲ್ಲಿ ಮೊಟ್ಟ ಮೊದಲ ಬಾರಿಗೆ "ಕೃಷಿ ಭಾಗ್ಯ" ಯೋಜನೆಯನ್ನು ಅನುಷ್ಠಾನಗೊಳಿಸಲು 200 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

30. ವಿವಿಧ ತೋಟಗಾರಿಕಾ ಬೆಳೆಗಳನ್ನು 20,000 ಎಕರೆಗಳಷ್ಟು ಪ್ರದೇಶಕ್ಕೆ ವಿಸ್ತರಿಸಲು 20,000 ರೈತರಿಗೆ ಅಂಗಾಂಶ ಕೃಷಿ ಸಸಿಗಳು ಸೇರಿದಂತೆ ಸುಮಾರು 40 ಲಕ್ಷ ಉತ್ತಮ ಗುಣಮಟ್ಟದ ಸಸಿನೆಡುವ ಸಾಮಗ್ರಿಗಳನ್ನು ಒದಗಿಸಲು 5 ಕೋಟಿ ರೂ.ಗಳನ್ನು ನೀಡಲಾಗುವುದು.

31. ಇಲಾಖೆಯು 16,000 ಎಕರೆಗಳಿಗೂ ಹೆಚ್ಚಿನ ಪ್ರದೇಶದಲ್ಲಿ ಹೊಂದಿರುವ 418 ತೋಟಗಳನ್ನು ಸುಧಾರಿಸುವ ದೃಷ್ಟಿಯಿಂದ ನಮ್ಮ ಸರ್ಕಾರವು ಮುಂದಿನ 5 ವರ್ಷಗಳಲ್ಲಿ 100 ಮಾದರಿ ತೋಟಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಿದೆ. ಈ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

32. ರಾಜ್ಯದಲ್ಲಿ ಮುಂದಿನ 5 ವರ್ಷಗಳಲ್ಲಿ 10,000 ಹೆಕ್ಟೇರ್ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಗೇರು ಬೀಜಬೆಳೆಗಳನ್ನು ಅಭಿವೃದ್ಧಿಪಡಿಸಲು "ಗೇರು ಅಭಿವೃದ್ಧಿ ಮಂಡಳಿ"ಯನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಇದರಿಂದ 10,000 ಕ್ಕೂ ಹೆಚ್ಚಿನ ರೈತರಿಗೆ ಅನುಕೂಲವಾಗಲಿದ್ದು, ಇದಕ್ಕಾಗಿ 10 ಕೋಟಿ ರೂ.ಗಳನ್ನು ನೀಡಲಾಗುವುದು.

33. 10,000 ಹೆಕ್ಟೇರ್ ಪ್ರದೇಶದಲ್ಲಿನ, ತೆಂಗಿನ ತೋಟಗಳನ್ನು ಪುನಶ್ಚೇತನಗೊಳಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದ್ದು ಇದರಿಂದ ಸುಮಾರು 10000 ರೈತರಿಗೆ ಅನುಕೂಲವಾಗಲಿದ್ದು, ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

34. 5,000 ಹೆಕ್ಟೇರ್ ಪ್ರದೇಶದಲ್ಲಿ ಮಾವಿನ ತೋಟಗಳನ್ನು ಪುನಶ್ಚೇತನಗೊಳಿಸಲು ಉದ್ದೇಶಿಸಿದ್ದು, ಇದರಿಂದ ಸುಮಾರು 5000 ಮಾವು ಬೆಳೆಗಾರರಿಗೆ ಅವರ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಕೂಲವಾಗಲಿದ್ದು ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

35. ಉತ್ತಮ ಗುಣಮಟ್ಟದ ಮಾವು ಉತ್ಪಾದನೆಗಾಗಿ, ಮಾವು ಬೆಳೆಗಾರರು ಜಾಗತಿಕ GAP (Good Agricultural Practices) ಪ್ರಮಾಣಪತ್ರ ಪಡೆದುಕೊಳ್ಳುವುದನ್ನು ಉತ್ತೇಜಿಸಲು ಯೋಜಿಸಲಾಗಿದೆ ಹಾಗೂ ರಾಜ್ಯದಾದ್ಯಂತ 100 ಎಪಿಎಂಸಿ ಮಾರುಕಟ್ಟೆಗಳಲ್ಲಿ ವೈಜ್ಞಾನಿಕ ಹಣ್ಣು ಮಾಗಿಸುವ ಸೌಲಭ್ಯಗಳನ್ನು ಕಲ್ಪಿಸಲು ಉಪಕ್ರಮಗಳನ್ನು ಆರಂಭಿಸಲು ಯೋಜಿಸಿದ್ದು, ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

36. ಸಾಂಬಾರ್ ಪದಾರ್ಥಗಳ ಬೆಳೆಗಾರರು ಸ್ಥಾಪಿಸಿರುವ ಸಂಬಾರ ಅಭಿವೃದ್ಧಿ ಮಂಡಳಿ ಮೂಲಕ ಅದರಲ್ಲೂ ಮುಖ್ಯವಾಗಿ ಒಣಮೆಣಸಿನಕಾಯಿ, ಮೆಣಸು ಮತ್ತು ಹರಿಶಿನ ಇತ್ಯಾದಿ ಬೆಳೆಗಾರರಿಗೆ ಉತ್ತಮ ಕೊಯ್ಲೋತ್ತರ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸಲು ನೆರವು ನೀಡಲಾಗುವುದು. ಇದರಡಿ ಸುಮಾರು 7000 ರೈತರಿಗೆ ಅನುಕೂಲ ಕಲ್ಪಿಸಲು ಉದ್ದೇಶಿಸಿದ್ದು, 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

37. ತೆಂಗು ಬೆಳೆಗಾರರಿಗೆ ನೆರವಾಗಲು 'ನೀರಾ ನೀತಿ'ಯನ್ನು ಅನುಮೋದಿಸಿದೆ. ಇದನ್ನು ಕಾರ್ಯರೂಪಕ್ಕೆ ತರಲು ಅಬಕಾರಿ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ. 'ನೀರಾ' ಅನ್ನು ಒಂದು ಪುಷ್ಟಿದಾಯಕ ಪೇಯವನ್ನಾಗಿ ಮಾಡಲು ಹಾಗೂ ಇದನ್ನು ಇತರ ಉದ್ದೇಶಗಳಿಗೆ ಬಳಸುವುದಕ್ಕೆ ಸಂಸ್ಕರಿಸಲು ಆಯ್ದ ತೆಂಗು ಉತ್ಪಾದಕ ಕಂಪನಿಗಳಿಗೆ ಮತ್ತು ರೈತ ಉತ್ಪಾದಕ ಕಂಪನಿಗಳಿಗೆ ಲೈಸನ್ಸ್ ನೀಡಲಾಗುವುದು ಹಾಗೂ ಇವರಿಗೆ ಮಾರುಕಟ್ಟೆ ಹಾಗೂ ಇತರೆ ಸೌಲಭ್ಯ ಕಲ್ಪಿಸಲು ಉತ್ತೇಜಿಸಲಾಗುವುದು. ಇದಕ್ಕಾಗಿ 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

38. ಬೆಂಗಳೂರಿನಲ್ಲಿರುವ ಇಂದಿರಾಗಾಂಧಿ ಸಂಗೀತ ಕಾರಂಜಿಯನ್ನು ಹೊಸ ತಂತ್ರಜ್ಞಾನದೊಂದಿಗೆ ಹಾಗೂ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲು ಮಳೆ ನಿರೋಧಕ ಶೆಲ್ಟರ್‌ನೊಂದಿಗೆ ನವೀಕರಿಸಲು ಉದ್ದೇಶಿಸಿದೆ.

39. 233 ಕೋಟಿ ರೂ.ಗಳ ವೆಚ್ಚದಲ್ಲಿ ಶೇ.90 ರಷ್ಟು ಸಹಾಯಧನದೊಂದಿಗೆ 35000 ರೈತರಿಗೆ ಹನಿ ನೀರಾವರಿ ವ್ಯವಸ್ಥೆ ಕಲ್ಪಿಸಲಾಗುವುದು.

40. ಕಳೆದ 3 ವರ್ಷಗಳಿಂದ ಭೀಕರ ಬರಗಾಲದಿಂದಾಗಿ ರೈತರ ಬೆಳೆಗಳಿಗೆ ನೀರಿನ ಅಭಾವವನ್ನು ತಡೆಗಟ್ಟಲು ನೀರಿನ ಟ್ಯಾಂಕರ್‌ಗಳನ್ನು ಖರೀದಿಸಲು ರೈತರಿಗೆ ಶೇ.50 ರಷ್ಟು (ಗರಿಷ್ಠ 50,000 ರೂ.ಗಳು) ಪ್ರತಿ ತಾಲ್ಲೂಕಿಗೆ 10ರಂತೆ ಸಹಾಯಧನವನ್ನು ಒದಗಿಸಲಾಗುವುದು.

41. 2017–18ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 1,091 ಕೋಟಿ ರೂ. ಒದಗಿಸಲಾಗಿದೆ.

**ಪಶುಸಂಗೋಪನೆ**

42. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪಶುಸಂಗೋಪನೆಯು ಬಹುಮುಖ್ಯ ಕಸುಬಾಗಿದೆ. ರಾಜ್ಯವು ಹಾಲು ಸಂಗ್ರಹಣೆಯಲ್ಲಿ 2ನೇ ಸ್ಥಾನ, ಮೊಟ್ಟೆ ಉತ್ಪಾದನೆಯಲ್ಲಿ 7ನೇ ಸ್ಥಾನ, ಕುರಿ/ಮೇಕೆ ಸಾಕಾಣಿಕೆಯಲ್ಲಿ 4ನೇ ಸ್ಥಾನ ಹಾಗೂ ಮಾಂಸ ಉತ್ಪಾದನೆಯಲ್ಲಿ 11ನೇ ಸ್ಥಾನದಲ್ಲಿದೆ.

- 2015–16ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂದಾಜು 6344 ಸಾವಿರ ಟನ್ ಹಾಲು, 476 ಕೋಟಿ ಮೊಟ್ಟೆ ಮತ್ತು 2 ಲಕ್ಷ ಟನ್ ಮಾಂಸದ ಉತ್ಪಾದನೆಯಾಗಿದ್ದು ಈ ಕ್ಷೇತ್ರಗಳಲ್ಲಿ ಬೆಳವಣಿಗೆಗೆ ವಿಫುಲ ಅವಕಾಶಗಳಿವೆ. ಆದ್ದರಿಂದ ರಾಜ್ಯ ಸರ್ಕಾರವು ತನ್ನ ಪ್ರಮುಖ ಯೋಜನೆಗಳಾದ ಕುರಿಗಾಹಿ ಸುರಕ್ಷಾ ಯೋಜನೆ, ಕ್ಷೀರಭಾಗ್ಯ, ಪಶುಭಾಗ್ಯ ಮುಂತಾದವುಗಳ ಮೂಲಕ ಗ್ರಾಮೀಣ ರೈತರಿಗೆ ಪ್ರೋತ್ಸಾಹ ನೀಡುತ್ತಿದೆ. 2013–14ನೇ ಸಾಲಿನಲ್ಲಿ 7.7 ಲಕ್ಷ ಫಲಾನುಭವಿಗಳಿದ್ದು 2016–17 ರ ಸಾಲಿಗೆ ಈ ಸಂಖ್ಯೆಯು 8.8 ಲಕ್ಷಕ್ಕೆ ಹೆಚ್ಚಳವಾಗಿದೆ. 2013–14ರಲ್ಲಿ ದಿನವಹಿ 52 ಲಕ್ಷ ಕೆ.ಜಿ. ಇದ್ದ

ಹಾಲು ಸಂಗ್ರಹಣೆಯ ಪ್ರಮಾಣವು 2016–17 ರಲ್ಲಿ 68 ಲಕ್ಷ ಕೆ.ಜಿ.ಗೆ ಏರಿಕೆಯಾಗಿರುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿ ಲೀಟರ್ ಹಾಲಿಗೆ ರೂ 2/– ಇದ್ದ ಪ್ರೋತ್ಸಾಹಧನವನ್ನು ರೂ 5/– ಕ್ಕೆ ಹೆಚ್ಚಿಸಿದೆ.

- 2013–14 ರಿಂದ 2016–17ರವರೆಗೆ ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆ ಅಡಿ ಒಟ್ಟು 100 ಕೋಟಿ ರೂ. ಅನುದಾನದಲ್ಲಿ 16387 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹೈನುಘಟಕ ಒದಗಿಸಲಾಗಿದೆ.

- ಅಮೃತ ಯೋಜನೆಯಡಿಯಲ್ಲಿ 2013–14ನೇ ಸಾಲಿನಿಂದ 2016–17ನೇ ಸಾಲಿನವರೆಗೆ 9672 ವಿಧವೆಯರು ಮತ್ತು ನಿರ್ಗತಿಕ ಮಹಿಳೆಯರಿಗೆ ಜೀವನದಲ್ಲಿ ಸ್ವಾವಲಂಭನೆ ಸಾಧಿಸಲು ಹೈನುಘಟಕಗಳನ್ನು ವಿತರಿಸಲು 28 ಕೋಟಿ ರೂ.ಗಳ ಅನುದಾನ ವೆಚ್ಚ ಮಾಡಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

43. ರಾಜ್ಯದ ಎಲ್ಲಾ ಹಳ್ಳಿಗಳಿಗೆ ಪರಿಣಿತ ಹಾಗೂ ಸುಧಾರಿತ ಪಶು ವೈದ್ಯಕೀಯ ಸೇವೆಗಳನ್ನು ವಿಸ್ತರಿಸುವ ಗುರಿಯೊಂದಿಗೆ, ಹಂತ ಹಂತವಾಗಿ 1,512 ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು, ಈ ಸಾಲಿನಲ್ಲಿ ಇಂತಹ 302 ಕೇಂದ್ರಗಳನ್ನು

ಮೇಲ್ದರ್ಜೆಗೇರಿಸಲಾಗುವುದು. ಇದರಿಂದಾಗಿ ಮುಂಬರುವ ವರ್ಷಗಳಲ್ಲಿ ಪದವೀಧರ ಪಶುವೈದ್ಯರೇ ಇರುವ ಪಶುವೈದ್ಯ ಸಂಸ್ಥೆಗಳನ್ನು ಹೊಂದುವ ರಾಜ್ಯವಾಗುವ ನಿಟ್ಟಿನಲ್ಲಿ ರಾಷ್ಟ್ರದಲ್ಲೇ ಪ್ರಥಮ ಹೆಜ್ಜೆ ಇರಿಸಿದೆ ಎಂದು ಹೇಳಲು ನನಗೆ ಹೆಮ್ಮೆ ಅನಿಸುತ್ತಿದೆ.

44. ರಾಜ್ಯದಲ್ಲಿ "ಪ್ರಮಾಣೀಕೃತ ಉತ್ಕೃಷ್ಟ ತಳಿ ಟಗರುಗಳ ಉತ್ಪಾದಕ ಘಟಕ"ಗಳನ್ನು ಸ್ಥಾಪಿಸಲಾಗುವುದು, ಅವುಗಳಲ್ಲಿ ಮೂರು ತಿಂಗಳ ವಯಸ್ಸಿನ 'ತಳಿ ಸಂವರ್ಧನೆಗೆ ತಕ್ಕುದಾದ' ಗಂಡು ಕುರಿಮರಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ 10,000 ಉತ್ಕೃಷ್ಟ ಕುರಿಮರಿಗಳನ್ನು ಬೆಳೆಸುವುದಕ್ಕಾಗಿ ಹನ್ನೆರಡು ತಿಂಗಳುಗಳಿಗೆ ಕುರಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸಲಾಗುವುದು.

45. ಪ್ರತಿಯೊಂದು ಕಂದಾಯ ವಿಭಾಗದಲ್ಲಿ 7.25 ಕೋಟಿ ರೂ.ಗಳ ಘಟಕ ವೆಚ್ಚದಲ್ಲಿ ಕರ್ನಾಟಕ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಹಕಾರ ಮಹಾಮಂಡಳದ ಮೂಲಕ ಒಂದು ಆಧುನಿಕ ಕಸಾಯಿಖಾನೆಯನ್ನು ನಿರ್ಮಿಸಲು ಉದ್ದೇಶಿಸಿದೆ. ಎರಡು ಕಸಾಯಿಖಾನೆಗಳ ನಿರ್ಮಾಣವನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

46. ಸಾರ್ವಜನಿಕರಿಗೆ ಸ್ವಚ್ಛ ಮತ್ತು ಆರೋಗ್ಯಕರ ಮಾಂಸವನ್ನು ಒದಗಿಸುವ ಉದ್ದೇಶದಿಂದ, ಪ್ರತಿ ಅಂಗಡಿಗೆ 5 ಲಕ್ಷ ರೂ.ಗಳ ವೆಚ್ಚದಲ್ಲಿ ಅಸ್ತಿತ್ವದಲ್ಲಿರುವ ಮಾಂಸದ ಅಂಗಡಿಗಳನ್ನು

ಆಧುನೀಕರಣಗೊಳಿಸಲಾಗುವುದು. ಇದಕ್ಕಾಗಿ ಪ್ರತಿ ಅಂಗಡಿಗೆ 1.25 ಲಕ್ಷ ರೂ.ಗಳ ಸಹಾಯಧನ ಒದಗಿಸಲಾಗುವುದು.

47. ರಾಜ್ಯದ ನೋಂದಾಯಿತ ಕುರಿ ಸಹಕಾರ ಸಂಘಗಳ ಉಪಯೋಗಕ್ಕಾಗಿ 7.5 ಲಕ್ಷ ರೂ.ಗಳ ಸಹಾಯಧನ ಹಾಗೂ ಉಳಿದ 2.5 ಲಕ್ಷಗಳನ್ನು ಸಂಘಗಳಿಂದ ವಂತಿಗೆ ರೂಪದಲ್ಲಿ ಸೇರಿಸಿ, 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಎರಡು ವರ್ಷಗಳ ಅವಧಿಯಲ್ಲಿ 40 ಉಣ್ಣೆ ಮತ್ತು ಚರ್ಮ ಸಂಗ್ರಹಣಾ ಗೋದಾಮುಗಳನ್ನು ನಿರ್ಮಿಸಲಾಗುವುದು.

48. ರಾಜ್ಯದಲ್ಲಿ ಸಂಗ್ರಹವಾದ ಉಣ್ಣೆಯನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳುವ ಸಲುವಾಗಿ ವೈಜ್ಞಾನಿಕ ಸಂಸ್ಕರಣೆ ಕೈಗೊಳ್ಳಲು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಲು ಮುಂದಿನ 3 ವರ್ಷಗಳಲ್ಲಿ ತಲಾ 2.45 ಕೋಟಿ ರೂ.ಗಳ ವೆಚ್ಚದಲ್ಲಿ 4 ಉಣ್ಣೆ ಸಂಸ್ಕರಣಾ ಘಟಕಗಳನ್ನು (Wool Processing Units) ಸ್ಥಾಪಿಸಲಾಗುವುದು.

49. ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 100 ಕೋಟಿ ರೂ.ಗಳ ವೆಚ್ಚದಲ್ಲಿ ಲಸಿಕೆ ತಯಾರಕ ಘಟಕವನ್ನು ಸ್ಥಾಪಿಸುವ ಮೂಲಕ ಕಾಲುಬಾಯಿ ಜ್ವರದ ಲಸಿಕೆ ಉತ್ಪಾದನೆಯಲ್ಲಿ ರಾಜ್ಯವು ಸ್ವಾವಲಂಭನೆ ಸಾಧಿಸುವಂತೆ ಮಾಡಲು ಉದ್ದೇಶಿಸಿದೆ.

50. ಹಾಸನದಲ್ಲಿರುವ ಕೊರವೆಂಗಲ, ಚಾಮರಾಜನಗರದಲ್ಲಿರುವ ಬಾರಗಿ ಮತ್ತು ಯಾದಗಿರಿಯಲ್ಲಿ ಅಂದಾಜು 7.5 ಕೋಟಿ

ರೂ.ಗಳ ವೆಚ್ಚದಲ್ಲಿ 3 ಹೊಸ ಡಿಪ್ಲೋಮಾ ಕಾಲೇಜುಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

51. ಅಪಘಾತದಲ್ಲಿ ವಿಮೆ ಮಾಡದ ಎತ್ತು / ಹಸುಗಳ ಸಾವಿನಿಂದ ನಷ್ಟವನ್ನು ಅನುಭವಿಸುವ ರೈತರಿಗೆ ಸಂಕಷ್ಟ ನಿವಾರಣೆಗಾಗಿ ಪ್ರತಿ ರಾಸಿಗೆ 10,000 ರೂ.ಗಳ ಪರಿಹಾರಧನ ಒದಗಿಸಲಾಗುವುದು.

52. ಆರು ತಿಂಗಳೊಳಗೆ ಸಾವು ಸಂಭವಿಸುವ ಕುರಿ / ಮೇಕೆ ಮರಿಗಳಿಗೆ 2,500 ರೂ. ಹಾಗೂ ಆರು ತಿಂಗಳ ನಂತರ ಸಾವಿಗೀಡಾಗುವ ಕುರಿ / ಮೇಕೆಮರಿಗಳಿಗೆ 5,000 ರೂ.ಗಳ ಪರಿಹಾರವನ್ನು ನೀಡಲಾಗುವುದು.

53. ಬಳ್ಳಾರಿ ಕುರಿ ತಳಿ ಸಂವರ್ಧನೆಗಾಗಿ ಬಳ್ಳಾರಿ ಜಿಲ್ಲೆಯ ಕುರಿಕುಪ್ಪೆ ಗ್ರಾಮದಲ್ಲಿ "ಬಳ್ಳಾರಿ ಕುರಿ ಸಂವರ್ಧನೆ ಕೇಂದ್ರ" ಪ್ರಾರಂಭಿಸಲಾಗುವುದು. ಇದಕ್ಕಾಗಿ 1 ಕೋಟಿ ರೂ. ಅನುದಾನ ಒದಗಿಸಲಾಗುವುದು.

54. 2017–18ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಗೆ ಒಟ್ಟಾರೆಯಾಗಿ 2,245 ಕೋಟಿ ರೂ. ಒದಗಿಸಲಾಗಿದೆ.

## ರೇಷ್ಮೆ

55. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ವಿವಿಧ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ನಾಲ್ಕು

ವರ್ಷಗಳಲ್ಲಿ 36,147 ಮೆ.ಟನ್‌ಗಳಷ್ಟು ರೇಷ್ಮೆ ಉತ್ಪಾದನೆಯೊಂದಿಗೆ ರಾಜ್ಯವು ರೇಷ್ಮೆ ಉತ್ಪಾದನೆಯಲ್ಲಿ ರಾಷ್ಟ್ರದಲ್ಲಿ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ. ದೇಶದಲ್ಲಿ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇ.48ರಷ್ಟಿದ್ದು ವಾರ್ಷಿಕ ಸುಮಾರು 12 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

- 2015–16ನೇ ಸಾಲಿನಲ್ಲಿ 76,436 ಮೆಟ್ರಿಕ್ ಟನ್ ಗೂಡನ್ನು ಉತ್ಪಾದಿಸಿ, 9,823 ಮೆಟ್ರಿಕ್ ಟನ್‌ಗಳ ಕಚ್ಚಾ ರೇಷ್ಮೆ ಉತ್ಪಾದಿಸಲಾಗಿದೆ. ಅದರಲ್ಲಿ ಬೈವೋಲ್ಟೈನ್ ರೇಷ್ಮೆ 1,344 ಮೆಟ್ರಿಕ್ ಟನ್‌ಗಳು ಆಗಿದೆ. ನಾಲ್ಕು ವರ್ಷಗಳಲ್ಲಿ ಒಟ್ಟಾರೆ 4,589 ಮೆಟ್ರಿಕ್ ಟನ್ ದ್ವಿತಳಿ ರೇಷ್ಮೆ ಉತ್ಪಾದಿಸಿದ್ದು, ಇವು ಸರ್ವಕಾಲಿಕ ಸಾಧನೆಗಳಾಗಿವೆ.

- ತುಮಕೂರು ಮತ್ತು ಚನ್ನಪಟ್ಟಣದ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ 2 ಶೈತ್ಯಾಗಾರಗಳನ್ನು ಸ್ಥಾಪಿಸಲಾಗಿದೆ. 2016–17ನೇ ಸಾಲಿನಲ್ಲಿ ಹಾಸನ ಮತ್ತು ಮಂಡ್ಯ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ 2 ಶೈತ್ಯಾಗಾರಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

- ಕೊಳ್ಳೇಗಾಲ, ರಾಮನಗರ, ಶಿಡ್ಲಘಟ್ಟ ಮತ್ತು ಕನಕಪುರ ಮಾರುಕಟ್ಟೆಗಳಲ್ಲಿ ಸಮಗ್ರ ಇ–ಹರಾಜು ಪದ್ಧತಿಯನ್ನು ಈಗಾಗಲೇ ಅಳವಡಿಸಲಾಗಿದೆ. 2016–17ನೇ ಸಾಲಿನಲ್ಲಿ

ಚನ್ನಪಟ್ಟಣ, ಕೋಲಾರ ಮತ್ತು ವಿಜಯಪುರ ಮಾರುಕಟ್ಟೆಗಳಲ್ಲಿ ಸಮಗ್ರ ಇ–ಹರಾಜು ಪದ್ಧತಿಯನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

- ರೇಷ್ಮೆ ಉತ್ಪಾದನೆಯ ಹೆಚ್ಚಳಕ್ಕೆ ಉತ್ತೇಜನ ನೀಡಲು ಸರ್ಕಾರವು ಕಳೆದ ನಾಲ್ಕು ವರ್ಷಗಳಲ್ಲಿ 214 ಕೋಟಿ ರೂ.ಗಳ ಉತ್ಪಾದನಾ ಪ್ರೋತ್ಸಾಹಧನವನ್ನು ನೀಡಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

56. ಬೀಜ ಉತ್ಪಾದನೆ ಮತ್ತು ಚಾಕಿ ಸಾಕಣೆಯಲ್ಲಿ ಗುಣಮಟ್ಟ ನಿಯಂತ್ರಣವನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಹಾಗೂ ರೇಷ್ಮೆ ಉದ್ಯಮದ ಸಮಗ್ರ ಸಶಕ್ತ ಅಭಿವೃದ್ಧಿಗಾಗಿ ರೇಷ್ಮೆ ಹುಳು ಮೊಟ್ಟೆ / ಚಾಕಿ ಗುಣಮಟ್ಟ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಲು ಉದ್ದೇಶಿಸಿದೆ.

57. ನಮ್ಮ ಸರ್ಕಾರವು, ರೇಷ್ಮೆಗೂಡಿನ ನಂತರದ ಚಟುವಟಿಕೆಗಳಲ್ಲಿ, ವಿಶೇಷವಾಗಿ ನೂಲು ಬಿಚ್ಚಣಿಕೆಯಲ್ಲಿ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಕೇಂದ್ರ ರೇಷ್ಮೆ ಮಂಡಳಿಯು ಆಯೋಜಿಸುವ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಒಂದು ತಿಂಗಳ ಅವಧಿಗೆ ಗ್ರಾಮೀಣ ಪ್ರದೇಶದ ಡಿಪ್ಲೋಮಾದಾರರಿಗೆ ತರಬೇತಿ ನೀಡಲು ಆರ್ಥಿಕ ನೆರವು ಒದಗಿಸಲು ಉದ್ದೇಶಿಸಿದೆ.

58. ರೇಷ್ಮೆ ವಲಯದಲ್ಲಿನ ಇತ್ತೀಚಿನ ತಂತ್ರಜ್ಞಾನಗಳು ಹಾಗೂ ಹೊಸ ಆವಿಷ್ಕಾರಗಳ ಬಗ್ಗೆ ರೈತರಿಗೆ ಮತ್ತು ಇಲಾಖೆಯ ನೌಕರರಿಗೆ

ತರಬೇತಿ ನೀಡಲು ಹಾಸನ ಜಿಲ್ಲೆಯಲ್ಲಿ ರೇಷ್ಮೆ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದೆ.

59. ಮೈಸೂರು ರೇಷ್ಮೆ ನೇಯ್ಗೆ ಕಾರ್ಖಾನೆ ಆವರಣದಲ್ಲಿ 24 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಎರಡನೇ ಸಂಘಟಿತ ನೇಯ್ಗೆ ಕಾರ್ಖಾನೆಯನ್ನು ಸ್ಥಾಪಿಸಲು ಕರ್ನಾಟಕ ರೇಷ್ಮೆ ಉದ್ಯಮ ನಿಗಮಕ್ಕೆ (KSIC) 5 ಕೋಟಿಗಳ ರೂ.ಗಳ ಅನುದಾನ ನೀಡಲಾಗುವುದು.

60. 2017–18ನೇ ಸಾಲಿನಲ್ಲಿ ರೇಷ್ಮೆ ಇಲಾಖೆಗೆ ಒಟ್ಟಾರೆಯಾಗಿ 429 ಕೋಟಿ ರೂ. ಒದಗಿಸಲಾಗಿದೆ.

## ಮೀನುಗಾರಿಕೆ

61. **ಕಳೆದ 4 ವರ್ಷಗಳ ಸಾಧನೆಗಳು**

- ಕರ್ನಾಟಕ ರಾಜ್ಯದ ಮೀನು ಉತ್ಪಾದನೆಯು 2012–13ನೇ ಸಾಲಿನಲ್ಲಿ 5.26 ಲಕ್ಷ ಮೆ.ಟನ್‌ನಿಂದ 2015–16ನೇ ಸಾಲಿಗೆ 5.81 ಲಕ್ಷ ಮೆ.ಟನ್‌ಗೆ (ಶೇ.10.4ರಷ್ಟು) ಹೆಚ್ಚಾಗಿರುತ್ತದೆ. ರಾಜ್ಯವು ಮೀನು ಉತ್ಪಾದನೆಯಲ್ಲಿ ದೇಶದಲ್ಲಿ 6ನೇ ಸ್ಥಾನದಲ್ಲಿರುತ್ತದೆ.

- 4404 ಕೋಟಿ ರೂ. ಮೌಲ್ಯದ 4 ಲಕ್ಷ ಟನ್‌ನಷ್ಟು ಮೀನು ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ.

- ಕರಾವಳಿಯ ಯಾಂತ್ರೀಕೃತ ಮೀನುಗಾರಿಕೆಗೆ ಸಹಾಯಕವಾಗುವಂತೆ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಒತ್ತಾಸೆ ನೀಡಲಾಗಿದೆ. ಈ ಅವಧಿಯಲ್ಲಿ ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳ ನಿರ್ಮಾಣ, ಹೂಳೆತ್ತುವಿಕೆ, ಮೀನುಗಾರಿಕೆ ಸಂಪರ್ಕ ಕೊಂಡಿರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣಕ್ಕೆ ಒಟ್ಟು 225 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

- ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸಲು 1.5 ಲಕ್ಷ ಕಿ.ಲೀ ಡೀಸೆಲ್‌ನ್ನು ಮಾರಾಟ ತೆರಿಗೆ ರಹಿತವಾಗಿ ನೀಡಲಾಗುತ್ತಿತ್ತು. 2015–16ನೇ ಸಾಲಿನಿಂದ ಡೀಸೆಲ್ ಮೇಲಿನ ಮಾರಾಟ ತೆರಿಗೆಗೆ ಸಮನಾದ 184 ಕೋಟಿ ರೂ.ಗಳ ಮೊತ್ತವನ್ನು ಸಹಾಯಧನವಾಗಿ 3,500 ಮೀನುಗಾರಿಕೆ ಯಾಂತ್ರೀಕೃತ ದೋಣಿ ಮಾಲೀಕರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

62. ಮಲ್ಪೆ ಮತ್ತು ಮಂಗಳೂರು ಮೀನುಗಾರಿಕೆ ಬಂದರುಗಳ ದೋಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದರಿಂದ ಅವುಗಳ ದಟ್ಟಣಿಯನ್ನು ನಿರ್ವಹಿಸಲು ಅಂದಾಜು 5 ಕೋಟಿ ರೂ.ಗಳ ವೆಚ್ಚದಲ್ಲಿ ದೋಣಿಗಳ ಸುರಕ್ಷಿತ ಇಳಿದಾಣಕ್ಕಾಗಿ 75 ಮೀ. ಉದ್ದದವರೆಗೆ ಜಟ್ಟಿ ವಿಸ್ತರಣೆಯನ್ನು ಕೈಗೊಳ್ಳಲಾಗುವುದು.

63. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ರಾಜ್ಯಾದ್ಯಂತ ಇರುವ ಪ್ರಮುಖ ಕೆರೆಗಳಲ್ಲಿ 2,500 ಹೆಕ್ಟೇರ್ ಪ್ರದೇಶದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲು ಪ್ರಸ್ತಾಪಿಸಿದೆ. ಇದಕ್ಕಾಗಿ 6.75 ಕೋಟಿ ರೂ.ಗಳನ್ನು ನೀಡಲಾಗುವುದು.

64. ಸಾಕಷ್ಟು ನೀರಿನ ಸಂಪನ್ಮೂಲವುಳ್ಳ ಜಮೀನು ಹೊಂದಿರುವ ಕೃಷಿಕರಿಗೆ ಅವರ ಜಮೀನುಗಳಲ್ಲಿ ಕೊಳ ನಿರ್ಮಿಸಿ ಸಾಂದ್ರೀಕೃತ ಮೀನು ಕೃಷಿ ಕೈಗೊಳ್ಳಲು ಉತ್ತೇಜನ ನೀಡಲಾಗುವುದು. ಹೂಡಿಕೆ ವೆಚ್ಚ ಸೇರಿದಂತೆ ಮೀನು ಕೊಳ ನಿರ್ಮಾಣದ ಘಟಕ ವೆಚ್ಚ 8.50 ಲಕ್ಷ ರೂ. ಹಾಗೂ ಗರಿಷ್ಠ 4.25 ಲಕ್ಷ ರೂ.ಗೆ ಒಳಪಟ್ಟು ಶೇ.50 ರಷ್ಟು ಸಹಾಯಧನ ನೀಡಿ ಮೀನು ಕೃಷಿಗೆ ಉತ್ತೇಜನ ನೀಡಲಾಗುವುದು.

65. ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳೊಂದಿಗೆ ಕನಿಷ್ಠ 500 ಚದರಡಿಯ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲು ಅಂದಾಜು 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಸಹಾಯಧನವನ್ನು ಒದಗಿಸುವ ಮೂಲಕ

ನೆರವು ನೀಡಲು ಪ್ರಸ್ತಾಪಿಸಿದೆ. ಪ್ರಾರಂಭಿಕವಾಗಿ 20 ಕಟ್ಟಡಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

66. ಕಡಲ ತೀರದ 3 ಜಿಲ್ಲೆಗಳಲ್ಲಿ 200 ಮಂಜುಗಡ್ಡೆ ಸ್ಥಾವರಗಳಿಗೆ ಹಾಗೂ 35 ಶೈತ್ಯಾಗಾರಗಳಿಗೆ ನೆರವು ನೀಡಲು ಪ್ರಸ್ತುತ ವಿದ್ಯುಚ್ಛಕ್ತಿ ಮೇಲೆ ನೀಡುವ ಸಹಾಯಧನ ಪ್ರತಿ ಯುನಿಟ್‌ಗೆ ರೂ.1.50 ಇರುವುದನ್ನು ಪ್ರತಿ ಯುನಿಟ್‌ಗೆ ರೂ.1.75ಗೆ ಹೆಚ್ಚಿಸಲು ಹಾಗೂ ಪ್ರತಿ ವರ್ಷ ಪ್ರತಿ ಸ್ಥಾವರಕ್ಕೆ ಇರುವ ಈಗಿನ ಮಿತಿ 3 ಲಕ್ಷ ರೂ.ಗಳಿಂದ 3.50 ಲಕ್ಷ ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಿದೆ. ಇದಕ್ಕಾಗಿ 6 ಕೋಟಿ ರೂ.ಗಳನ್ನು ಒದಗಿಸಲಾಗುವುದು.

67. "ಮತ್ಸ್ಯಾಶ್ರಯ ಯೋಜನೆ" ಅಡಿಯಲ್ಲಿ ಮೀನುಗಾರಿಕೆ ಇಲಾಖೆಯು 3000 ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಈ ಯೋಜನೆಯನ್ನು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು.

68. 2017–18ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 337 ಕೋಟಿ ರೂ. ಒದಗಿಸಲಾಗಿದೆ.

## ಸಹಕಾರ

### 69. ಕಳೆದ ನಾಲ್ಕು ವರ್ಷಗಳ ಸಾಧನೆಗಳು

- 2012–13ನೇ ಸಾಲಿನಲ್ಲಿ ಸಹಕಾರ ಸಂಘಗಳ ಮೂಲಕ 16.7 ಲಕ್ಷ ರೈತರಿಗೆ 6560 ಕೋಟಿ ರೂ. ಗಳ ಕೃಷಿ ಸಾಲವನ್ನು ವಿತರಿಸಲಾಗಿದೆ. 2016–17ನೇ ಸಾಲಿನಲ್ಲಿ 23.5 ಲಕ್ಷ ರೈತರಿಗೆ 11,500 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ 6.8 ಲಕ್ಷ ಹೊಸ ರೈತರಿಗೆ 4940 ಕೋಟಿ ರೂ. ಹೆಚ್ಚಿಗೆ ಕೃಷಿ ಸಾಲ ವಿತರಿಸಲಾಗಿದೆ. 2013–14 ನೇ ಸಾಲಿನಿಂದ 1 ಲಕ್ಷ ರೂ.ಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ವಿತರಿಸುತ್ತಿರುವ ಅಲ್ಪಾವಧಿ ಕೃಷಿ ಸಾಲಗಳ ಮಿತಿಯನ್ನು 2 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. 2014–15ನೇ ಸಾಲಿನಿಂದ ಈ ಮಿತಿಯನ್ನು 3 ಲಕ್ಷ ರೂ.ಗಳಿಗೆ ಹೆಚ್ಚಿಸುವ ಮುಖಾಂತರ ನಮ್ಮ ಸರ್ಕಾರ ರೈತ ಸಮುದಾಯಕ್ಕೆ ನೆರವಾಗಿದೆ.

- ಕಳೆದ 2 ವರ್ಷಗಳಲ್ಲಿ ತೀವ್ರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತರ ನೆರವಿಗೆ ಧಾವಿಸಲು 2 ಯೋಜನೆಗಳನ್ನು ಜಾರಿ ಮಾಡಲಾಗಿದೆ. 2015–16ನೇ ಸಾಲಿನಲ್ಲಿ ರೈತರು ಸಹಕಾರ ಸಂಘಗಳಿಗೆ ಪಾವತಿಸಬೇಕಾದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಕಂತುಗಳನ್ನು ಒಂದು ವರ್ಷದ ಅವಧಿಗೆ ಮುಂದೂಡಲಾಗಿದೆ. ಇದರಿಂದ 2 ಲಕ್ಷ ರೈತರಿಗೆ 45 ಕೋಟಿ ರೂ. ಗಳ ಬಡ್ಡಿ ಸಹಾಯಧನವನ್ನು ಸರ್ಕಾರದಿಂದಲೇ

ಭರಿಸಲಾಗಿದೆ. ದಿನಾಂಕ: 30.09.2015ಕ್ಕೆ ಇದ್ದ ಎಲ್ಲಾ ಬಗೆಯ ಸುಸ್ತಿ ಕೃಷಿ ಸಾಲಗಳನ್ನು ಸಹಕಾರ ಸಂಘಗಳಿಗೆ ಮರುಪಾವತಿಸಲು ದಿನಾಂಕ 30.09.2016 ರವರೆಗೆ ಕಾಲಾವಕಾಶವನ್ನು ನೀಡಿದ್ದು, 2016–17ನೇ ಸಾಲಿನಲ್ಲಿಯೂ ಬರ ಪರಿಸ್ಥಿತಿ ಮುಂದುವರೆದಿರುವುದರಿಂದ ಸಾಲ ಮರುಪಾವತಿ ಅವಧಿಯನ್ನು ದಿನಾಂಕ:31.03.2017ರವರೆಗೆ ವಿಸ್ತರಿಸಲಾಗಿದೆ. ಇದರಿಂದಾಗಿ 74,525 ರೈತರಿಗೆ 125 ಕೋಟಿ ರೂ.ಗಳ ಬಡ್ಡಿ ಮನ್ನಾ ಸೌಲಭ್ಯ ದೊರೆಯಲಿದೆ.

- ದಿನಾಂಕ 01.07.2011 ರಿಂದ 25.07.2012 ರವರೆಗೆ ಸಹಕಾರ ಸಂಘಗಳಿಂದ ರೈತರು ಪಡೆದ ಬೆಳೆ ಸಾಲದ ಪೈಕಿ 25,000 ರೂ.ಗಳ ರವರೆಗಿನ ಸಾಲವನ್ನು ಮನ್ನಾ ಮಾಡಲಾಗಿತ್ತು. ಆ ಅವಧಿಯಲ್ಲಿ 4 ಲಕ್ಷ ರೈತರಿಗೆ 940 ಕೋಟಿ ರೂ. ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ 10.7 ಲಕ್ಷ ರೈತರಿಗೆ ಸಂಬಂಧಿಸಿದಂತೆ 2,359 ಕೋಟಿ ರೂ.ಗಳ ಸಾಲ ಮನ್ನಾ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.

- ಯಶಸ್ವಿನಿ ಯೋಜನೆಯು 2014–15ನೇ ಸಾಲಿನಿಂದ ನಗರ ಸಹಕಾರಿಗಳಿಗೂ ವಿಸ್ತರಿಸಲಾಗಿದೆ. ಈ ಯೋಜನೆಯಡಿ ಕಳೆದ ನಾಲ್ಕು ವರ್ಷಗಳಲ್ಲಿ 163 ಲಕ್ಷ ಸದಸ್ಯರನ್ನು ನೋಂದಣಿ ಮಾಡಲಾಗಿದೆ. 5.9 ಲಕ್ಷ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆ ಹಾಗೂ

7.8 ಲಕ್ಷ ಫಲಾನುಭವಿಗಳಿಗೆ ಹೊರರೋಗಿ ಚಿಕಿತ್ಸೆಯನ್ನು ಒದಗಿಸಿದ್ದು, ಇದಕ್ಕಾಗಿ ಒಟ್ಟು 831 ಕೋಟಿ ರೂ. ವೆಚ್ಚ ಮಾಡಲಾಗಿದೆ.

- ಕಳೆದ ನಾಲ್ಕು ವರ್ಷಗಳಲ್ಲಿ ವಿವಿಧ ಸಹಕಾರ ಸಂಸ್ಥೆಗಳಲ್ಲಿ ಬಿಪಿಎಲ್, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆ, ವಿಕಲಚೇತನರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದ 10 ಲಕ್ಷಕ್ಕೂ ಹೆಚ್ಚು ಸದಸ್ಯರನ್ನು 44 ಕೋಟಿ ರೂ. ವೆಚ್ಚದಲ್ಲಿ ನೋಂದಣಿ ಮಾಡಲಾಗಿದೆ.

- ನಮ್ಮ ಸರ್ಕಾರದ ಅವಧಿಯಲ್ಲಿ ವ್ಯಕ್ತಿಗತ ಸದಸ್ಯತ್ವ ಹೊಂದಿರುವ ಎಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಳಿಗಳಲ್ಲಿ ಈ ಹಿಂದೆ ಇದ್ದಂತಹ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಸದಸ್ಯರಿಗೆ ಒಂದು ಸ್ಥಾನ ಹಾಗೂ ಹಿಂದುಳಿದ ವರ್ಗದವರಿಗೆ ಒಂದು ಸ್ಥಾನ ಮೀಸಲಾತಿ ಇದ್ದುದ್ದನ್ನು ಬದಲಿಸಿ, ಪರಿಶಿಷ್ಟ ಜಾತಿ ಸದಸ್ಯರಿಗೆ ಒಂದು ಮತ್ತು ಪರಿಶಿಷ್ಟ ಪಂಗಡ ಸದಸ್ಯರಿಗೆ ಒಂದು ಸ್ಥಾನ ಹಾಗೂ ಹಿಂದುಳಿದ ವರ್ಗದ ಸದಸ್ಯರಿಗೆ ಎರಡು ಸ್ಥಾನಗಳನ್ನು ಮೀಸಲಿರಿಸಿದ್ದು, ಇದರಿಂದಾಗಿ ಈ ವರ್ಗದ ಸದಸ್ಯರು ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ.

- 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಕೃಷಿ ಮಾರುಕಟ್ಟೆ ಸುಧಾರಣಾ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ

ತರಲಾಗಿದೆ. ಅದರನ್ವಯ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಆನ್‌ಲೈನ್ ಮಾರಾಟ ವ್ಯಾಪ್ತಿಗೆ ತರಲಾಗಿದ್ದು. ರಾಜ್ಯದ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ ಈಗಾಗಲೇ 156 ಸಮಿತಿಗಳನ್ನು ಏಕೀಕೃತ ಮಾರಾಟ ವೇದಿಕೆಗೆ ಜೋಡಣೆ ಮಾಡಲಾಗಿದೆ. ಏಕೀಕೃತ ಮಾರುಕಟ್ಟೆ ವ್ಯವಸ್ಥೆಯು ದೇಶಕ್ಕೆ ಮಾದರಿಯಾಗಿದೆ.

- ಕಳೆದ ಆಯವ್ಯಯದಲ್ಲಿ ಘೋಷಿಸಿದಂತೆ, ಮಹಿಳಾ ಸಬಲೀಕರಣ ಪ್ರಕ್ರಿಯೆಯ ಪ್ರಮುಖ ಹಂತವಾಗಿ ಪ್ರತಿ ಎಪಿಎಂಸಿ ಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು 1 ರಿಂದ 3 ಕ್ಕೆ ಹೆಚ್ಚಿಸಲಾಗಿದೆ.

- ರಾಜ್ಯದ ಪಿಕಾರ್ಡ್ ಬ್ಯಾಂಕುಗಳ ಮೂಲಕ ಕೃಷಿ ಉದ್ದೇಶಕ್ಕಾಗಿ ತೋಡು ಬಾವಿ ಮತ್ತು ಕೊಳವೆ ಬಾವಿಗಳಿಗಾಗಿ ಸಾಲ ನೀಡಿದ್ದು, ವಿಫಲಗೊಂಡು ಸುಸ್ತಿಯಾಗಿರುವ 4622 ರೈತರ 11.76 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

70. ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಕೃಷಿ ಸಾಲ ಮತ್ತು ಶೇ.3ರ ಬಡ್ಡಿದರದಲ್ಲಿ 10 ಲಕ್ಷ ರೂ.ಗಳವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡಿಕೆ ಯೋಜನೆಯನ್ನು ಮುಂದುವರಿಸಲಾಗುವುದು. ಈ ಸಾಲಿನಲ್ಲಿ 25

ಲಕ್ಷ ರೈತರಿಗೆ 13,500 ಕೋಟಿ ರೂ.ಗಳ ಕೃಷಿ ಸಾಲಗಳನ್ನು ವಿತರಿಸುವ ಗುರಿಯನ್ನು ಹೊಂದಲಾಗಿದೆ.

71. ಆರ್ಥಿಕವಾಗಿ ಕಾರ್ಯಸಾಧುವೆನಿಸುವ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

72. ರಾಜ್ಯದ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಕಾರ ಸಂಘಗಳ ಮೂಲಕ ಶೇ.4ರ ಬಡ್ಡಿ ದರ ವಿತರಿಸಲಾಗುತ್ತಿರುವ ಸಾಲವನ್ನು ಈ ಸಾಲಿನಿಂದ ಶೂನ್ಯ ಬಡ್ಡಿದರದಲ್ಲಿ ವಿತರಿಸಲಾಗುವುದು.

73. ಇಂಟರ್‌ನೆಟ್ ಸಂಪರ್ಕ ಇರುವ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೆ ಡಿಸಿಸಿ ಬ್ಯಾಂಕ್‌ಗಳು ನಬಾರ್ಡ ಸಹಾಯದೊಂದಿಗೆ ಮೈಕ್ರೋ ಎಟಿಎಂ ಕಮ್ ಪಿಓಎಸ್ ಯಂತ್ರಗಳನ್ನು ಒದಗಿಸಲಿವೆ. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಶೇ.25 ರಷ್ಟು ನೆರವು ಒದಗಿಸಲಿದೆ.

74. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಈ ಕೆಳಕಂಡ ವಿಶೇಷ ಯೋಜನೆಗಳನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

- ಗದಗದಲ್ಲಿ ಈರುಳ್ಳಿ ಗೋದಾಮು ಸ್ಥಾಪನೆಗೆ 5 ಕೋಟಿ ರೂ.
- ಜಾನುವಾರು ಮಾರುಕಟ್ಟೆಗಳ ಸೌಲಭ್ಯಗಳ ಆಧುನೀಕರಣಕ್ಕೆ 5 ಕೋಟಿ ರೂ.

- ತರಕಾರಿ ಮಾರುಕಟ್ಟೆಗಳಿಗೆ ಕ್ರೇಟ್, ಟ್ರಾಲಿ, ಇಲೆಕ್ಟ್ರಾನಿಕ್ ತೂಕದ ಯಂತ್ರಗಳಂತಹ ಅತ್ಯಾಧುನಿಕ ಸೌಲಭ್ಯ ಒದಗಿಸಲು 5 ಕೋಟಿ ರೂ.

75. 2017–18ನೇ ಸಾಲಿನಲ್ಲಿ ಸಹಕಾರ ಇಲಾಖೆಗೆ ಒಟ್ಟಾರೆಯಾಗಿ 1,663 ಕೋಟಿ ರೂ. ಒದಗಿಸಲಾಗಿದೆ.

## ಜಲಸಂಪನ್ಮೂಲ

76. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- 2013–14 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ನೀರಾವರಿ ವಲಯದಲ್ಲಿ ಮುಂದಿನ 5 ವರ್ಷಗಳಲ್ಲಿ 50,000 ಕೋಟಿ ರೂ. ಅನುದಾನ ಒದಗಿಸುವುದಾಗಿ ಘೋಷಿಸಲಾಗಿತ್ತು. ಅದರಂತೆ ಕಳೆದ 4 ವರ್ಷಗಳಲ್ಲಿ ನೀರಾವರಿ ವಲಯಕ್ಕೆ 48,096 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. 6.2 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ, ಮತ್ತು 4.4 ಲಕ್ಷ ಎಕರೆ ಕ್ಷೇತ್ರಕ್ಕೆ ಹೊಲಗಾಲುವೆ ನಿರ್ಮಿಸಲಾಗಿದೆ.

- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ ಬರುವ ಎಲ್ಲಾ ಉಪ ಯೋಜನೆಗಳ ಕಾಮಗಾರಿಗಳಲ್ಲಿ 5 ಮುಖ್ಯ ಸ್ಥಾವರಗಳು ಹಾಗೂ ಸುಮಾರು 437 ಕಿ.ಮೀ. ಮುಖ್ಯ /

ಶಾಖಾ ಕಾಲುವೆ ನಿರ್ಮಾಣದ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ. ಇದುವರೆಗೂ 5,076 ಕೋಟಿ ರೂ. ವೆಚ್ಚ ಮಾಡಲಾಗಿರುತ್ತದೆ.

- ರಾಮಥಾಳ ಹಂತ–2 ಯೋಜನೆಯು ಹನಿ ನೀರಾವರಿ ಅಳವಡಿಸಿ ನೀರಾವರಿ ಸೌಲಭ್ಯ ಕಲ್ಪಿಸುವ ಪ್ರಮುಖ ಯೋಜನೆಯಾಗಿದ್ದು, ಇದರಡಿಯಲ್ಲಿ ಸುಮಾರು 24,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗುತ್ತಿದ್ದು, ಯೋಜನೆಯು ಲೋಕಾರ್ಪಣೆಗೆ ಸಿದ್ದವಾಗಿದೆ.

- ಎತ್ತಿನಹೊಳೆ ಯೋಜನೆಯ ಏತ ನೀರಾವರಿ ಕಾಮಗಾರಿಗಳಡಿಯಲ್ಲಿ, 8 ವಿಯರ್ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಉಳಿದ 6 ಕಾಮಗಾರಿಗಳ ಪ್ರಗತಿ ವಿವಿಧ ಹಂತದಲ್ಲಿದೆ. 34 ಕಿ.ಮೀ ಉದ್ದದ ರೈಸಿಂಗ್ ಮೈನ್ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

- ಕಾವೇರಿ ಕೊಳ್ಳದಡಿ ಶತಮಾನದಷ್ಟು ಹಳೆಯದಾದ 23 ಅಣೆಕಟ್ಟು ನಾಲೆಗಳ ಆಧುನೀಕರಣವನ್ನು 1,588 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಂಡಿದ್ದು, ಈ ಪೈಕಿ 13 ಕಾಮಗಾರಿಗಳು ಪೂರ್ಣಗೊಂಡಿವೆ.

- 1,614 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ 19 ಹೊಸ ನಾಲಾ ಕಾಮಗಾರಿಗಳಲ್ಲಿ, 810 ಕೋಟಿ ರೂ.ಗಳ 8 ಕಾಮಗಾರಿಗಳು ಪೂರ್ಣಗೊಳಿಸಲಾಗಿದ್ದು, ಉಳಿದ 11 ಕಾಮಗಾರಿಗಳು ಪ್ರಗತಿಯಲ್ಲಿವೆ.

77. **2017–18ನೇ ಸಾಲಿನಲ್ಲಿ 6,000 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಈ ಕೆಳಕಂಡ ಅನುಮೋದಿತ ಯೋಜನೆಗಳನ್ನು ಕೈಗೊಳ್ಳಲಾಗುವುದು**.

- ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯಡಿ SCADA Based Automation ಅನುಷ್ಠಾನ.
- ಕೆಂಪವಾಡ (ಬಸವೇಶ್ವರ) ಏತ ನೀರಾವರಿ ಯೋಜನೆ.
- ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಲವಾರ ಬಂಡಿ ಏತ ನೀರಾವರಿ ಯೋಜನೆ.
- ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ.
- ಪಿರಿಯಾಪಟ್ಟಣದ ಮುತ್ತಿನಮುಳಿಸೋಗೆ ಗ್ರಾಮದ ಕೆರೆ ತುಂಬಿಸುವ ಯೋಜನೆ.
- ಕನಕಪುರ ತಾಲ್ಲೂಕಿನ ಗರಳಾಪುರ ಮತ್ತು ಇತರೆ 12 ಕೆರೆ ತುಂಬಿಸುವ ಯೋಜನೆ.

- ಮದ್ದೂರು ತಾಲ್ಲೂಕಿನ 6 ಏತ ನೀರಾವರಿ ಯೋಜನೆಗಳ ಪುನಶ್ಚೇತನ ಮತ್ತು 16 ಕೆರೆಗಳನ್ನು ತುಂಬಿಸುವ ಯೋಜನೆ.
- ಹನಗೋಡು ಸರಣಿ ನಾಲೆಗಳ ಆಧುನೀಕರಣ.
- ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳನ್ನು ತುಂಬಿಸುವ ಯೋಜನೆ.
- ನಂಜನಗೂಡು ತಾಲ್ಲೂಕಿನ ಹುರ ಮತ್ತು 25 ಕೆರೆಗಳನ್ನು ತುಂಬಿಸುವ ಯೋಜನೆ.
- ಗುರುಮಿಠಕಲ್ ಮತ್ತು ಯಾದಗಿರಿ ತಾಲ್ಲೂಕುಗಳ ಯರಗೋಳ ಮತ್ತು ಇತರೆ 5 ಕೆರೆಗಳನ್ನು ತುಂಬಿಸುವ ಯೋಜನೆ.
- ಮುದ್ದೇಬಿಹಾಳ ತಾಲ್ಲೂಕಿನ 20,472 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪೀರಾಪುರ–ಬೂದಿಹಾಳ್ ಏತ ನೀರಾವರಿ ಯೋಜನೆ.
- ಇಂಡಿ ತಾಲ್ಲೂಕಿನ 9,278 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಚಡಚಣ ಏತ ನೀರಾವರಿ ಯೋಜನೆ.
- ನಂದವಾಡಗಿ ಏತ ನೀರಾವರಿ ಯೋಜನೆ.

- ಕೊಪ್ಪಳ ಹಾಗೂ ಸಿಂಗಟಾಲೂರು ಏತ ನೀರಾವರಿ ಯೋಜನೆಗಳಡಿ ಪ್ರಸಕ್ತ ಸಾಲಿನಲ್ಲಿ 20,000 ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಲು ಕ್ರಮ.
- ಎತ್ತಿನ ಹೊಳೆ ಯೋಜನೆಯಡಿ ಈಗಾಗಲೇ ಕೈಗೆತ್ತಿಕೊಂಡಿರುವ lift component ಅನ್ನು ಪೂರ್ಣಗೊಳಿಸಿ ನೀರನ್ನು ಎತ್ತಲು ಕ್ರಮ ಕೈಗೊಳ್ಳಲಾಗುವುದು. ಬೈರಗೊಂಡ್ಲು ಜಲಾಶಯ ನಿರ್ಮಾಣ ಪ್ರಾರಂಭ ಹಾಗೂ ಕಾಲುವೆ ಕಾಮಗಾರಿಗಳನ್ನು (Conveyance) ಪ್ರಾರಂಭಿಸಲಾಗುವುದು.
- 2017–18ನೇ ಸಾಲಿನಲ್ಲಿ 68,264 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ 35,000 ಹೆಕ್ಟೇರ್ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಾಣ, 28,000 ಹೆಕ್ಟೇರ್ ಪ್ರದೇಶಕ್ಕೆ ಬಸಿಗಾಲುವೆ ನಿರ್ಮಾಣ ಮತ್ತು 12,500 ಹೆಕ್ಟೇರ್ ಪ್ರದೇಶದ ಸವಳು–ಜವಳು ಭೂಮಿ ಅಭಿವೃದ್ಧಿ.

## 2017–18 ನೇ ಸಾಲಿಗೆ ಪ್ರಸ್ತಾಪಿಸಲಾದ ಹೊಸ ಯೋಜನೆಗಳು

78. 2017–18ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅಂದಾಜು ಮೊತ್ತ 3000 ಕೋಟಿ ರೂ. ಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

(1) ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆ.

(2) ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಯಳ್ಳಿಗುತ್ತಿ ಗ್ರಾಮಕ್ಕೆ ನೀರು ಒದಗಿಸುವ ಯೋಜನೆ

(3) ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಯ ಯಾದಗಿರ, ಚೋಳದಹೆಡಗಿ–ಗೂಡುರ, ಘತ್ತರಗಾ ಹಾಗೂ ಕಲ್ಲೂರು–ಬಿ ಬ್ಯಾರೇಜುಗಳಿಗೆ ಆಧುನಿಕ ಗೇಟ್‌ಗಳ ಅಳವಡಿಕೆ ಮತ್ತು ಪುನಶ್ಚೇತನ ಕಾಮಗಾರಿಗಳು

(4) ಸನ್ನತಿ ಯೋಜನೆ ಮೂಲಕ ಯಾದಗಿರಿ ತಾಲ್ಲೂಕಿನ 35 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ

(5) ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ

(6) ಬಸವಕಲ್ಯಾಣ ತಾಲ್ಲೂಕಿನ ಕೊಂಗಳಿ ಬ್ಯಾರೇಜಿನಿಂದ ನೀರನ್ನು ಎತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆ.

(7) ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ. 60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (Supplemental) ಯೋಜನೆ.

(8) ಕಲಬುರಗಿ ಜಿಲ್ಲೆಯ ಗಂಡೋರಿನಾಲ ಮತ್ತು ಮುಲ್ಲಾಮಾರಿ ಮೇಲ್ದಂಡೆ ಯೋಜನೆಗಳ ಆಧುನೀಕರಣ.

(9) ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ.

(10) ಹಾವೇರಿ ಜಿಲ್ಲೆ ರಾಣೇಬೆನ್ನೂರು ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆ.

(11) ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯಿಂದ ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ.

(12) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ಕೆರೆಯಿಂದ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಬಹುಗ್ರಾಮ ಕೆರೆಗಳಿಗೆ ಕುಮದ್ವತಿ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

(13) ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಬಳಿ ತುಂಗಭದ್ರಾ ನದಿಯಿಂದ ಕೆರೆಗಳನ್ನು ತುಂಬಿಸುವ ಯೋಜನೆ.

(14) ಮಾಲವಿ ಜಲಾಶಯದ ಒಳ ಹರಿವಿನ ಕೊರತೆ ಸರಿದೂಗಿಸಲು ತುಂಗಭದ್ರಾ ನದಿಯಿಂದ ನೀರು ಪೂರೈಕೆ ಮಾಡುವ ಯೋಜನೆ.

(15) ಹರಪನಹಳ್ಳಿ ತಾಲ್ಲೂಕಿನ 60 ಕೆರೆಗಳನ್ನು ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆ.

(16) ಬೆಳಗಾವಿ ಜಿಲ್ಲೆಯ ಕಿತ್ತೂರು ಮತಕ್ಷೇತ್ರದ ಕೆರೆಗಳಿಗೆ ಮಲಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆ.

(17) ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಕುಡಚಿ ಮತಕ್ಷೇತ್ರದಡಿ ಬರುವ 10 ಗ್ರಾಮಗಳ 19 ಕೆರೆಗಳಿಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ.

(18) ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಬರಪೀಡಿತ ತಡಕೋಡ, ಬೋಕಾಪುರ, ಗರಗ, ಹಳೇಟೆಗೂರ, ಬೊಗೂರ ಮತ್ತು ನೀರಲಕಟ್ಟಿ ಗ್ರಾಮಗಳ ಕೆರೆಗಳನ್ನು ತುಪರಿ ಹಳ್ಳದಿಂದ ತುಂಬಿಸುವ ಯೋಜನೆ.

(19) ಭೀಮಾ ನದಿಯಿಂದ ಹೆಚ್ಚುವರಿ ನೀರನ್ನು ಅಮರ್ಜಾ ಜಲಾಶಯಕ್ಕೆ ತುಂಬಿಸುವ ಯೋಜನೆ.

(20) ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಶ್ರೀರಾಮದೇವರ ಅಣೆಕಟ್ಟಿನ ಪುನರ್ ನಿರ್ಮಾಣ.

(21) ಕಾವೇರಿ ಕೊಳ್ಳದಡಿಯಲ್ಲಿ ಒಟ್ಟು 374 ಕಿ.ಮೀ. ಉದ್ದದ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು 509.55 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

- ಹಾರಂಗಿ ಎಡದಂಡೆ ನಾಲೆಯ ಸರಪಳಿ 27.083 ಕಿ.ಮೀ ರಿಂದ 149.38 ಕಿ.ಮೀ ವರೆಗಿನ ಆಧುನೀಕರಣ.
- ಕಣ್ವ ನಾಲೆಗಳ ಆಧುನೀಕರಣ.
- ಕೆ.ಆರ್.ಎಸ್. ಯೋಜನೆಯ ಆರ್.ಬಿ.ಎಲ್.ಎಲ್. ಆಧುನೀಕರಣ.
- ಮಾರ್ಕೋನಹಳ್ಳಿ ಎಡ ಮತ್ತು ಬಲದಂಡೆ ನಾಲೆ ಆಧುನೀಕರಣ.
- ಡಿ.ಡಿ.ಅರಸು ನಾಲೆ ಕಿ.ಮೀ. 0.00 ರಿಂದ 75 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿ.
- ಕೊಳ್ಳೆಗಾಲ ತಾಲ್ಲೂಕಿನ ಸರ್. ಕಾಟನ್ ನಾಲೆಗಳು, ಹಂಪಾಪುರ ಮತ್ತು ಗುಪ್ಪಮ್ಮ ನಾಲೆಗಳ ಅಭಿವೃದ್ಧಿ.
- ಹಾರೋಹಳ್ಳಿ ಮೇಲ್ಮಟ್ಟದ ನಾಲೆಯ ಆಧುನೀಕರಣ.
- ಮಳವಳ್ಳಿ ತಾಲ್ಲೂಕು ಹೆಬ್ಬಳ್ಳ ಚೆನ್ನಯ್ಯ ನಾಲೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ಹೆಬ್ಬಳ್ಳದಿಂದ ಏತನೀರಾವರಿ ಕಾಮಗಾರಿ.

79. ತೀವ್ರ ಬರಗಾಲವನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಮೋಡ ಬಿತ್ತನೆ ಕಾರ್ಯವನ್ನು ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 30 ಕೋಟಿ ರೂ.ಗಳನ್ನು ಒದಗಿಸಲಾಗುವುದು.

80. 2017–18ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಗೆ ಒಟ್ಟಾರೆಯಾಗಿ 15,929 ಕೋಟಿ ರೂ. ಒದಗಿಸಲಾಗಿದೆ.

## ಸಣ್ಣ ನೀರಾವರಿ

81. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- 2013–14 ರಿಂದ 2016–17 ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ 5,236 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ. ಇದರಿಂದ 1.14 ಲಕ್ಷ ಹೆಕ್ಟೇರ್ ಹೊಸ ಅಚ್ಚುಕಟ್ಟು ಸೃಜಿಸಲಾಗಿದೆ. 46,398 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಮರುಕಲ್ಪಿಸಿದೆ.

- 2014–15ನೇ ಸಾಲಿನಲ್ಲಿ ಅಂತರ್ಜಲ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಹಳ್ಳಗಳಿಗೆ ಚೆಕ್‌ಡ್ಯಾಂ/ ಬ್ಯಾರೇಜ್‌ಗಳ ಕಾಮಗಾರಿಗಳನ್ನು 10 ಜಿಲ್ಲೆಗಳಲ್ಲಿ 200 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿದೆ.

- "ಕೆರೆಗಳ ಅಭಿವೃದ್ಧಿ ನಾಡಿನ ಶ್ರೇಯೋಭಿವೃದ್ಧಿ" ಎಂಬ ಯೋಜನೆಯಡಿಯಲ್ಲಿ ಒಟ್ಟಾರೆ 193 ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

- "ಸೂರ್ಯಜ್ಯೋತಿ ರೈತರ ಬಾಳಿನ ಪರಂಜ್ಯೋತಿ" ಎಂಬ ಕಾರ್ಯಕ್ರಮದಡಿಯಲ್ಲಿ ಆಯ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 14,436 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆದು ಸೌರಶಕ್ತಿ ಚಾಲಿತ ಪಂಪುಗಳನ್ನು ಅಳವಡಿಸಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

- ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 65 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯನ್ನು ಅಂದಾಜು ಮೊತ್ತ 883.5 ಕೋಟಿ ರೂ. ಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ.

- ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದನ್ನು 2016–17ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

**2017–18ನೇ ಸಾಲಿನ ಹೊಸ ಯೋಜನೆಗಳು**

82. ಕೆರೆಗಳ ಹೂಳೆತ್ತುವ "ಕೆರೆ ಸಂಜೀವಿನಿ" ಯೋಜನೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ

ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ಕಾರ್ಯಗತಗೊಂಡಿದೆ. ರಾಜ್ಯದಲ್ಲಿ ಸತತವಾಗಿ ಮರುಕಳಿಸುತ್ತಿರುವ ಬರಗಾಲ ಪರಿಸ್ಥಿತಿಯನ್ನು ಪರಿಹರಿಸಲು ಈ ಯೋಜನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳುವ ಉದ್ದೇಶದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ಕೆರೆಗಳನ್ನು ಸಹ ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ತಂದು ಕೆರೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ "ಕೆರೆ ಸಂಜೀವಿನಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಪ್ರಾಧಿಕಾರ ಕೈಗೊಳ್ಳುವ ಕಾಮಗಾರಿಗಳಿಗೆ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

83. ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು "ಪಶ್ಚಿಮ ವಾಹಿನಿ" ಯೋಜನೆಯಡಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

84. ಅಂತರ್ಜಲ ತೀವ್ರವಾಗಿ ಕುಸಿದಿರುವ ಜಿಲ್ಲೆಗಳಾದ ಬೀದರ್, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಹಾಸನಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಚೆಕ್‌ಡ್ಯಾಂಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

85. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಅಂತರ್ಜಲ ಅಭಿವೃದ್ಧಿ ಪಡಿಸುವ ವಿಶೇಷ ಯೋಜನೆಯನ್ನು ಕೈಗೊಳ್ಳಲಾಗುವುದು.

86. 2017–18ನೇ ಸಾಲಿನಲ್ಲಿ ನೀರಾವರಿ ಇಲಾಖೆಗೆ ಒಟ್ಟಾರೆಯಾಗಿ 2,099 ಕೋಟಿ ರೂ. ಒದಗಿಸಲಾಗಿದೆ.

**ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ**

87. **ಕಳೆದ 4 ವರ್ಷಗಳ ಸಾಧನೆಗಳು**

- ರಾಜ್ಯವು 407 ಹುಲಿಗಳು ಮತ್ತು 6072 ಆನೆಗಳ ಸಂಖ್ಯೆಯೊಂದಿಗೆ ರಾಷ್ಟ್ರದಲ್ಲಿ ಪ್ರಥಮ ಸ್ಥಾನದಲ್ಲಿದೆ.
- 2015ರ ಭಾರತದ ಅರಣ್ಯ ಸಮೀಕ್ಷೆಯ ವರದಿಯನ್ವಯ ಕರ್ನಾಟಕದಲ್ಲಿ 289 ಚ. ಕಿ.ಮೀ. ಅರಣ್ಯ ಹೊದಿಕೆ ಹೆಚ್ಚಾಗಿರುತ್ತದೆ.
- ಖಾಸಗಿ ಮತ್ತು ರೈತರ ಜಮೀನುಗಳಲ್ಲಿ ನೆಡಲು 10 ಕೋಟಿ ಸಸಿಗಳನ್ನು ವಿತರಿಸಲಾಗಿದೆ. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ 63,939 ಫಲಾನುಭವಿಗಳಿಗೆ ವಿತರಿಸಲಾದ ಸಸಿಗಳಲ್ಲಿ ಬದುಕುಳಿದ ಸಸಿಗಳಿಗೆ 29 ಕೋಟಿ ರೂ.ಗಳ ಪ್ರೋತ್ಸಾಹ ಧನವನ್ನು ನೀಡಲಾಗಿದೆ.

- ಎಸ್‌ಸಿಪಿ / ಟಿಎಸ್‌ಪಿ ಯೋಜನೆಗಳಡಿ 1.6 ಲಕ್ಷ LPG ಸಂಪರ್ಕ, 1,168 ಜೈವಿಕ ಅನಿಲ ಸ್ಥಾವರ ನಿರ್ಮಾಣ, 6,276 ಸೋಲಾರ್ ವಾಟರ್ ಹೀಟರ್‌ಗಳ ಅಳವಡಿಕೆ, 1,801 ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆ, 52,457 ಸೋಲಾರ್ ಲ್ಯಾಂಪ್‌ಗಳ ಅಳವಡಿಕೆ ಹಾಗೂ 18,561 ಸುಧಾರಿತ ಇಂಧನ ದಕ್ಷ ಸರಳ ಒಲೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ.

- ಅರಣ್ಯ ಹಕ್ಕು ಕಾಯ್ದೆಯಡಿ 13,049 ಜನರಿಗೆ ಹಕ್ಕುಪತ್ರವನ್ನು ವಿತರಿಸಿ, 42,901 ಎಕರೆ ಜಮೀನು ಅನುಭೋಗದ ಹಕ್ಕನ್ನು ಮಾನ್ಯ ಮಾಡಲಾಗಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

88. ವೃಕ್ಷ ಬೆಳೆಸಲು ಈ ಕೆಳಕಂಡ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು.

    - ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ 'ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನ'ಗಳನ್ನು ಅಭಿವೃದ್ಧಿಪಡಿಸಲಾಗುವುದು. ಮೊದಲ ಹಂತದಲ್ಲಿ ಅರಣ್ಯ ಭೂಮಿಯಲ್ಲಿ 50 ವೃಕ್ಷ ಉದ್ಯಾನಗಳನ್ನು (Tree Park) ಅಭಿವೃದ್ಧಿಪಡಿಸಲಾಗುವುದು.

    - ನೀಲಗಿರಿ ಮರಗಳಿಗೆ ಪರ್ಯಾಯ ಬೆಳೆಯಾಗಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 6 ಲಕ್ಷ ಶ್ರೀಗಂಧ

ಸಸಿಗಳನ್ನು ಬೆಳೆಸಲು ಮತ್ತು 700 ಹೆಕ್ಟೇರ್‌ಗಳ ಶ್ರೀಗಂಧ ನೆಡುತೋಪುಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ.

- ವನಮಹೋತ್ಸವಕ್ಕಾಗಿ ಎತ್ತರದ ಹಾಗೂ ಉತ್ತಮ ಗುಣಮಟ್ಟದ 6 ಕೋಟಿ ಸಸಿಗಳನ್ನು ಬೆಳೆಸಲಾಗುವುದು.

- ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅಡಿಯಲ್ಲಿ, ಬದುಕಿ ಉಳಿದ ಪ್ರತಿ ಸಸಿಗೆ ಪ್ರೋತ್ಸಾಹ ಧನವನ್ನು 45 ರೂ. ಗಳಿಂದ 100 ರೂ.ಗಳಿಗೆ ಹೆಚ್ಚಿಸಲಾಗುವುದು.

- ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ, 4,720 ಕಿ.ಮೀ. ರಸ್ತೆಯಲ್ಲಿ ಮತ್ತು ವಿವಿಧ ಯೋಜನೆಗಳ ಅಡಿಯಲ್ಲಿ, ಈ ಉದ್ದೇಶಕ್ಕಾಗಿ ಮೀಸಲಿರಿಸಿದ ರಸ್ತೆ ಅಂದಾಜು ವೆಚ್ಚದ ಶೇ.1 ರಷ್ಟು ಅನುದಾನದಲ್ಲಿ ರಸ್ತೆ ಬದಿ ನೆಡುತೋಪುಗಳನ್ನು ಬೆಳೆಸಲಾಗುವುದು.

89. ಎಲ್ಲಾ ನರ್ಸರಿಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲು "ನರ್ಸರಿ ಅಭಿವೃದ್ಧಿ ಏಜೆನ್ಸಿ" ಯನ್ನು ರಚಿಸಲು ಉದ್ದೇಶಿಸಿದೆ.

90. ಪರಿಸರ ಅಂಶಗಳ ಮೇಲೆ ಸಂಶೋಧನೆಯನ್ನು ನಡೆಸಲು ಖ್ಯಾತ ಕಾದಂಬರಿಕಾರ ಮತ್ತು ಪರಿಸರ ಪ್ರೇಮಿ ದಿವಂಗತ ಪೂರ್ಣಚಂದ್ರ ತೇಜಸ್ವಿಯವರ ಸ್ಮರಣಾರ್ಥ "ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ" ಸ್ಥಾಪಿಸಲು 5 ಕೋಟಿ ರೂ.ಗಳು ಮತ್ತು

ಬೆಂಗಳೂರು ಸಮೀಪ, ಬೆಂಗಳೂರು ಮೈಸೂರು ರಸ್ತೆಗೆ ಹೊಂದಿಕೊಂಡಂತಿರುವ ಚಿಕ್ಕಮಣ್ಣುಗುಡ್ಡ ಸಂಶೋಧನೆ ಕೇಂದ್ರದಲ್ಲಿ 5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅರಣ್ಯ ಮಾಹಿತಿ ಕೇಂದ್ರವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ.

91. ನೀರಿನ ಕೊರತೆಯ ಕಾರಣದಿಂದ ಜನವಸತಿ ಪ್ರದೇಶಗಳಿಗೆ ವನ್ಯ ಮೃಗಗಳ ವಲಸೆಯನ್ನು ತಡೆಗಟ್ಟಲು, 10 ಕೋಟಿ ರೂ.ಗಳ ವೆಚ್ಚದಲ್ಲಿ ಸ್ವಯಂಚಾಲಿತ ಸೋಲಾರ್ ವಿದ್ಯುತ್ ಪಂಪ್‌ಗಳ ಸಹಾಯದೊಂದಿಗೆ ದಟ್ಟ ಅರಣ್ಯದಲ್ಲಿ ಇರುವ 100 ಜಲಕಾಯಗಳನ್ನು ತುಂಬಲು ಉದ್ದೇಶಿಸಿದೆ.

92. 2017–18ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಗೆ ಒಟ್ಟಾರೆಯಾಗಿ 1,732 ಕೋಟಿ ರೂ. ಒದಗಿಸಲಾಗಿದೆ.

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

### 93. ಕಳೆದ 4 ವರ್ಷಗಳ ಸಾಧನೆಗಳು

- "ಪ್ರತಿಯೊಂದು ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬುದು ನಮ್ಮ ಸರ್ಕಾರದ ನೀತಿಯ ಗುರಿಯಾಗಿದ್ದು, ಶಿಕ್ಷಣದ ಗುಣಮಟ್ಟದ ಹೆಚ್ಚಳ, ಎಲ್ಲರಿಗೂ ಶಿಕ್ಷಣ ಕೈಗೆಟುಕುವಂತಾಗಿಸುವ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆ ಸುಧಾರಿಸುವತ್ತ ನಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಲಾಗಿದೆ. ಈ ಉದ್ದೇಶವನ್ನು ಸಾಧಿಸಲು ಶಿಕ್ಷಣದ ಗುಣಮಟ್ಟ

ಸುಧಾರಣಾ ಕಾರ್ಯಕ್ರಮ, ಗುಣಮಟ್ಟ ಭರವಸೆ ಉಪಕ್ರಮಗಳು, ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು ಮತ್ತು ವಿದ್ಯಾರ್ಥಿ ಪ್ರೇರಣಾ ಉಪಕ್ರಮಗಳನ್ನು ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ದುರ್ಬಲ ಮತ್ತು ಅವಕಾಶ ವಂಚಿತ ವರ್ಗಗಳ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಾವಕಾಶ ಒದಗಿಸಿ ಅವರ ಪಾಲಕರಿಗೆ ಗುಣಮಟ್ಟದ ಶಿಕ್ಷಣದ ತೃಪ್ತಿಯನ್ನು ಸರ್ಕಾರವು ಒದಗಿಸಿದೆ ಹಾಗೂ ಈ ಮಕ್ಕಳ ಶಾಲಾ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತಿದೆ. ಇಂತಹ ಮಕ್ಕಳಿಗೆ ಶಾಲೆಗಳನ್ನು ವ್ಯಾಪಕವಾಗಿ ಆಯ್ಕೆ ಮಾಡಲು ನೆರವಾಗುವಂತೆ ನೆರೆಹೊರೆಯ ಮಾನದಂಡಗಳನ್ನು ಸಡಿಲಿಸಲಾಗಿದೆ.

- ಸರ್ಕಾರ ಪ್ರತಿ ವರ್ಷ 63 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು, 47 ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು, 5 ಲಕ್ಷ ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ವಿತರಿಸುವುದರ ಜೊತೆಗೆ ಪ್ರತಿದಿನ 60 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಹಾಗೂ ವಾರದಲ್ಲಿ 3 ದಿನ ಹಾಲನ್ನು ವಿತರಿಸುತ್ತಿದೆ.

- ಎಲ್ಲಾ ಶಾಲೆಗಳಲ್ಲಿರುವ ಸುಮಾರು 1 ಕೋಟಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ಕಲಿಕಾ ಸಾಧನೆಗಳ ಉಸ್ತುವಾರಿಗೆ ಮಾಹಿತಿ

ತಂತ್ರಜ್ಞಾನ ಆಧಾರಿತ **"ಶಿಕ್ಷಣ ಕಿರಣ"** ಎಂಬ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ಪೂರಕ ಬೋಧನೆ ಅಗತ್ಯವಿರುವ ವಿದ್ಯಾರ್ಥಿಗಳನ್ನು ಗುರುತಿಸುವ ಸಲುವಾಗಿ ಸರ್ಕಾರಿ ಶಾಲೆಗಳ 4 ಮತ್ತು 6ನೇ ತರಗತಿ ವಿದ್ಯಾರ್ಥಿಗಳಿಗೆ ಬಾಹ್ಯ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ.

- 2016ರಲ್ಲಿ 7,911 ಶಿಕ್ಷಕರ ನೇಮಕಾತಿ ಮಾಡಲಾಗಿದೆ.
- ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನ/ ಅಕ್ಷರ ಪ್ರತಿಷ್ಠಾನ / ಶಿಕ್ಷಣ ಪ್ರತಿಷ್ಠಾನ/ ಸೆಂಟ್ರಲ್ ಸ್ಕ್ವೇರ್ ಫೌಂಡೇಶನ್ ಮತ್ತು ಪ್ರಥಮ್‌ದಂತಹ ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳೊಂದಿಗಿನ ಪರಿಣಾಮಕಾರಿ ಸಹಭಾಗಿತ್ವದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಹಾಗೂ ಶಿಕ್ಷಕರ ಸಾಮರ್ಥ್ಯವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

94. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರದ ಗುರಿ ಈಡೇರಿಸಲು ಸುಧಾರಣಾ ಕ್ರಮವಾಗಿ, ವಸ್ತುನಿಷ್ಠ, ಪಾರದರ್ಶಕವಾಗಿರುವ ಹಾಗೂ ಮೂಲ ಸೌಕರ್ಯ ಕುರಿತ ಮಾನದಂಡಗಳು, ಶುಲ್ಕ, ಬೋಧನಾ ಸಂಪನ್ಮೂಲಗಳು, ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸುರಕ್ಷತೆ, ಭದ್ರತೆಗಳ ಕುರಿತ ನಿಯಂತ್ರಣಗಳನ್ನೊಳಗೊಂಡ **ಕರ್ನಾಟಕ ಶಾಲಾ ಶಿಕ್ಷಣ ನೀತಿಯನ್ನು** ರೂಪಿಸಲಾಗುವುದು.

95. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಉತ್ತಮಪಡಿಸಲು ಈ ಕೆಳಗಿನ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

- ಅಭ್ಯಾಸ ಮತ್ತು ಚಟುವಟಿಕೆ ಪುಸ್ತಕಗಳ ಬಳಕೆ;
- 1 ರಿಂದ 8ನೇ ತರಗತಿಗಳವರೆಗೆ ವಸ್ತುನಿಷ್ಠ ಕಲಿಕಾ ಮೌಲ್ಯಮಾಪನ;
- ವಿಶ್ವಾಸ ಕಿರಣ – ಬೇಸಿಗೆ ಮತ್ತು ಇತರ ರಜಾ ಅವಧಿಗಳಲ್ಲಿ ಪೂರಕ ಬೋಧನೆ;
- 1 ರಿಂದ 10ನೇ ತರಗತಿಗಳವರೆಗೆ ಪರಿಷ್ಕೃತ ಪಠ್ಯಪುಸ್ತಕಗಳು ಮತ್ತು 9 ರಿಂದ 12 ತರಗತಿಗಳವರೆಗೆ ಆಯ್ದ ವಿಷಯಗಳಿಗೆ NCERT ಪಠ್ಯ ಪುಸ್ತಕಗಳ ಅಳವಡಿಕೆ.
- 1ನೇ ತರಗತಿಯಿಂದ ಆಂಗ್ಲ ಭಾಷೆಯ ಪರಿಣಾಮಕಾರಿ ಬೋಧನೆ:
- ಗ್ರಾಮ ಪಂಚಾಯಿತಿ ಕೇಂದ್ರಸ್ಥಾನದಲ್ಲಿ 12ನೇ ತರಗತಿವರೆಗೆ 176 ಸಂಯೋಜಿತ ಶಾಲೆಗಳು.
- ಹೆಚ್ಚುವರಿ 1000 ಪ್ರೌಢಶಾಲೆಗಳು ಮತ್ತು ಪಿ.ಯು. ಕಾಲೇಜುಗಳಲ್ಲಿ ಐಟಿ@ಸ್ಕೂಲ್.

- ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳ ಸಮಗ್ರ ಸುಧಾರಣೆ

96. ವಿದ್ಯಾರ್ಥಿಗಳ ಪ್ರೇರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.

- ಶೂ ಮತ್ತು ಸಾಕ್ಸ್ ವಿತರಣೆ;
- ಜುಲೈ ತಿಂಗಳಿನಿಂದ ಜಾರಿಗೆ ಬರುವಂತೆ ವಾರದಲ್ಲಿ 5 ದಿನ ಹಾಲು ವಿತರಣೆ
- ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮದಡಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ 4 ಲಕ್ಷ ಮಕ್ಕಳಿಗೆ ಸಾರವರ್ಧಕ ಅಕ್ಕಿ (Fortified Rice) ಉಪಯೋಗ 4 ಜಿಲ್ಲೆಗಳಿಗೆ ವಿಸ್ತರಣೆ
- 8 ರಿಂದ 10ನೇ ತರಗತಿಯ ಹೆಣ್ಣು ಮಕ್ಕಳಿಗೆ ಚುಡಿದಾರ್ ಸಮವಸ್ತ್ರ
- ಶಾಲಾ ಗ್ರಂಥಾಲಯಗಳಿಗೆ ಸಾಮಾಜಿಕ ಸಂದೇಶವುಳ್ಳ ಕಥಾ ಪುಸ್ತಕಗಳು;
- ದೃಷ್ಟಿ ಪರೀಕ್ಷೆ ಮತ್ತು ಕನ್ನಡಕಗಳ ವಿತರಣೆ,

97. 50 ಸಾವಿರ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಪ್ರಮುಖ ವಿಷಯಗಳು ಮತ್ತು ಇಂಗ್ಲೀಷ್‌ನ್ನು ಒಳಗೊಂಡಂತೆ ಭಾಷಾ ವಿಷಯಗಳ ಕುರಿತು ಮಧ್ಯಮ ಮತ್ತು ದೀರ್ಘ ಅವಧಿಯ ಅವಶ್ಯಾಧಾರಿತ ಪುನರ್‌ರಚನಾ ತರಬೇತಿ ನೀಡಲಾಗುವುದು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಸಮಗ್ರ ಪರಾಮರ್ಶೆಯನ್ನು ಕೈಗೊಂಡು ಅವುಗಳ ಸಾಮರ್ಥ್ಯವನ್ನು ಬಲವರ್ಧನೆಗೊಳಿಸಲಾಗುವುದು. ಪ್ರಾಥಮಿಕ ಶಾಲೆಗಳಿಗೆ 10,000 ತರಬೇತಿ ಪಡೆದ ಪದವೀಧರ ಶಿಕ್ಷಕರು, 1,626 ಪ್ರೌಢ ಶಾಲಾ ಶಿಕ್ಷಕರು ಮತ್ತು 1,191 ಪಿ.ಯು. ಉಪನ್ಯಾಸಕರನ್ನು ಎರಡು ಹಂತಗಳಲ್ಲಿ ನೇಮಕಾತಿ ಮಾಡಲಾಗುವುದು.

98. ಶಾಲಾ ನಿರ್ವಹಣೆ ಮತ್ತು ಶಿಕ್ಷಣ ವಲಯದ ಆಡಳಿತ ಸುಧಾರಣೆಗಾಗಿ, 'ಶಿಕ್ಷಣ ಕಿರಣ'ದಡಿ ಶಿಕ್ಷಕರ ಬಯೋಮೆಟ್ರಿಕ್ ಹಾಜರಾತಿಯೂ ಸೇರಿದಂತೆ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುವುದು.

99. 2017–18ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 18,266 ಕೋಟಿ ರೂ. ಒದಗಿಸಲಾಗಿದೆ.

## ಉನ್ನತ ಶಿಕ್ಷಣ

100. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಡಾ. ಬಿ.ಆರ್. ಅಂಬೇಡ್ಕರ್‌ರವರು ವ್ಯಾಸಂಗ ಮಾಡಿದ **"ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್"** ಮಾದರಿಯಲ್ಲಿ **"ಬೆಂಗಳೂರು ಡಾ:ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್"** (BASE) ಎಂಬ ಅರ್ಥಶಾಸ್ತ್ರದ ಉನ್ನತ ವ್ಯಾಸಂಗ ಹಾಗೂ ಸಂಶೋಧನಾ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

- ಕರ್ನಾಟಕ ರಾಜ್ಯಕ್ಕೆ ಮಂಜೂರು ಮಾಡಲಾಗಿರುವ **"ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ"** (IIT) ಸಂಸ್ಥೆಗೆ ರಾಜ್ಯ ಸರ್ಕಾರವು 470 ಎಕರೆ ಜಮೀನು ಮಂಜೂರು ಮಾಡಿದೆ.

- ರಾಜ್ಯದಲ್ಲಿ ಕಳೆದ 4 ವರ್ಷಗಳ ಅವಧಿಯಲ್ಲಿ 4 ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, 3 ಸರ್ಕಾರಿ ಪಾಲಿಟೆಕ್ನಿಕ್, 26 ಮಹಿಳಾ ಕಾಲೇಜುಗಳು ಸೇರಿದಂತೆ 52 ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ.

- 50 ಕೋಟಿ ರೂ.ಗಳ ಅನುದಾನದೊಂದಿಗೆ ದಾಂಡೇಲಿಯಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

- ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 1.19 ಲಕ್ಷ ವಿದ್ಯಾರ್ಥಿನಿಯರಿಗೆ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕ ವಿನಾಯಿತಿ ನೀಡಲಾಗಿದೆ.

- ಧಾರವಾಡದಲ್ಲಿ ಉನ್ನತ ಶಿಕ್ಷಣ ಅಕಾಡೆಮಿಯನ್ನು ಸ್ಥಾಪಿಸಿದೆ.

- ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 10 ಪ.ಜಾ/ಪ.ಪಂ ಹಾಸ್ಟೆಲ್‌ಗಳನ್ನು, 10 ಜನರಲ್ ಹಾಸ್ಟೆಲ್‌ಗಳನ್ನು ಮತ್ತು 3 ಮಹಿಳಾ ಹಾಸ್ಟೆಲ್‌ಗಳನ್ನು ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 47 ಪ.ಜಾ/ಪ.ಪಂಗಳ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗಿದೆ.

- ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಯು.ಆರ್.ಅನಂತಮೂರ್ತಿ ಅಧ್ಯಯನ ಪೀಠವನ್ನು ಮಂಜೂರು ಮಾಡಲಾಗಿದೆ.

- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 2034 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಗಿದಿದ್ದು, ಶೀಘ್ರದಲ್ಲೇ ನೇಮಕಾತಿ ಆದೇಶ ಹೊರಡಿಸಲಾಗುವುದು.

## 2017–18ನೇ ಸಾಲಿನ ಹೊಸ ಯೋಜನೆಗಳು

101. ಹೈದರಾಬಾದ್–ಕರ್ನಾಟಕದ ಪ್ರದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ರಾಯಚೂರು

ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಕಾಲೇಜುಗಳನ್ನು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ತರಲಾಗುವುದು.

102. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಸಾಮಾನ್ಯ ಉಪಬಂಧಗಳನ್ನು ಜಾರಿಗೊಳಿಸಲು ಹಾಗೂ ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಈ ಕಾಯ್ದೆಗೆ ತಿದ್ದುಪಡಿಗಳನ್ನು ತರಲಾಗುವುದು.

103. ಗ್ರಾಮೀಣ, ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ ಉತ್ತೇಜನ ನೀಡಲು ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ತಲಾ 4 ಕೋಟಿ ರೂ.ಗಳ ವೆಚ್ಚದಲ್ಲಿ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲಾಗುವುದು.

104. ವಿದ್ಯಾರ್ಥಿನಿಯರ ಒಟ್ಟು ದಾಖಲಾತಿ ಪ್ರಮಾಣವನ್ನು (GER) ಹೆಚ್ಚಿಸಲು ತಲಾ 2 ಕೋಟಿ ರೂ.ಗಳ ವೆಚ್ಚದಲ್ಲಿ ಹಂತ ಹಂತವಾಗಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 23 ಮಹಿಳಾ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲಾಗುವುದು.

105. ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಹಾಸ್ಟೆಲ್‌ಗಳೊಂದಿಗೆ 10 ಮಾದರಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಲಾಗುವುದು.

106. ಶತಮಾನ ಪೂರೈಸಿರುವ ಬೆಂಗಳೂರಿನ ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್‌ಗೆ (UVCE) 25 ಕೋಟಿ ರೂ. ಹಾಗೂ ಧಾರವಾಡದ ಕರ್ನಾಟಕ ಕಾಲೇಜಿಗೆ 5 ಕೋಟಿ ರೂ.ಗಳನ್ನು ಮೂಲಸೌಕರ್ಯ ಹಾಗೂ ನವೀಕರಣಕ್ಕಾಗಿ ಒದಗಿಸಲಾಗುವುದು.

107. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಬೆಳ್ಳಿಹಬ್ಬದ ಅಂಗವಾಗಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿಗಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

108. ಕರ್ನಾಟಕ ವಿಶ್ವವಿದ್ಯಾನಿಲಯದ ಮಹಾಯೋಗಿ ವೇಮನ ಅಧ್ಯಯನ ಪೀಠಕ್ಕಾಗಿ 3 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

109. ದೇಶದಲ್ಲಿಯೇ ಪ್ರಪ್ರಥಮವಾಗಿ ಸಾಮಾಜಿಕ ನ್ಯಾಯ ದೊರಕಿಸುವ ಹಿನ್ನೆಲೆಯಲ್ಲಿ ಮೀಸಲಾತಿ ಜಾರಿಗೆ ತಂದಂತಹ ಕ್ರಾಂತಿಕಾರಿ ಸಾಹುಮಹಾರಾಜ್‌ರವರ ಹೆಸರಿನಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು.

110. ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಪ್ರಥಮ ದರ್ಜೆ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ 2017-18ನೇ ಸಾಲಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗುವುದು.

ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ.

111. ನಮ್ಮ ಯುವಜನರಿಗೆ ಉತ್ಕೃಷ್ಟ ದರ್ಜೆಯ ಶಿಕ್ಷಣ ನೀಡಲು ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಹೊಂದುವುದು ಮುಖ್ಯವಾಗಿದೆ. ಮೂಲಭೂತ ಸೌಕರ್ಯದಲ್ಲಿನ ಅಂತರವನ್ನು ತುಂಬಲು ಮಧ್ಯಮಾವಧಿ ಆರ್ಥಿಕ ಯೋಜನೆಯನ್ನು ತಯಾರಿಸಲಾಗುವುದು ಹಾಗೂ ಅನುಷ್ಠಾನಗೊಳಿಸಲಾಗುವುದು.

112. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ಯಾರಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು.

113. 2017–18ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 4,401 ಕೋಟಿ ರೂ. ಒದಗಿಸಲಾಗಿದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ

114. **ಕಳೆದ 4 ವರ್ಷಗಳ ಸಾಧನೆಗಳು**

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವ ಗುರಿ ಹೊಂದಿದ್ದು, ಶಿಶು ಮರಣ ಪ್ರಮಾಣವನ್ನು 31 ರಿಂದ 28 ಕ್ಕೆ ಇಳಿಸಲಾಗಿದೆ. ತಾಯಂದಿರ ಮರಣ ಪ್ರಮಾಣವನ್ನು ಪ್ರತಿ 1

ಲಕ್ಷ ಜೀವಂತ ಜನನಗಳಿಗೆ 178 ರಿಂದ 133 ಕ್ಕೆ ಕಡಿಮೆ ಮಾಡಲಾಗಿದೆ. 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವು 100 ಸಜೀವ ಜನನಕ್ಕೆ 31 ಆಗಿದ್ದು, ಮಿಲೇನಿಯಂ ಗುರಿಯಾದ 35 ನ್ನು ಸಾಧಿಸಿದ ಆರು ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ. ಲಸಿಕಾ ಕಾರ್ಯಕ್ರಮದಡಿಯಲ್ಲಿ ಪೂರ್ಣ ಲಸಿಕೆ ಪಡೆದ ಮಕ್ಕಳ ಪ್ರಮಾಣವನ್ನು ಶೇಕಡ 80 ರಿಂದ 91.4 ಕ್ಕೆ ಏರಿಸಲಾಗಿದೆ.

- ವಾಜಪೇಯಿ ಆರೋಗ್ಯಶ್ರೀ ಕಾರ್ಯಕ್ರಮದಡಿಯಲ್ಲಿ 1.5 ಲಕ್ಷ ಫಲಾನಿಭವಿಗಳಿಗೆ ಕ್ಲಿಷ್ಟಕರ ರೋಗಗಳಿಗೆ ಚಿಕಿತ್ಸೆ ನೀಡಲಾಗಿದೆ.

- ಶುಚಿ ಕಾರ್ಯಕ್ರಮದಡಿಯಲ್ಲಿ 72.7 ಲಕ್ಷ ಹದಿಹರೆಯದ ಬಾಲಕಿಯರಿಗೆ ಋತುಚಕ್ರ ಸಂದರ್ಭದಲ್ಲಿ ಶುಚಿತ್ವ ಕಾಪಾಡಲು ಪ್ರತಿಯೊಬ್ಬರಿಗೆ ವರ್ಷಕ್ಕೆ 10 ಸ್ಯಾನಿಟರಿ ಪ್ಯಾಡ್‌ಗಳಿರುವ 13 ಪ್ಯಾಕೆಟ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ.

- ಆರೋಗ್ಯ ಕವಚ (108) ಯೋಜನೆಯಡಿಯಲ್ಲಿ ಒಟ್ಟು 1.7 ಕೋಟಿ ರೋಗಿಗಳು ಆಂಬ್ಯುಲೆನ್ಸ್ ಸೇವೆ ಪಡೆದಿದ್ದಾರೆ.

- ಡಯಾಲಿಸಿಸ್ ಕಾರ್ಯಕ್ರಮದಡಿಯಲ್ಲಿ 31,561 ಮೂತ್ರಪಿಂಡ ವೈಫಲ್ಯದ ರೋಗಿಗಳಿಗೆ ಒಟ್ಟು 1.6 ಲಕ್ಷ ಬಾರಿ ಡಯಾಲಿಸಿಸ್ ಮಾಡಲಾಗಿದೆ.

- ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣಾ ಕಾರ್ಯಕ್ರಮದಡಿಯಲ್ಲಿ 66.5 ಲಕ್ಷ ಜನರನ್ನು ತಪಾಸಣೆ ನಡೆಸಿದ್ದು, ಇವರಲ್ಲಿ ಡಯಾಬಿಟಿಸ್ ಮತ್ತು ಅಧಿಕ ರಕ್ತದೊತ್ತಡ ಕಂಡು ಬಂದಂತಹ ಜನರಿಗೆ ನಿಯಮಿತ ಚಿಕಿತ್ಸೆ ನೀಡಲಾಗುತ್ತಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

115. ಶಿಶು ಮರಣ ಹಾಗೂ ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಪ್ರತಿ ಆಶಾ ಕಾರ್ಯಕರ್ತರು ಈಗಾಗಲೇ ಪಡೆಯುತ್ತಿರುವ ಪ್ರೋತ್ಸಾಹಧನದ ಜೊತೆ 1000 ರೂ.ಗಳ ಗೌರವಧನವನ್ನು ನೀಡಲಾಗುವುದು.

116. ರಾಜ್ಯ ಸರ್ಕಾರದ ವಿವಿಧ ಆರೋಗ್ಯ ವಿಮಾ ಕಾರ್ಯಕ್ರಮಗಳಲ್ಲಿ ಹೊಂದಾಣಿಕೆ ತರಲು ಹಾಗೂ ಎಲ್ಲಾ ಕುಟುಂಬಗಳನ್ನು ಸಾರ್ವತ್ರಿಕ ಆರೋಗ್ಯ ವ್ಯಾಪ್ತೀಕರಣದಡಿಯಲ್ಲಿ (Universal Health Coverage) ತರಲು ಉದ್ದೇಶಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಯಶಸ್ವಿನಿ ಆರೋಗ್ಯ ಸುರಕ್ಷಾ ಯೋಜನೆಯು ಜಾರಿಯಲ್ಲಿರುವ ನಿಯಮಾವಳಿಗಳಂತೆಯೇ ಮುಂದುವರಿಯುತ್ತದೆ. ಆದರೆ, ಈ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತ ನಿಯಂತ್ರಣಕ್ಕೆ ತರಲಾಗುವುದು.

117. ಕ್ಯಾನ್ಸರ್, ಹೃದಯ ರೋಗಗಳು ಹಾಗೂ ಇತರೆ ಜೀವನಕ್ರಮವನ್ನು ಆಧರಿಸಿದ ರೋಗಗಳಿಗೆ ಚಿಕಿತ್ಸೆಯನ್ನು ನೀಡುವ ದೃಷ್ಟಿಯಿಂದ, ರಾಜ್ಯದ ದಾವಣಗೆರೆ, ರಾಮನಗರ, ತುಮಕೂರು, ವಿಜಯಪುರ ಮತ್ತು ಕೋಲಾರದಲ್ಲಿ ತಲಾ 25 ಕೋಟಿ ರೂ.ಗಳ ವೆಚ್ಚದಲ್ಲಿ 5 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು.

118. ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯನ್ನು 10 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು.

119. ಮಂಗಳೂರು ಮತ್ತು ಸುತ್ತಮುತ್ತಲಿನ ಮಕ್ಕಳಿಗೆ ಹೆಚ್ಚುವರಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ಮಾದರಿಯಲ್ಲಿ ಪ್ರಾದೇಶಿಕ ಹಾಗೂ ಉನ್ನತ ಮಕ್ಕಳ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಗುವುದು.

120. ಸಂಜಯ್ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ 14.32 ಕೋಟಿ ರೂಗಳ ವೆಚ್ಚದಲ್ಲಿ ಬೆನ್ನು ಹುರಿಗಾಯ ಹಾಗೂ ಆಘಾತ ಚಿಕಿತ್ಸೆ ಒದಗಿಸಲು 10 ಹಾಸಿಗೆ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ಐಸಿಯು ಮತ್ತು 20 ಹಾಸಿಗೆಯ ಪಾಲಿಟ್ರಾಮಾ ಕೇಂದ್ರವನ್ನು ಸ್ಥಾಪಿಸಲಾಗುವುದು.

121. ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಕಿ.ಮೀ.ಗಳಿಗಿಂತಲೂ ಹೆಚ್ಚು ದೂರವಿರುವ ಗ್ರಾಮಗಳಲ್ಲಿ ತಲಾ 10 ಲಕ್ಷ ರೂ.ಗಳಂತೆ ಒಟ್ಟಾರೆ 15 ಕೋಟಿ ರೂ.ಗಳ ವೆಚ್ಚದಲ್ಲಿ ಒಬ್ಬ ವೈದ್ಯರು, ಒಬ್ಬ ಶುಶ್ರೂಷಕರು ಹಾಗೂ ಒಬ್ಬ ಫಾರ್ಮಾಸಿಸ್ಟ್‌ಗಳನ್ನು ಒಳಗೊಂಡ 150 ಆರೋಗ್ಯ ವಿಸ್ತರಣಾ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗುವುದು.

122. ರಾಜ್ಯದಲ್ಲಿನ GVK EMRI ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 711 ಅಂಬ್ಯುಲೆನ್ಸ್‌ಗಳನ್ನು ರಾಜ್ಯ ಆರೋಗ್ಯ ಇಲಾಖೆಯ 827 ಅಂಬ್ಯುಲೆನ್ಸ್‌ಗಳೊಡನೆ ಒಟ್ಟುಗೂಡಿಸಿ, ಪ್ರತಿ 10 ರಿಂದ 15 ಕಿ.ಮೀ. ಸುತ್ತಳತೆಯಲ್ಲಿರುವ 35 ಸಾವಿರ ಜನಸಂಖ್ಯೆಗೆ ಒಂದರಂತೆ ಆಂಬುಲೆನ್ಸ್ ಸೇವೆಯನ್ನು ಒದಗಿಸಲಾಗುವುದು.

123. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೇ.40 ರಷ್ಟು ಜನಸಂಖ್ಯೆ ಹೊಂದಿರುವ 1200–1300 ಗ್ರಾಮಗಳ ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸುವ ಸಲುವಾಗಿ ಮುಂದಿನ ಎರಡು ವರ್ಷಗಳಲ್ಲಿ 25.34 ಕೋಟಿ ರೂ. ಗಳ ವೆಚ್ಚದಲ್ಲಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅನುದಾನವನ್ನು ಬಳಸಿಕೊಂಡು 64 ಸಂಚಾರಿ ಆರೋಗ್ಯ ಘಟಕಗಳನ್ನು ಪ್ರಾರಂಭಿಸಲಾಗುವುದು.

124.ಬೆಳಗಾವಿ ನಗರ ಲಸಿಕಾ ಸಂಸ್ಥೆಯ ಆವರಣದಲ್ಲಿ 5 ಕೋಟಿ ರೂ. ಗಳ ವೆಚ್ಚದಲ್ಲಿ ಆಯುಷ್ ಔಷಧ ತಯಾರಿಕಾ ಕೇಂದ್ರವನ್ನು ಸ್ಥಾಪಿಸಲಾಗುವುದು.

125.4.5 ಕೋಟಿ ರೂ. ಗಳ ವೆಚ್ಚದಲ್ಲಿ 150 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶವಾಗಾರಗಳನ್ನು ತಲಾ 3 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು.

126.ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಸಂಯೋಜಿತ ಆಯುಷ್ ಆಸ್ಪತ್ರೆಗಳನ್ನು ಒಟ್ಟಾರೆ 6 ಕೋಟಿ ರೂ. ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

127.ಸಾಮಾನ್ಯ ಜನತೆಗೆ ಒಳ್ಳೆಯ ಗುಣಮಟ್ಟದ ಜೆನರಿಕ್ ಔಷಧಿಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ "ಜನೌಷಧಿ ಔಷಧ ಮಳಿಗೆಗಳು" ಯೋಜನೆಯ ಅಡಿಯಲ್ಲಿ 200 ಜೆನರಿಕ್ ಔಷಧ ಮಳಿಗೆಗಳನ್ನು ಪ್ರಾರಂಭಿಸಲಾಗುವುದು.

128.ಔಷಧೀಯ ಸಸ್ಯಗಳ ಗಿಡಮೂಲಿಕೆ ಔಷಧ ಕೋಶ (Pharmacopeia) ಉಪಯೋಗಕ್ಕಾಗಿ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕ ಯೋಜನೆಯನ್ನು (pilot project) ಅನುಷ್ಠಾನಗೊಳಿಸಲಾಗುವುದು. ಸ್ಥಳೀಯ ಮಟ್ಟದಲ್ಲಿ ಪರಿಣಾಮಕಾರಿ ಆರೋಗ್ಯ ಪಾಲನೆ ಪರಿಹಾರಗಳ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು**

129. ಪ್ರಸ್ತುತ 20 ಜಿಲ್ಲೆ ಆಸ್ಪತ್ರೆಗಳು, 3 ಪ್ರಮುಖ ಆಸ್ಪತ್ರೆಗಳು ಹಾಗೂ 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಸಾಲಿನಲ್ಲಿ ಉಳಿದ 114 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

130. ಅಪಘಾತ, ಉಸಿರಾಟದ ತೊಂದರೆ ಮತ್ತು ಗಂಭೀರ ಅನಾರೋಗ್ಯದಂತಹ ಸಂದರ್ಭಗಳಲ್ಲಿ ಚಿಕಿತ್ಸೆ ಒದಗಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 3 ಹಾಸಿಗೆಗಳ ಸಾಮರ್ಥ್ಯದ ವೆಂಟಿಲೇಟರ್ ಸೌಲಭ್ಯವಿರುವ ತೀವ್ರ ನಿಗಾ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. MPLADS, MLA ನಿಧಿ, ಹಾಗೂ NHM ನಿಂದ ಅನುದಾನ ಪಡೆಯುವ ಮೂಲಕ ಈ ಯೋಜನೆಯನ್ನು ಕೈಗೊಳ್ಳಲಾಗುವುದು.

131. ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಲಭ್ಯತೆಯನ್ನು ಹೆಚ್ಚಿಸಲು ಹತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಡಿಎನ್‌ಬಿ ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಲಾಗುವುದು.

132. ಡೆಂಗ್ಯು, ಮಲೇರಿಯಾ ಮತ್ತು ಇತರ ರೋಗಿಗಳ ಅಗತ್ಯತೆ ಪೂರೈಸಲು ಬಾಗಲಕೋಟೆ, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾವೇರಿ, ಕೊಡಗು, ಕೋಲಾರ,

ತುಮಕೂರು ಮತ್ತು ಉತ್ತರ ಕನ್ನಡದ 10 ಜಿಲ್ಲಾ ಆಸ್ಪತ್ರೆಗಳಲ್ಲಿ 6 ಕೋಟಿ ರೂ. ಗಳ ವೆಚ್ಚದಲ್ಲಿ **ರಕ್ತ ವಿದಳನ ಘಟಕಗಳನ್ನು** ಸ್ಥಾಪಿಸಲಾಗುವುದು.

133. ಸಂಯೋಜಿತ, ಸಮಗ್ರ ಆರೋಗ್ಯ ಸೇವೆ ಒದಗಿಸಲು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಆಯುಷ್ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

134. ರಾಜ್ಯದ 21 ಜಿಲ್ಲಾ ಆಸ್ಪತ್ರೆಗಳು, 146 ತಾಲ್ಲೂಕು ಆಸ್ಪತ್ರೆಗಳು ಹಾಗೂ 21 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 188 RO+UV ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗುವುದು.

135. ಪ್ರಸ್ತುತ ರಾಜ್ಯದ 3 ಆಸ್ಪತ್ರೆಗಳಲ್ಲಿ ಇ–ಹಾಸ್ಪಿಟಲ್ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಪ್ರಸಕ್ತ ಸಾಲಿನಲ್ಲಿ 13.78 ಕೋಟಿ ರೂ.ಗಳ ವೆಚ್ಚದಲ್ಲಿ 206 ಸಮುದಾಯ ಆರೋಗ್ಯ ಕೇಂದ್ರಗಳು, 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು.

136. ರಾಷ್ಟ್ರೀಯ ಉಚಿತ ರೋಗಪತ್ತೆ ಯೋಜನೆಯಡಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ರೋಗಪತ್ತೆ ಸೌಲಭ್ಯ ಒದಗಿಸಲಾಗುವುದು. 14 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್ ಸೌಲಭ್ಯ ಹಾಗೂ 6 ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್ ಸೌಲಭ್ಯ ಒದಗಿಸಲಾಗುವುದು.

137. ತಾಯಂದಿರು ಮತ್ತು ಶಿಶು ಮರಣ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ 16,500 ಕಿರಿಯ ಮಹಿಳಾ ಆರೋಗ್ಯ ಸಹಾಯಕರಿಗೆ

ತಾಯಿ ಮತ್ತು ಮಗುವಿನ ಅನುಸರಣಾ ವ್ಯವಸ್ಥೆಯಡಿ ಮಾಹಿತಿ ಸಂಗ್ರಹ, ಸಂರಕ್ಷಣೆ ಮತ್ತು ಸಂವಹನಕ್ಕಾಗಿ ಕಂಪ್ಯೂಟರ್ ಟ್ಯಾಬ್‌ಗಳನ್ನು ಒದಗಿಸಲಾಗುವುದು.

138. 2017–18ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 5,118 ಕೋಟಿ ರೂ. ಒದಗಿಸಲಾಗಿದೆ.

## ವೈದ್ಯಕೀಯ ಶಿಕ್ಷಣ

139. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಬೀದರ್, ಕಲಬುರಗಿ, ಕೊಪ್ಪಳ, ಕಾರವಾರ, ಕೊಡಗು ಮತ್ತು ಚಾಮರಾಜನಗರಗಳಲ್ಲಿ ತಲಾ 150 ಸೀಟುಗಳ ಸಾಮರ್ಥ್ಯದ 6 ಹೊಸ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲಾಗಿದೆ.

- ಕಳೆದ 4 ವರ್ಷಗಳಲ್ಲಿ ಎಂ.ಬಿ.ಬಿ.ಎಸ್ ಸೀಟುಗಳನ್ನು 2,155 ರಿಂದ 3,291ಕ್ಕೆ ಹೆಚ್ಚಿಸಲಾಗಿದೆ. ಇದೇ ಅವಧಿಯಲ್ಲಿ, ರಾಜ್ಯದ ಸರ್ಕಾರಿ ಬೋಧನಾ ಆಸ್ಪತ್ರೆಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ 2,708 ಹೆಚ್ಚುವರಿ ಹಾಸಿಗೆ ಸಾಮರ್ಥ್ಯವನ್ನು ಸೇರಿಸಲಾಗಿದೆ.

- ಕಲಬುರಗಿ ಮತ್ತು ಮೈಸೂರಿನಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಮತ್ತು ಸಂಶೋಧನಾ ಕೇಂದ್ರದ 2 ಘಟಕಗಳನ್ನು ಪ್ರಾರಂಭಿಸಲಾಗಿದೆ.

- ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ 210 ಹಾಸಿಗೆ ಸಾಮರ್ಥ್ಯದೊಂದಿಗೆ ಒಂದು ಅಪಘಾತ ಶುಶ್ರೂಷ ಕೇಂದ್ರವನ್ನು (Trauma Care Centre) ಸ್ಥಾಪಿಸಲಾಗಿದೆ.
- ಕಲಬುರಗಿಯಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇರ್ ಸೆಂಟರ್ ಸ್ಥಾಪಿಸಲಾಗಿದೆ ಮತ್ತು ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯನ್ನು 120 ಕೋಟಿ ರೂ.ಗಳ ವೆಚ್ಚದಲ್ಲಿ ರಾಜ್ಯ ಕ್ಯಾನ್ಸರ್ ಸಂಸ್ಥೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಪ್ರಸಕ್ತ ಸಾಲಿನಿಂದ ಅದು ಕಾರ್ಯಾರಂಭಗೊಳ್ಳಲಿದೆ.

## 2017-18ನೇ ಸಾಲಿನ ಹೊಸ ಯೋಜನೆಗಳು

140. 2014-15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ, ಪ್ರಸಕ್ತ ಸಾಲಿನಲ್ಲಿ ಕಲಬುರಗಿ, ಮೈಸೂರು ಮತ್ತು ಬೆಳಗಾವಿ-ಮೂರು ಕಂದಾಯ ವಿಭಾಗಗಳಲ್ಲಿ ಶೇ.40 ರಷ್ಟು ಭಾರತ ಸರ್ಕಾರದ ನೆರವಿನೊಂದಿಗೆ 310 ಕೋಟಿ ರೂ.ಗಳ ವೆಚ್ಚದಲ್ಲಿ 250 ಹಾಸಿಗೆಗಳ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

141. ಬೆಂಗಳೂರಿನ ಇಂದಿರಾನಗರದಲ್ಲಿ ಸ್ವಂತ ಸಂಪನ್ಮೂಲಗಳನ್ನು ಬಳಸಿ 35 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಎಂಡೊಕ್ರೈನಾಲಜಿಯ ಹೊಸ ಆಸ್ಪತ್ರೆಯನ್ನು ನಿರ್ಮಿಸಲಾಗುವುದು.

142. ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿ 5 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಜಯದೇವ ಹೃದ್ರೋಗ ವಿಜ್ಞಾನಗಳ ಮತ್ತು ಸಂಶೋಧನಾ ಕೇಂದ್ರದ ಒಂದು ಘಟಕವನ್ನು ಆರಂಭಿಸಲಾಗುವುದು.

143. ಮಿಂಟೋ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.

144. ಬಡ ಮತ್ತು ಅವಶ್ಯವಿರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ, ಬೆಂಗಳೂರಿನ ಕ್ಷಯರೋಗ ಆಸ್ಪತ್ರೆ ಆವರಣದಲ್ಲಿ 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಚರ್ಮರೋಗ ಸಂಸ್ಥೆಯನ್ನು (Institute of Dermatology) ಆರಂಭಿಸಲಾಗುವುದು.

145. ಬಳ್ಳಾರಿಯ ವಿಮ್ಸ್ ಬೋಧನಾ ಆಸ್ಪತ್ರೆಯನ್ನು 25 ಕೋಟಿ ರೂ.ಗಳ ವೆಚ್ಚದಲ್ಲಿ ನವೀಕರಿಸಲಾಗುವುದು.

146. ಕಲಬುರಗಿ ಮತ್ತು ಮೈಸೂರಿನಲ್ಲಿ ತಲಾ 10 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನೆಫ್ರೋ–ಯುರಾಲಜಿ ಘಟಕವನ್ನು ಆರಂಭಿಸಲಾಗುವುದು.

147. ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನಲ್ಲಿ 6 ವೈದ್ಯಕೀಯ ಕಾಲೇಜುಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

148. ಕರ್ನಾಟಕ ಜ್ಞಾನ ಆಯೋಗವು ವೈಶಿಷ್ಟ್ಯಪೂರ್ಣ ನರ್ಸಿಂಗ್ ತರಬೇತಿ ಸಿಮ್ಯೂಲೇಟರ್‌ಗಳನ್ನು ಅಭಿವೃದ್ಧಿಪಡಿಸಿದೆ. ಇದು ಸಂಧಿಗ್ಧ, ತೀವ್ರತರವಾದ ಮತ್ತು ಹೃದಯಕ್ಕೆ ಸಂಬಂಧಿಸಿದ ಜಾಗರೂಕತೆಗಾಗಿ ತರಬೇತಿ ನರ್ಸ್‌ಗಳಿಗೆ ಸಹಾಯವಾಗುವುದು. ರಾಜ್ಯಾದ್ಯಂತ ಅಂತಹ ಸಿಮ್ಯೂಲೇಟರ್‌ಗಳನ್ನು ನಿಯೋಜಿಸಲು ಉದ್ದೇಶಿಸಿದೆ. ಇದಕ್ಕಾಗಿ 5 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

149. 2017–18ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 2,004 ಕೋಟಿ ರೂ. ಒದಗಿಸಲಾಗಿದೆ.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ

### 150. ಕಳೆದ 4 ವರ್ಷಗಳ ಸಾಧನೆಗಳು

- ಸ್ತ್ರೀಶಕ್ತಿ ಸ್ವ–ಸಹಾಯ ಗುಂಪುಗಳಿಗೆ ನೀಡುತ್ತಿರುವ ಆವರ್ತ ನಿಧಿಯ ಮಿತಿಯನ್ನು 5,000 ರೂ.ಗಳಿಂದ 25,000 ರೂ.ಗಳಿಗೆ ಹೆಚ್ಚಿಸಲಾಗಿದೆ. 1.31 ಲಕ್ಷ ಗುಂಪುಗಳಿಗೆ ಆವರ್ತ ನಿಧಿಯನ್ನು ನೀಡಲಾಗಿದೆ.

- ಎಲ್ಲಾ ಅಂಗನವಾಡಿ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರದೊಡನೆ ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 3 ದಿನ ಕೆನೆಸಹಿತ ಹಾಲನ್ನು ನೀಡಲಾಗಿದ್ದು, ಇದರ ಲಾಭವನ್ನು 38.21 ಲಕ್ಷ ಮಕ್ಕಳು ಪಡೆದಿರುತ್ತಾರೆ.

- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಮರಣ ಪರಿಹಾರ ಮೊತ್ತವನ್ನು 50,000 ರೂ.ಗಳಿಗೆ ಹೆಚ್ಚಿಸಲಾಗಿದೆ.

- ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 18 ವರ್ಷದ ಒಳಗಿನ ಮಕ್ಕಳ ವೈದ್ಯಕೀಯ ಚಿಕಿತ್ಸೆಗಾಗಿ ಹಾಗೂ ತುರ್ತು ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ಮಕ್ಕಳ ನಿಧಿಯನ್ನು ಪ್ರಾರಂಭಿಸಲಾಗಿದೆ.

- ಕರ್ನಾಟಕ ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಗಳಿಗಾಗಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿಗೆ ತರಲಾಗಿದೆ.

- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳಲ್ಲಿನ ನೇರ ನೇಮಕಾತಿಯಲ್ಲಿ ಮಹಿಳಾ ಮೀಸಲಾತಿಯನ್ನು ಶೇ.30 ರಿಂದ ಶೇ.33ಕ್ಕೆ ಹೆಚ್ಚಿಸಲಾಗಿದೆ.

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿದ್ದ 9 ಯೋಜನೆಗಳ ಅಡಿಯಲ್ಲಿ 10,788 ಮಹಿಳೆಯರಿಗೆ ಮಾರ್ಚ್ 2013 ರವರೆಗೆ ನೀಡಿರುವ ನೇರ ಸಾಲದ ಅಸಲು ಮತ್ತು ಬಡ್ಡಿ 8.25 ಕೋಟಿ ರೂ.ಗಳನ್ನು ಮನ್ನಾ ಮಾಡಲಾಗಿದೆ.

- ದೇವದಾಸಿ ಪದ್ಧತಿಯಿಂದ ಹೊರಬಂದವರಿಗೆ ಮಾಸಾಶನವನ್ನು 400 ರೂ.ಗಳಿಂದ 1500 ರೂ.ಗಳಿಗೆ

ಹೆಚ್ಚಿಸಲಾಗಿದೆ. ವಸತಿ ನಿರ್ಮಾಣದ ಘಟಕದ ವೆಚ್ಚವನ್ನು 40,000 ರೂ.ಗಳಿಂದ ಗ್ರಾಮೀಣ ಪ್ರದೇಶಕ್ಕೆ 1.5 ಲಕ್ಷ ರೂ. ಹಾಗೂ ನಗರ ಪ್ರದೇಶಕ್ಕೆ 1.8 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಆದಾಯೋತ್ಪನ್ನ ಚಟುವಟಿಕೆಗಳಿಗಾಗಿ 17 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

- ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ 1000 ರೂ.ಗಳ ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ.

- ವೈದ್ಯಕೀಯ ಪರಿಹಾರ ನಿಧಿಯಡಿ ಶಸ್ತ್ರ ಚಿಕಿತ್ಸೆಯ ವೆಚ್ಚವನ್ನು 35,000 ರೂ.ಗಳಿಂದ 1 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ.

- ವಿವಾಹ ಪ್ರೋತ್ಸಾಹ ಧನ ಯೋಜನೆಯಡಿ ಸಾಮಾನ್ಯ ವ್ಯಕ್ತಿಗಳು ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾದಲ್ಲಿ 50,000 ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

- ರಾಜ್ಯದ 24 ಜಿಲ್ಲೆಗಳಲ್ಲಿ ವಿಕಲಚೇತನ ಮಹಿಳೆಯರಿಗೆ / ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸ / ತರಬೇತಿಗೆ ಅನುಕೂಲವಾಗುವಂತೆ 27 ಮಹಿಳಾ ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ.

- ರಾಜ್ಯದ 8.4 ಲಕ್ಷ ವಿಕಲಚೇತನರಿಗೆ ವಾರ್ಷಿಕ 906 ಕೋಟಿ ರೂ.ಗಳ ವೆಚ್ಚದಲ್ಲಿ ಮಾಸಿಕ ಪೋಷಣಾ ಭತ್ಯೆ ನೀಡಲಾಗುತ್ತಿದೆ.
- ರಾಜ್ಯದಲ್ಲಿರುವ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿ–ಗತಿಗಳ ಬಗ್ಗೆ ಸಮಗ್ರ ಅಧ್ಯಯನಕ್ಕಾಗಿ ಡಾ. ಜಯಮಾಲರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಸಮಿತಿಯ ಪ್ರಮುಖ ಶಿಫಾರಸ್ಸುಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

151. ಪೌಷ್ಠಿಕಾಂಶ ಕೊರತೆಯನ್ನು ನಿವಾರಿಸಲು ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೂ "ಮಾತೃ ಪೂರ್ಣ" ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದ್ದು, ಜುಲೈ ತಿಂಗಳಿನಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿಯೂಟವನ್ನು ಒದಗಿಸಲಾಗುವುದು. ಇದಕ್ಕಾಗಿ 302 ಕೋಟಿ ರೂ.ಗಳನ್ನು ಒದಗಿಸಲಾಗುವುದು.

152. ಎಲ್ಲಾ ಅಂಗನವಾಡಿಯ ಮಕ್ಕಳಿಗೆ ಮುಂದಿನ ಜೂನ್ ತಿಂಗಳಿನಿಂದ ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುವುದು. ಇದಕ್ಕಾಗಿ 47 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

153. ಕ್ಷೀರ ಭಾಗ್ಯ ಯೋಜನೆಯಡಿ ಪ್ರಸ್ತುತ 3 ದಿನಗಳು ವಿತರಿಸುತ್ತಿರುವ ಹಾಲನ್ನು ಜುಲೈ ತಿಂಗಳಿನಿಂದ 5 ದಿನಗಳಿಗೆ ಹೆಚ್ಚಿಸಿ ವಿತರಿಸಲಾಗುವುದು.

154. 2013–14ನೇ ಸಾಲಿನಿಂದ 2016–17ನೇ ಸಾಲಿನವರೆಗೆ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರಿಗೆ ನೀಡುವ ಗೌರವಧನವನ್ನು ಅನುಕ್ರಮವಾಗಿ 1,500 ರೂ.ಗಳು ಮತ್ತು 750 ರೂ.ಗಳಷ್ಟು ಹೆಚ್ಚಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಮೊತ್ತವನ್ನು ಅನುಕ್ರಮವಾಗಿ 1,000 ರೂ. ಹಾಗೂ 500 ರೂ.ಗಳಷ್ಟು ಹೆಚ್ಚಿಸಲಾಗುವುದು. ಇದಕ್ಕಾಗಿ ಆಯವ್ಯಯದಲ್ಲಿ 115 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ರಕ್ಷಣೆ ಒದಗಿಸಲು ಕರ್ನಾಟಕ ಸರ್ಕಾರದಿಂದ ಅಪಘಾತ ವಿಮೆ ಯೋಜನೆಯನ್ನು ಸಹ ಜಾರಿಗೊಳಿಸಲಾಗುವುದು.

155. ಅತ್ಯಾಚಾರ ಮತ್ತು ವಿವಿಧ ದೌರ್ಜನ್ಯಗಳಿಗೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಚಿಕಿತ್ಸೆ ನೀಡಲು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾದ ವಿಶೇಷ ಚಿಕಿತ್ಸಾ ಘಟಕದ ರೀತಿಯಲ್ಲಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ತಾಲ್ಲೂಕು ಆಸ್ಪತ್ರೆಗಳಲ್ಲಿ ಮುಂದಿನ 2 ವರ್ಷಗಳಲ್ಲಿ 145 ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು.

156. ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತರಾದವರಿಗೆ ಪಾಲನೆ ಯೋಜನೆಯಡಿ 25,000 ಮಕ್ಕಳಿಗೆ ನೀಡಲಾಗುವ ಧನ

ಸಹಾಯವನ್ನು ಮಾಸಿಕ 800 ರೂ.ಗಳಿಂದ 1,000 ರೂ.ಗಳಿಗೆ ಹೆಚ್ಚಿಸಲಾಗುವುದು.

157. ಮಕ್ಕಳ ವಿಶೇಷ ನ್ಯಾಯಾಲಯವನ್ನು ಬಾಲ ಸ್ನೇಹಿಯಾಗಿಸಲು ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ನ್ಯಾಯಾಲಯ ನಿರ್ಮಿಸಲು 4 ಕೋಟಿ ರೂ.ಗಳನ್ನು ಒದಗಿಸಲಾಗುವುದು.

158. ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

- 6,022 ಗ್ರಾಮ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 2,000 ರೂ.ಗಳಿಂದ 3,000 ರೂ.ಗಳಿಗೆ ಹಾಗೂ 176 ಬಹುವಿಧ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು 5,000 ರೂ.ಗಳಿಂದ 6,000 ರೂ.ಗಳಿಗೆ ಹೆಚ್ಚಿಸಲಾಗುವುದು. 613 ನಗರ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ 3,000 ರೂ.ಗಳ ಗೌರವಧನದೊಂದಿಗೆ ನೇಮಕ ಮಾಡಲಾಗುವುದು.

- **"ಸ್ವಾವಲಂಬನ"** ವಿಮಾ ಯೋಜನೆಯಡಿ 1.12 ಲಕ್ಷ ವಿಕಲಚೇತನರಿಗೆ 357 ರೂ.ಗಳ ವಾರ್ಷಿಕ ಕಂತನ್ನು ಪಾವತಿಸಲು 4 ಕೋಟಿ.ರೂ.ಗಳನ್ನು ಒದಗಿಸಲಾಗಿದೆ.

- 20,000 ಹಿರಿಯ ನಾಗರಿಕರಿಗೆ ವಿವಿಧ ಸಾಧನ ಉಪಕರಣಗಳನ್ನು ವಿತರಿಸಲಾಗುವುದು.

- “ಸಾಧನೆ” ಯೋಜನೆಯಡಿ ನೀಡಲಾಗುವ ಆರ್ಥಿಕ ನೆರವನ್ನು 30,000 ರೂ.ಗಳಿಂದ 50,000 ರೂ.ಗಳಿಗೆ ಹೆಚ್ಚಿಸಲಾಗುವುದು.

- ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹುವಿಧದ ವೈಕಲ್ಯ ಹೊಂದಿರುವ ಮಕ್ಕಳಿಗಾಗಿ 4 ವಿಭಾಗಗಳಲ್ಲಿ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

- ಶಿಶು ಕೇಂದ್ರಿತ ಯೋಜನೆಯಡಿ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಶ್ರವಣ ದೋಷವುಳ್ಳ ಮತ್ತು ಅಂಧರ ಹಾಗೂ ಬುದ್ಧಿಮಾಂಧ್ಯ ವಿಶೇಷ ಶಾಲೆಗಳ ಪ್ರತಿ ಮಗುವಿಗೆ ನೀಡುವ ಮಾಸಿಕ ಅನುದಾನವನ್ನು 1200 ರೂ.ಗಳಷ್ಟು ಹೆಚ್ಚಿಸಲಾಗುವುದು.

- ಪ್ರಸಕ್ತ ಸಾಲಿನಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಸುಧಾರಿತ ದ್ವಿಚಕ್ರ ವಾಹನಗಳ ಸಂಖ್ಯೆಯನ್ನು 2000 ರಿಂದ 4000ಕ್ಕೆ ಹೆಚ್ಚಿಸಲಾಗುವುದು.

159. ಕರ್ನಾಟಕ ಮಹಿಳಾ ಅಬಿವೃದ್ಧಿ ನಿಗಮವು ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಈ ಕೆಳಕಂಡ ಹೊಸ

ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 148.74 ಕೋಟಿ ರೂ.ಗಳನ್ನು ಒದಗಿಸಿದೆ.

- **“ಸವಿರುಚಿ”** ಸಂಚಾರಿ ಕ್ಯಾಂಟೀನ್‌ಗಳನ್ನು ಎಲ್ಲಾ 30 ಜಿಲ್ಲೆಗಳಲ್ಲಿ **“ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟಗಳ”** ಮೂಲಕ ಪ್ರಾರಂಭಿಸಲಾಗುವುದು.

- ಮಹಿಳೆಯರು ಸ್ವತ:/ಜಂಟಿಯಾಗಿ ನಡೆಸುತ್ತಿರುವ 10,000 ನ್ಯಾಯಬೆಲೆ ಅಂಗಡಿಗಳಿಗೆ 5,000/– ರೂ.ಗಳ ಘಟಕ ವೆಚ್ಚದಲ್ಲಿ ಅಗತ್ಯ ಸಲಕರಣೆಗಳನ್ನು ಖರೀದಿಸಿ ಒದಗಿಸುವ **“ಪರಿಕರ ಸಹಾಯಧನ”** ಯೋಜನೆಯನ್ನು ಜಾರಿಗೊಳಿಸಲಾಗುವುದು.

- ಎಸ್‌ಸಿಎಸ್‌ಪಿ ಯೋಜನೆಯಡಿ ದೇವದಾಸಿ ಪದ್ಧತಿಯಿಂದ ಹೊರಬಂದವರಿಗೆ, ಲೈಂಗಿಕ ಕಾರ್ಯಕರ್ತರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಲಾಗುವ 20,000 ರೂ.ಗಳ ಪ್ರೋತ್ಸಾಹಧನವನ್ನು ಪರಿಷ್ಕರಿಸಿ ತಲಾ 25,000 ರೂ.ಗಳ ಪ್ರೋತ್ಸಾಹಧನ ಹಾಗೂ 25,000 ರೂ.ಗಳ ಸಾಲವನ್ನು ನೀಡಲಾಗುವುದು. **“ಧನಶ್ರೀ”** ಯೋಜನೆಯಡಿ ಸಹ ಇದೇ ಮಾದರಿಯನ್ನು ಮುಂದುವರಿಸಲಾಗುವುದು.

160. 2017–18ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 4,926 ಕೋಟಿ ರೂ. ಒದಗಿಸಲಾಗಿದೆ.

## ಸಮಾಜ ಕಲ್ಯಾಣ

**ಎಲ್ಲಿ ಜಾತಿಪದ್ಧತಿ ಜೀವಂತವಾಗಿರುತ್ತದೆಯೋ**
**ಅಲ್ಲಿ ಅವಕಾಶಗಳು ಮತ್ತು ಸಾಮರ್ಥ್ಯಗಳು ಸೀಮಿತಗೊಳ್ಳುತ್ತವೆ.**
**– ಡಾ॥ ರಾಮ ಮನೋಹರ ಲೋಹಿಯಾ**

161. **ಕಳೆದ 4 ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ, 2013 ಚಾರಿತ್ರಿಕ ಅಧಿನಿಯಮವನ್ನು ಜಾರಿಗೆ ತರಲಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಶೇ.17.15 ಮತ್ತು ಶೇ.6.95ರಷ್ಟು ಅನುದಾನವನ್ನು ಮೇಲ್ಕಂಡ ವರ್ಗಗಳಿಗಾಗಿ ಮೀಸಲಿರಿಸಲಾಗಿದೆ. ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ 2008–09ರಿಂದ 2012–13 ರ ಅವಧಿಯಲ್ಲಿ ಒಟ್ಟು 26,840 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, 22,261 ಕೋಟಿ ರೂ. ವೆಚ್ಚ ಮಾಡಲಾಗಿತ್ತು. 2013–14 ರಿಂದ 2016–17ರ ಅವಧಿಯಲ್ಲಿ ಈ ಯೋಜನೆಯಡಿ ಒಟ್ಟು 60,350 ಕೋಟಿ ರೂ.ಗಳನ್ನು ಒದಗಿಸಿದ್ದು, 47,186 ಕೋಟಿ ರೂ. ವೆಚ್ಚ ಮಾಡಲಾಗಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನಲ್ಲಿ ಪ್ರವೇಶ ನೀಡಲು ಅವಕಾಶ ಕಲ್ಪಿಸಲಾಗಿದೆ. 2012–13ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಸಂಖ್ಯೆ 2095 ಇದ್ದು, ಈಗ 2,205ಕ್ಕೆ ಏರಿಕೆಯಾಗಿದೆ. ಇದರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 1.42 ಲಕ್ಷಗಳಿಂದ 1.68 ಲಕ್ಷಕ್ಕೆ ಏರಿಕೆಯಾಗಿದೆ. 157 ಹೊಸ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಮತ್ತು 1,338 ಹಾಸ್ಟೆಲ್‌ಗಳ ದುರಸ್ತಿ ಮಾಡಿ ಮೇಲ್ದರ್ಜೆಗೇರಿಸುವುದಕ್ಕೆ, 686 ಹೆಚ್ಚುವರಿ ಕೊಠಡಿಗಳ, 873 ಸ್ನಾನದ ಕೋಣೆಗಳ ಮತ್ತು 883 ಶೌಚಾಲಯಗಳ ನಿರ್ಮಾಣಕ್ಕೆ 995 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ 363 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು / ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಜೊತೆಗೆ, ಕಳೆದ ಸಾಲಿನಲ್ಲಿ 145 ಶಾಲೆಗಳು ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ಅವರ ಹೆಸರಿನಲ್ಲಿ ಮಂಜೂರು ಮಾಡಿರುವ 125 ಶಾಲೆಗಳು ಒಟ್ಟು 270 ಶಾಲೆಗಳನ್ನು ಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು. ಈ ಶಾಲೆಗಳಲ್ಲಿ 1.6 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗುವುದು. ಕಳೆದ 4 ವರ್ಷಗಳಲ್ಲಿ 1160 ಕೋಟಿ ರೂ.ಗಳ ವೆಚ್ಚದಲ್ಲಿ 108 ವಸತಿ ಶಾಲೆಗಳ ಸಂಕೀರ್ಣ

ನಿರ್ಮಾಣ ಹಾಗೂ 85 ವಸತಿ ಶಾಲೆಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

- ಪಿ.ಯು.ಸಿ.ಯಿಂದ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ಮೊದಲ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ 68,863 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ 20,000 ರೂ.ಗಳಿಂದ 35,000 ರೂ.ಗಳವರೆಗೆ ನಗದು ಬಹುಮಾನ ವಿತರಿಸಲಾಗಿದ್ದು, ಇದಕ್ಕಾಗಿ 137 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

- ಕಳೆದ 4 ವರ್ಷಗಳಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 1.9 ಲಕ್ಷ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ನೀಡಲು 1,457 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

- ಕಳೆದ 4 ವರ್ಷಗಳಲ್ಲಿ 36,661 ಕೊಳವೆ ಬಾವಿಗಳನ್ನು ಕೊರೆಸಲಾಗಿದ್ದು, 34,851 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಜಮೀನು ಖರೀದಿ ಯೋಜನೆಯಡಿ 3,380 ಭೂ ರಹಿತ ಕೃಷಿ ಕಾರ್ಮಿಕ ಕುಟುಂಬಗಳಿಗೆ 186 ಕೋಟಿ ರೂ.ಗಳ ವೆಚ್ಚದಲ್ಲಿ 4,502 ಎಕರೆಗಳಷ್ಟು ಜಮೀನನ್ನು ಖರೀದಿಸಿ ನೀಡಲಾಗಿದೆ.

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಸಮುದಾಯಗಳ ಅನುಕೂಲಕ್ಕಾಗಿ 7,600 ಡಾ॥ ಬಿ.ಆರ್.ಅಂಬೇಡ್ಕರ್ ಭವನಗಳು, ಡಾ.ಬಾಬು ಜಗಜೀವನ್ ರಾಮ್ ಭವನಗಳು ಮತ್ತು ವಾಲ್ಮೀಕಿ ಭವನಗಳ ನಿರ್ಮಾಣಕ್ಕಾಗಿ 1,190 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ.

- ಕಳೆದ 3 ವರ್ಷಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳಿಂದ 2,485 ಕೋಟಿ ರೂ.ಗಳ ಅನುದಾನ ವೆಚ್ಚದೊಂದಿಗೆ ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆ ಅಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

- ಕಳೆದ 4 ವರ್ಷಗಳಲ್ಲಿ 1,133 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಶೇ.4 ರ ಬಡ್ಡಿ ದರದಲ್ಲಿ 572 ಕೋಟಿ ರೂ.ಗಳ ಸಾಲವನ್ನು ನೀಡಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

162. ಜಿಲ್ಲೆಗೆ ಒಂದರಂತೆ ತಲಾ 1 ಕೋಟಿ ರೂ. ವೆಚ್ಚದಲ್ಲಿ 30 ಮೊರಾರ್ಜಿ ವಸತಿ ಶಾಲೆಗಳನ್ನು ವಿಜ್ಞಾನ ಮತ್ತು ಗಣಿತ ವಿಷಯಗಳೊಂದಿಗೆ ಪಿ.ಯು.ಸಿ.ಗೆ ಮೇಲ್ದರ್ಜೆಗೇರಿಸಲಾಗುವುದು.

163. 2012–13ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ಅನುಕ್ರಮವಾಗಿ ಮಾಹೆಯಾನ 750 ರೂ. ಮತ್ತು 850 ರೂ. ನೀಡಲಾಗುತ್ತಿತ್ತು. ಪ್ರಸಕ್ತ ಸಾಲಿನಲ್ಲಿ 100 ರೂ.ಗಳಷ್ಟು ಹೆಚ್ಚಿಸಿ ಈ ಮೊತ್ತವನ್ನು 1,400 ರೂ. ಮತ್ತು 1,500 ರೂ.ಗಳಿಗೆ ನಿಗದಿಪಡಿಸಲಾಗಿದೆ.

164. 1 ಲಕ್ಷ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುವುದು.

165. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳ ಬಳಕೆಗಾಗಿ ಬುಕ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗುವುದು.

166. 1 ರಿಂದ 8ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನವನ್ನು 250 ರೂ.ಗಳಷ್ಟು ಹೆಚ್ಚಿಸಲಾಗುವುದು. ಈ ಕಾರ್ಯಕ್ರಮದಿಂದ 15 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 6 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

167. ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈಗಿರುವ 14 ಜಿಲ್ಲಾ ಕಛೇರಿಗಳ ಜೊತೆಗೆ 5 ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಕಚೇರಿಗಳನ್ನು ಆರಂಭಿಸಲಾಗುವುದು.

168. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಕೊರೆಯುವ ಘಟಕ ವೆಚ್ಚವನ್ನು 2.50 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹಾಗೂ ಸಬ್ಸಿಡಿಯನ್ನು 2 ಲಕ್ಷ ರೂ.ಗಳಿಂದ 2.5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಇದರ ಜೊತೆ ಈ ಫಲಾನುಭವಿಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಮೂಲಕ ಹನಿ ಹಾಗೂ ತುಂತುರು ನೀರಾವರಿ ಮತ್ತು ಕೃಷಿ ಹೊಂಡಗಳ ನಿರ್ಮಾಣಕ್ಕೆ ನೆರವು ಒದಗಿಸಲಾಗುವುದು.

169. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಭೂರಹಿತ ಕೃಷಿ ಕಾರ್ಮಿಕರಿಗೆ ಜಮೀನು ಖರೀದಿ ಯೋಜನೆಯಡಿ ಘಟಕ ವೆಚ್ಚವನ್ನು ಪ್ರಸ್ತುತದಲ್ಲಿ ಇರುವ 10 ಲಕ್ಷ ರೂ.ಗಳಿಂದ 15 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

170. ವೃತ್ತಿ ಕೌಶಲ್ಯ ಪಡೆದ 1400 ಪರಿಶಿಷ್ಟ ಜಾತಿ ಮತ್ತು 600 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ 5 ಲಕ್ಷ ರೂ.ಗಳವರೆಗಿನ ಘಟಕ ವೆಚ್ಚವನ್ನು ಹೊಂದಿರುವ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು 2.5 ಲಕ್ಷ ರೂ. ಅಥವಾ ಶೇ.50 ರಷ್ಟು ಯೋಜನಾ ವೆಚ್ಚ ಇವುಗಳಲ್ಲಿ

ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು.

171. ವಾಹನ ಚಾಲನಾ ಪರವಾನಗಿ ಹೊಂದಿರುವ 3500 ಪರಿಶಿಷ್ಟ ಜಾತಿ ಮತ್ತು 1500 ಪರಿಶಿಷ್ಟ ಪಂಗಡಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ.ಗಳವರೆಗೆ ಅಥವಾ ವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು.

172. ಈಗಿರುವ 14 ನಿರಾಶ್ರಿತರ (ಭಿಕ್ಷುಕರ) ಪರಿಹಾರ ಕೇಂದ್ರಗಳ ಜೊತೆಗೆ ಕೇಂದ್ರ ಪರಿಹಾರ ಸಮಿತಿಯಿಂದ ಹಾವೇರಿ, ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೆಚ್ಚುವರಿಯಾಗಿ 5 ಕೇಂದ್ರಗಳನ್ನು ತೆರೆಯಲಾಗುವುದು.

173. ಸಫಾಯಿ ಕರ್ಮಚಾರಿಗಳು ವಾಸಿಸುವ ಪ್ರದೇಶಗಳಲ್ಲಿ ನಗರಾಭಿವೃದ್ಧಿ ಇಲಾಖೆಯೊಂದಿಗೆ ಜಂಟಿಯಾಗಿ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು. ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಕರ್ನಾಟಕ ವಸತಿ ಶಿಕ್ಷಣಾ ಸಂಸ್ಥೆಗಳ ಸಂಘದ (KREIS) ಅಡಿಯಲ್ಲಿ ನಡೆಸಲಾಗುತ್ತಿರುವ ವಸತಿ ಶಾಲೆಗಳ ಪ್ರವೇಶಗಳಲ್ಲಿ ಆದ್ಯತೆ ನೀಡಲಾಗುವುದು.

174. ಜ್ಯೋತಿ ಸಂಜೀವಿನಿ ಆರೋಗ್ಯ ಸಂರಕ್ಷಣಾ ಯೋಜನೆ ಮಾದರಿಯಲ್ಲಿಯೇ ಸಫಾಯಿ ಕರ್ಮಚಾರಿಗಳಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗುವುದು.

175. ಕಾನೂನು ಪದವಿಧರರ ಮಾಸಿಕ ತರಬೇತಿ ಭತ್ಯೆಯನ್ನು 2000 ರೂ.ಗಳಿಂದ 5000 ರೂ.ಗಳಿಗೆ ಹೆಚ್ಚಿಸಲಾಗುವುದು.

176. ಹೆಚ್ಚು ಸಂಖ್ಯೆಯಲ್ಲಿ ಆದಿವಾಸಿಗಳು ನೆಲೆಸಿರುವ ಪ್ರದೇಶಗಳಲ್ಲಿ ಆದಿವಾಸಿ ಸಮುದಾಯ ಭವನಗಳನ್ನು ನಿರ್ಮಿಸಲು 15 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

177. ದಾವಣಗೆರೆ ಸೇವಾಲಾಲ್ ಟ್ರಸ್ಟ್‌ಗೆ ಮೂಲ ನಿಧಿಯಾಗಿ (ಕಾರ್ಪಸ್) 5 ಕೋಟಿ ರೂ.ಗಳನ್ನು ನೀಡಲಾಗುವುದು.

178. ಮುಖ್ಯಮಂತ್ರಿಯವರ ಮಾದರಿ ಗ್ರಾಮ ಯೋಜನೆಯಡಿಯಲ್ಲಿ ಶೇ.50 ಮತ್ತು ಅದಕ್ಕಿಂತ ಅಧಿಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಸಂಖ್ಯೆಯಿರುವ ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ಯೋಜನೆಯನ್ನು ಒಂದುಗೂಡಿಸಿ ಅನುದಾನವನ್ನು ಒದಗಿಸಲಾಗುವುದು.

179. ಬಿಪಿಎಲ್ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಗೃಹ ನಿರ್ಮಾಣಕ್ಕಾಗಿ ನಿಗದಿಪಡಿಸಲಾಗಿರುವ ಘಟಕ ವೆಚ್ಚವನ್ನು ಗ್ರಾಮೀಣ ಪ್ರದೇಶದಲ್ಲಿ 1.5 ಲಕ್ಷ ರೂ.ಗಳಿಂದ 1.75 ಲಕ್ಷ ರೂ.ಗಳಿಗೆ ಮತ್ತು ನಗರ ಪ್ರದೇಶಗಳಲ್ಲಿ 1.8 ಲಕ್ಷ ರೂ.ಗಳಿಂದ 2 ಲಕ್ಷ ರೂ.ಗಳಿಗೆ

ಹೆಚ್ಚಿಸಲಾಗುವುದು. ವ್ಯತ್ಯಾಸ ಮೊತ್ತವನ್ನು ವಸತಿ ಇಲಾಖೆಯ ಎಸ್‌ಸಿಪಿ / ಟಿಎಸ್‌ಪಿ ಅನುದಾನದಡಿ ಮಾಡಿರುವ ಹಂಚಿಕೆಯಲ್ಲಿ ಭರಿಸಲಾಗುವುದು.

180. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿಧವೆಯರು ಮರುವಿವಾಹವಾದಲ್ಲಿ ಅವರಿಗೆ 3 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡಲಾಗುವುದು.

181. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಯುವಕರು ಯುವತಿಯರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಮುದಾಯದ ಒಳಗೆ ಅಂತರಜಾತಿ ವಿವಾಹವಾದಲ್ಲಿ ಅಂತಹವರಿಗೆ 2 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುವುದು.

182. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿದಾರರು ಬ್ಯಾಂಕ್ ಮತ್ತು ಕೆಎಸ್‌ಎಫ್‌ಸಿಯಲ್ಲಿ ಸಾಲ ಪಡೆಯಲು ಸಮಾನಾಂತರ ಖಾತರಿ (collateral security) ಒದಗಿಸುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ ಸರ್ಕಾರವು Credit Guarantee Fund Trust ನೆರವಿನೊಂದಿಗೆ 100 ಕೋಟಿ ರೂ.ಗಳ ಮೂಲ ನಿಧಿಯನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸುವ ಮೂಲಕ ಸಮಾನಾಂತರ ಖಾತರಿಯನ್ನು ಒದಗಿಸಲಾಗುವುದು.

183. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಸತಿ ನಿಲಯಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಇಂಗ್ಲೀಷ್, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ವಿಶೇಷ ತರಬೇತಿಯ ವ್ಯವಸ್ಥೆ ಮಾಡಲಾಗುವುದು.

184. JEE / NEET / GATE / GRE ಮುಂತಾದ ಪರೀಕ್ಷೆಗಳ ಮುಖಾಂತರ ರಾಷ್ಟ್ರ ಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾಪೂರ್ವ ತರಬೇತಿ ನೀಡಲಾಗುವುದು.

185. ಸಂವಿಧಾನದ 5ನೇ ಅನುಸೂಚಿಯ ಉಪಬಂಧಗಳನ್ವಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ, ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಹಾಗೂ ಸಲಹೆ ನೀಡಲು ಕರ್ನಾಟಕ ಆದಿವಾಸಿಗಳ ಸಲಹಾ ಪರಿಷತ್ತನ್ನು ಸ್ಥಾಪಿಸಲು ಅನುಮೋದನೆ ಕೋರಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುವುದು.

186. ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿನಿಯಮದಡಿಯಲ್ಲಿ ರಚಿಸಿರುವ ಕೋಶವನ್ನು ಸಶಕ್ತಗೊಳಿಸಲಾಗುವುದು.

187. ಜೇನುಕುರುಬ, ಕೊರಗ, ಸೋಲಿಗ, ಕಾಡುಕುರುಬ, ಎರವ, ಗೌಡಲು, ಹಸಲುರು, ಇರುಳಿಗ , ಸಿದ್ಧಿ, ಮಲೆಕುಡಿಯ, ಹಕ್ಕಿ–ಪಿಕ್ಕಿ, ತೋಡ, ಮೇದ ಇತ್ಯಾದಿ ಆದಿವಾಸಿ ಸಮುದಾಯಗಳ ಅಭಿವೃದ್ಧಿಗೆ ಮತ್ತು ಸ್ವಯಂ ಉದ್ಯೋಗ ಕಲ್ಪಿಸಲು ಪ್ರೋತ್ಸಾಹ ನೀಡಲಾಗುವುದು. ಈ ಉದ್ದೇಶಕ್ಕಾಗಿ 200 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

188. ಮೇಲ್ಕಂಡ ಆದಿವಾಸಿ ಸಮುದಾಯಗಳು ಅರಣ್ಯದಲ್ಲಿ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಅರಣ್ಯ ಸಂರಕ್ಷಣೆ ಬಗ್ಗೆ ಅನುಭವ ಇರುವುದರಿಂದ ಸರ್ಕಾರಿ ಉದ್ಯೋಗಗಳಲ್ಲಿ ಇವರ ಪ್ರಾತಿನಿಧ್ಯ ಕಡಿಮೆ ಇರುವುದರಿಂದ ಅರಣ್ಯ ಇಲಾಖೆಯ ಗಾರ್ಡ್, ವಾಚರ್ ಇತ್ಯಾದಿ ಹುದ್ದೆಗಳಿಗೆ ವಿಶೇಷ ನಿಯಮಗಳನ್ನು ರೂಪಿಸಿ ನೇಮಕ ಮಾಡಲು ಕ್ರಮವಹಿಸಲಾಗುವುದು.

189. ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕಾಭಿವೃದ್ಧಿಗಾಗಿ 40,000 ರೂ. ಘಟಕ ವೆಚ್ಚದಲ್ಲಿ ನೇರ ಸಾಲ ಯೋಜನೆಯಡಿ 15,000 ರೂ. ಸಹಾಯಧನ, ಶೇ.4ರ ಬಡ್ಡಿದರದಲ್ಲಿ 25,000 ರೂ. ಸಾಲವನ್ನು ಎಮ್ಮೆ–ಹಸು ಅಥವಾ ಕುರಿ–ಮೇಕೆ ಇವುಗಳನ್ನು ವಿತರಿಸಲು 300 ಕೋಟಿ ರೂ. ಒದಗಿಸಲಾಗುವುದು.

190. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 2 ಲಕ್ಷ ಬಿ.ಪಿ.ಎಲ್. ಕುಟುಂಬಗಳಿಗೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಹಯೋಗದೊಂದಿಗೆ "ಅಡುಗೆ ಅನಿಲ" ಸಂಪರ್ಕ ಕಲ್ಪಿಸಲು 100 ಕೋಟಿ ರೂ. ಒದಗಿಸಲಾಗುವುದು.

191. 2017–18ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 6,363 ಕೋಟಿ ರೂ. ಒದಗಿಸಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ

192. **ಕಳೆದ 4 ವರ್ಷಗಳ ಸಾಧನೆಗಳು**

- 319 ಕೋಟಿ ರೂ. ವೆಚ್ಚದಲ್ಲಿ ವಿದ್ಯಾಸಿರಿ ಯೋಜನೆಯಡಿ 2.7 ಲಕ್ಷ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗೆ ಧನಸಹಾಯವನ್ನು ಮಂಜೂರು ಮಾಡಲಾಗಿದೆ.

- 1106 ಕೋಟಿ ರೂ ವೆಚ್ಚದಲ್ಲಿ 20.5 ಲಕ್ಷ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಸಲಾಗಿದೆ.

- 547 ಕೋಟಿ ರೂ ವೆಚ್ಚದಲ್ಲಿ 38 ಲಕ್ಷ ಮೆಟ್ರಿಕ್–ಪೂರ್ವ ಮತ್ತು 12.1 ಲಕ್ಷ ಮೆಟ್ರಿಕ್–ನಂತರದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

- 27 ಕೋಟಿ ವೆಚ್ಚದಲ್ಲಿ 2,799 ಅಭ್ಯರ್ಥಿಗಳಿಗೆ ಐಎಎಸ್ / ಕೆ.ಎ.ಎಸ್ / ಬ್ಯಾಂಕಿಂಗ್ ಪರೀಕ್ಷಾ ಪೂರ್ವ ತರಬೇತಿ ನೀಡಿದ್ದು, ಇದುವರೆಗೆ 107 ಅಭ್ಯರ್ಥಿಗಳು ಐ.ಪಿ.ಎಸ್ / ಐ.ಆರ್.ಎಸ್ ಮತ್ತು ಬ್ಯಾಂಕಿಂಗ್ ಸೇವೆಗೆ ಆಯ್ಕೆಯಾಗಿರುತ್ತಾರೆ.

- 16.6 ಕೋಟಿ ರೂ ವೆಚ್ಚದಲ್ಲಿ 99 ವಿದ್ಯಾರ್ಥಿಗಳಿಗೆ ವಿದೇಶ ವ್ಯಾಸಂಗ ವೇತನವನ್ನು ನೀಡಲಾಗಿದೆ.

- 533 ಮೆಟ್ರಿಕ್–ನಂತರ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿದ್ದು, ಇದರಿಂದ 33,400 ವಿದ್ಯಾರ್ಥಿಗಳಿಗೆ ಸೌಲಭ್ಯ ದೊರೆತಿದೆ.

- 230.5 ಕೋಟಿ ರೂ ವೆಚ್ಚದಲ್ಲಿ ಈವರೆಗೆ 1,741 ಸಂಸ್ಥೆಗಳಿಗೆ ವಿವಿಧ ಸಮುದಾಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಮುದಾಯ ಭವನ ಮತ್ತು ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆ.

- 271.3 ಕೋಟಿ ರೂಗಳ ವೆಚ್ಚದಲ್ಲಿ ಹಿಂದುಳಿದ ವರ್ಗಗಳ 230 ವಿದ್ಯಾರ್ಥಿನಿಲಯಗಳ ಸ್ವಂತ ಕಟ್ಟಡ ನಿರ್ಮಾಣ ಕೈಗೊಂಡಿದ್ದು, ಈ ಪೈಕಿ 56 ವಿದ್ಯಾರ್ಥಿನಿಲಯಗಳ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡಿದ್ದು, 174 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿವೆ.

- 238 ಕೋಟಿ ರೂ. ವೆಚ್ಚದಲ್ಲಿ ಅಲೆಮಾರಿ / ಅರೆಅಲೆಮಾರಿ ಜನಾಂಗದ ಆರ್ಥಿಕ, ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳಿಗಾಗಿ 1.63 ಲಕ್ಷ ಫಲಾನುಭವಿಗಳಿಗೆ ಅನುದಾನ ನೀಡಲಾಗಿದೆ.

- 765.2 ಕೋಟಿ ರೂ ವೆಚ್ಚದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಡಿಯಲ್ಲಿ ಹಿಂದುಳಿದ ವರ್ಗಗಳ ಆರ್ಥಿಕಾಭಿವೃದ್ಧಿಗಾಗಿ ಒಟ್ಟು 2.10 ಲಕ್ಷ ಫಲಾನುಭವಿಗಳಿಗೆ ಸಾಲ/ಸಹಾಯಧನ ನೀಡಲಾಗಿದೆ.

- 284 ಕೋಟಿ ರೂ ವೆಚ್ಚದಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆಯಡಿಯಲ್ಲಿ 20,107 ಸಣ್ಣ ಮತ್ತು ಅತಿ ಸಣ್ಣ ರೈತರ 50,267 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ನೀಡಲಾಗಿದೆ.

- 1977 ರಿಂದಲೂ ನಿಗಮದ ಎಲ್ಲಾ ಯೋಜನೆಗಳಡಿ ದಿನಾಂಕ: 13.05.2013 ರವರೆಗೆ 4.98 ಲಕ್ಷ ಫಲಾನುಭವಿಗಳಿಂದ ವಸೂಲಾತಿಗೆ ಬಾಕಿ ಇದ್ದ ಅಸಲು ಮತ್ತು ಬಡ್ಡಿ 514 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಮನ್ನಾ ಮಾಡಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

193. 300 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಕಾಮಗಾರಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದಲ್ಲದೆ, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒತ್ತು ನೀಡಲಾಗುವುದು. ಇದಕ್ಕಾಗಿ 279 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

194. ಇ–ಆಡಳಿತ ಇಲಾಖೆಯ ನೆರವಿನೊಂದಿಗೆ 202 ವೃತ್ತೀಯ, ಸ್ನಾತಕೋತ್ತರ ಮತ್ತು ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಹಾಸ್ಟೆಲ್‌ಗಳಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸಲಾಗುವುದು.

195. IIM, IIT, IISC ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ಸಮುದಾಯದ ವಿದ್ಯಾರ್ಥಿಗಳಿಗೆ ಒಂದು ಬಾರಿ ತಲಾ 2 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡಲು ಉದ್ದೇಶಿಸಿದೆ.

196. ಮೊದಲ ಪ್ರಯತ್ನದಲ್ಲೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಹಾಗೂ ಸ್ನಾತಕೋತ್ತರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನವನ್ನು ಅನುಕ್ರಮವಾಗಿ 200 ರೂ.ಗಳಿಂದ 1000 ಕ್ಕೆ, 300 ರೂ.ಗಳಿಂದ 1500 ಕ್ಕೆ, 400 ರೂ.ಗಳಿಂದ

2000ಕ್ಕೆ ಹಾಗೂ 500 ರೂ.ಗಳಿಂದ 3000 ರೂ.ಗಳಿಗೆ ಹೆಚ್ಚಿಸಲಾಗುವುದು.

197. ಹಾಸ್ಟೆಲ್ ವಿದ್ಯಾರ್ಥಿಗಳ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳು, ಕ್ಷೌರ ಹಾಗೂ ಸಮವಸ್ತ್ರ ವೆಚ್ಚಗಳನ್ನು ಅನುಕ್ರಮವಾಗಿ 200 ರೂ.ಗಳಿಂದ 400ಕ್ಕೆ, 150 ರೂ.ಗಳಿಂದ 300 ಕ್ಕೆ ಹಾಗೂ 499 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಲಾಗುವುದು.

198. ಸರ್ಕಾರಿ ಹಾಸ್ಟೆಲ್‌ಗಳ/ವಸತಿ ಹಾಗೂ ಆಶ್ರಮ ಶಾಲೆಗಳ ಆಹಾರ ಭತ್ಯೆಯನ್ನು ಪ್ರತಿ ವಿದ್ಯಾರ್ಥಿಗೆ ಮಾಸಿಕ 100 ರೂ.ಗಳಷ್ಟು ಹೆಚ್ಚಿಸಲಾಗಿದೆ.

199. ಸೇನೆಗಳಿಗೆ ಆಯ್ಕೆಯಾಗುವ ಅವಕಾಶಗಳನ್ನು ಹೆಚ್ಚಿಸಲು 3000 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.

200. ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

- ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು 40,000/– ರೂ.ಗಳ (10,000/– ರೂ. ಸಹಾಯಧನ ಮತ್ತು ಶೇ. 4ರ ಬಡ್ಡಿ ದರದಲ್ಲಿ 30,000/– ರೂ. ಸಾಲ) ಆರ್ಥಿಕ ನೆರವನ್ನು ನೀಡಲಾಗುವುದು.

- ಮಡಿವಾಳ, ಸವಿತಾ ಸಮಾಜ, ತಿಗಳ, ಕುಂಬಾರ ಸಮುದಾಯಗಳ ಅಭಿವೃದ್ಧಿಗಾಗಿ 60 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

- ವಾಹನ ಚಾಲನಾ ಪರವಾನಗಿಯನ್ನು ಹೊಂದಿರುವ 1000 ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿಗಳನ್ನು ಖರೀದಿಸಲು 3 ಲಕ್ಷ ರೂ.ಗಳವರೆಗೆ ಅಥವಾ ವಾಹನದ ಶೇ.50ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನ ನೀಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಬಹುದು.

- ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಸಾರಾಯಿ ವೆಂಡರು ಮೂರ್ತೆದಾರ, ಈಡಿಗ ಇತ್ಯಾದಿ ಸಮುದಾಯಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ನೀಡಲಾಗುವುದು.

201. ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಅನುಷ್ಠಾನ ಹಂತದಲ್ಲಿರುವ ಕಾರ್ಯಕ್ರಮಗಳ ಜೊತೆಗೆ ಈ ಕೆಳಕಂಡ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

- ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ ಅಡಿ 15,000/– ರೂ.ಗಳ ಘಟಕ ವೆಚ್ಚದಲ್ಲಿ ಶೇ.4ರ ಬಡ್ಡಿ ದರದಲ್ಲಿ 10,000/– ರೂ.ಗಳ ಸಾಲವನ್ನು ಹಾಗೂ 5,000/– ರೂ.ಗಳ ಸಹಾಯಧನ ಒದಗಿಸಲಾಗುವುದು.

- ವಿಶ್ವಕರ್ಮ ಸಮುದಾಯದವರು ಮಾಡುವ ಕೆಲಸಗಳಾದ ಕಮ್ಮಾರಿಕೆ, ಅಕ್ಕಸಾಲಿ ಮತ್ತು ಬಡಗಿ ಕೆಲಸಗಳಲ್ಲಿ ತಮ್ಮ ವೃತ್ತಿ ಕೌಶಲ್ಯಗಳನ್ನು ಇನ್ನಷ್ಟು ಸುಧಾರಿಸಿಕೊಳ್ಳಲು ಹಾಗೂ ಆಧುನಿಕ ಸಲಕರಣೆಗಳನ್ನು ಖರೀದಿಸಲು, 300 ಜನರಿಗೆ ತಲಾ 1.5 ಲಕ್ಷ ರೂ.ಗಳ ಅನುದಾನ ಒದಗಿಸಲಾಗುವುದು.

- "ಪಂಚವೃತ್ತಿ ಆರ್ಥಿಕ ನೆರವು ಯೋಜನೆ"ಯಡಿ 50,000/– ರೂ.ಗಳ ಘಟಕ ವೆಚ್ಚವನ್ನು ತಲಾ 1 ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಲಾಗುವುದು.

202. ಉಪ್ಪಾರ ಮತ್ತು ಇದರ ಉಪಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗುವುದು.

203. ಬೆಸ್ತ, ಕಬ್ಬಲಿಗ, ಕೋಲಿ, ಗಂಗಮತ, ಮೊಗವೀರ ಮತ್ತು ಇವುಗಳ ಉಪಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗುವುದು.

204. ಕೇಂದ್ರ ರಕ್ಷಣಾ ಮಂತ್ರಾಲಯದ ಸಹಯೋಗದೊಂದಿಗೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯನ್ನು ಸ್ಥಾಪಿಸಲಾಗುವುದು.

205. ಕಾನೂನು ಪದವಿಧರರ ಮಾಸಿಕ ತರಬೇತಿ ಭತ್ಯೆಯನ್ನು 2000 ರೂ.ಗಳಿಂದ 4000 ರೂ.ಗಳಿಗೆ ಹೆಚ್ಚಿಸಲಾಗುವುದು.

206. ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್., ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ತಿಳುವಳಿಕೆ ಹೆಚ್ಚಿಸಲು ಮತ್ತು ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

207. ಹಿಂದುಳಿದ ವರ್ಗಗಳು, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳು ನಿರ್ವಹಿಸುತ್ತಿರುವ 1 ರಿಂದ 5ನೇ ತರಗತಿವರೆಗಿನ ಆಶ್ರಮ ಶಾಲೆಗಳ/ವಸತಿ ಶಾಲೆಗಳ ಶೈಕ್ಷಣಿಕ ನಿರ್ವಹಣೆಯನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗುವುದು.

208. ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಲಾಗುವುದು.

209. ಬುಡಬುಡಕಿ, ಗೊಂದಳಿ, ಹೆಳವ, ಪಿಚಗುಂಟ, ಜೋಗಿ, ಗೊಲ್ಲ, ಶಿಕ್ಕಲಿಗಾರ, ಹಾವುಗಾರ ಇತ್ಯಾದಿ ಅಲೆಮಾರಿ ಮತ್ತು

ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿಗೆ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

210. 100 ವಿದ್ಯಾರ್ಥಿಗಳಿಗೆ ವಿದೇಶ ವ್ಯಾಸಂಗ ವೇತನವನ್ನು ಮಂಜೂರು ಮಾಡಲಾಗುವುದು.

211. 2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 3,154 ಕೋಟಿ ರೂ. ಒದಗಿಸಲಾಗಿದೆ.

## ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್

212. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಜನಸ್ನೇಹಿ ಆನ್‌ಲೈನ್ ಪದ್ಧತಿ ಅಳವಡಿಸಿದ ನಂತರ ನವೀಕರಣ ಅರ್ಜಿಗಳ ವಿಧಾನ ಸರಳೀಕೃತ ವಾಗಿರುವುದರಿಂದ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಮತ್ತು ಮೆರಿಟ್–ಕಮ್–ಮೀನ್ಸ್ ವಿದ್ಯಾರ್ಥಿವೇತನ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 5.5 ಲಕ್ಷದಿಂದ 13.18 ಲಕ್ಷಕ್ಕೆ ಗಣನೀಯವಾಗಿ ಏರಿಕೆಯಾಗಿದೆ. ಕರ್ನಾಟಕವು ಇಡೀ ಭಾರತದಲ್ಲಿ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿರುವ ಏಕೈಕ ರಾಜ್ಯವಾಗಿದೆ.

- ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಯೋಜನೆಯಡಿ ನೀಡುವ 20 ಲಕ್ಷ ರೂ.ಗಳ ವಿದ್ಯಾರ್ಥಿವೇತನ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ 20 ರಿಂದ 357ಕ್ಕೆ ಏರಿಕೆಯಾಗಿದೆ.

- ಕಳೆದ 13 ವರ್ಷಗಳಿಂದ 124 ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು. ಕಳೆದ ನಾಲ್ಕು ವರ್ಷಗಳಲ್ಲಿ 150 ಹೊಸ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದ್ದು, ಒಟ್ಟು 16,300 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

- ಕಳೆದ 13 ವರ್ಷಗಳಲ್ಲಿ 47 ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಗಳು ಹಾಗೂ 03 ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದವು. ಕಳೆದ ನಾಲ್ಕು ವರ್ಷಗಳಲ್ಲಿ ಅಲ್ಪಸಂಖ್ಯಾತರಿಗೆ 40 ಹೊಸ ವಸತಿ ಶಾಲೆ/ಕಾಲೇಜುಗಳನ್ನು ತೆರೆಯಲಾಗಿದ್ದು 17,210 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

- ಕಳೆದ ನಾಲ್ಕು ವರ್ಷಗಳಲ್ಲಿ ಬಿದಾಯಿ ಯೋಜನೆಯಡಿ ಸುಮಾರು ರೂ. 125 ಕೋಟಿಗಳನ್ನು ವೆಚ್ಚಮಾಡಲಾಗಿದ್ದು ಇದರಿಂದ 25,000 ಫಲಾನುಭವಿಗಳು ಪ್ರಯೋಜನ ಪಡೆದಿರುವರು.

- ಶಾದಿಮಹಲ್ / ಸಮುದಾಯ ಭವನಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ 137 ಕೋಟಿ ರೂ. ಅನುದಾನ ಒದಗಿಸಲಾಗಿದ್ದು, 580 ಸಂಸ್ಥೆಗಳು ಇದರ ಪ್ರಯೋಜನ ಪಡೆದಿರುವರು. ಸುಮಾರು 200 ಅಪೂರ್ಣ ಶಾದಿಮಹಲ್‌ಗಳಿಗೆ 50 ಕೋಟಿ ರೂ. ಅನುದಾನ ಒದಗಿಸಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

- ಅರಿವು ಯೋಜನೆಯಡಿ 230 ಕೋಟಿ ರೂ.ಗಳ ಹಣಕಾಸು ನೆರವು ನೀಡಲಾಗಿದ್ದು ಇದರಿಂದ 78,536 ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳು ಲಾಭ ಪಡೆದಿದ್ದಾರೆ.

- ಮೌಜನ್ ಮತ್ತು ಪೇಷ್ ಇಮಾಮ್ ರವರಿಗೆ ಗೌರವಧನ ಯೋಜನೆಯಡಿ 108 ಕೋಟಿ ರೂ.ಗಳ ಅನುದಾನ ನೀಡಲಾಗಿದ್ದು, 5,111 ಪೇಷ್ ಇಮಾಮ್ ಮತ್ತು 4,964 ಮೌಝನ್‌ಗಳು ಪ್ರತಿ ವರ್ಷ ಇದರ ಪ್ರಯೋಜನ ಪಡೆಯುತ್ತಿದ್ದಾರೆ.

- ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸಂರಕ್ಷಣೆಗೆ 79 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದ್ದು, 3653 ಸಂಸ್ಥೆಗಳು ಇದರ ಪ್ರಯೋಜನ ಪಡೆದಿರುವರು. ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಗಣಕೀಕರಣ ಕಾರ್ಯ ಪ್ರಗತಿಯಲ್ಲಿದ್ದು, ಎರಡನೇ ಸರ್ವೆ ಕಾರ್ಯವನ್ನು ಸಹ ಕೈಗೊಳ್ಳಲಾಗಿದೆ. ಒಟ್ಟು 12,090 ವಕ್ಫ್ ಆಸ್ತಿಗಳ ಸರ್ವೆಗಳಲ್ಲಿ 8,129 ಸರ್ವೆ ಕಾರ್ಯ

ಪೂರ್ಣಗೊಂಡಿರುತ್ತದೆ. ಬಾಕಿ 3,217 ಸರ್ವೆಕಾರ್ಯ ಪ್ರಗತಿಯಲ್ಲಿರುತ್ತದೆ.

- ಕ್ರಿಶ್ಚಿಯನ್ ಅಭಿವೃದ್ಧಿ ಯೋಜನೆಯಡಿ ಕಳೆದ ನಾಲ್ಕು ವರ್ಷಗಳಲ್ಲಿ 267 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದ್ದು, 59,036 ಚರ್ಚ್ ದುರಸ್ಥಿ/ನವೀಕರಣ ಸಹಾಯಧನ, ಸಮುದಾಯಭವನ, ಕೌಶಲ್ಯ ಅಭಿವೃದ್ಧಿ ಯೋಜನೆ, ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅನಾಥಾಶ್ರಮ / ವೃದ್ಧಾಶ್ರಮಗಳಿಗೆ ಸಹಾಯಧನ, ನರ್ಸಿಂಗ್‌ಗೆ ವೆಚ್ಚ ಮಾಡಲಾಗಿದೆ.

- 47 ಕೋಟಿ ರೂ. ಹೆಚ್ಚುವರಿಯಾಗಿ ಒದಗಿಸಿ ಬೆಂಗಳೂರಿನ ಹಜ್ ಭವನವನ್ನು ಪೂರ್ಣಗೊಳಿಸಿ ಹಜ್ ಯಾತ್ರಿಗಳ ಬಳಕೆಗೆ ತೆರೆಯಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

213. ಬೆಂಗಳೂರಿನಲ್ಲಿ ಅಲ್ಪಸಂಖ್ಯಾತರ ಇಲಾಖೆಯ ಎಲ್ಲಾ ಕಛೇರಿಗಳನ್ನು ಹಾಗೂ ಒಂದು ಸಭಾಂಗಣವನ್ನು ಒಳಗೊಂಡ ಮೌಲಾನಾ ಅಬುಲ್ ಕಲಾಂ ಆಜಾದ್ ಭವನ, ಉರ್ದು ಕನ್ವೇಷನ್ ಹಾಲ್ ಮತ್ತು ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

214. ವಕ್ಫ್ ಸಂಸ್ಥೆಗಳ ನಿರ್ವಹಣೆ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲು ಬೆಂಗಳೂರಿನಲ್ಲಿ ತರಬೇತಿ ಕೇಂದ್ರ ಪ್ರಾರಂಭಿಸಲಾಗುವುದು.

215. ಶಾಲೆಗಳಿಂದ ಹೊರ ಉಳಿದ ಅಲ್ಪಸಂಖ್ಯಾತರ ಮಕ್ಕಳನ್ನು ಮರಳಿ ಶಾಲೆಗೆ ತರಲು ಈಗಾಗಲೇ ಮುಚ್ಚಲ್ಪಟ್ಟಿರುವ ಸರ್ಕಾರಿ ಉರ್ದು ಶಾಲೆ / ಜಾಗದಲ್ಲಿ 200 ಮೌಲಾನ ಆಜಾದ್ ಮಾದರಿ ಶಾಲೆಗಳನ್ನು ಮುಂದಿನ 2 ವರ್ಷಗಳಲ್ಲಿ ತೆರೆಯಲಾಗುವುದು.

216. ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಮಹಿಳೆಯರಿಗಾಗಿ ತಲಾ 2 ಕೋಟಿ ರೂ. ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ತೆರೆಯಲಾಗುವುದು.

217. ಶಾದಿಮಹಲ್ ಯೋಜನೆಯಡಿ ವಕ್ಫ್ ಮತ್ತು ಅರೆ ಸರ್ಕಾರಿ ಸಂಸ್ಥೆ, ಟ್ರಸ್ಟ್‌ಗಳಿಗೆ ಅನುದಾನ ನೀಡಲಾಗುತ್ತಿದ್ದು, ಇನ್ನು ಮುಂದೆ ವಕ್ಫ್ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಜಿಲ್ಲಾ ಕೇಂದ್ರದಲ್ಲಿ 2 ಕೋಟಿ ರೂ. ತಾಲ್ಲೂಕು ಕೇಂದ್ರ ಮತ್ತು ಇತರೆ ಪ್ರದೇಶಗಳಲ್ಲಿ 1 ಕೋಟಿ ರೂ. ಗಳ ಅನುದಾನದಲ್ಲಿ ಇಲಾಖಾ ವತಿಯಿಂದ ಶಾದಿಮಹಲ್ / ಸಮುದಾಯ ಭವನ ಕಟ್ಟಡ ನಿರ್ಮಿಸಿ ಸಂಬಂಧಪಟ್ಟ ಸಂಸ್ಥೆಗಳಿಗೆ ಹಸ್ತಾಂತರಿಸಲಾಗುವುದು.

218. ಅನಾಥಾಲಯ, ವೃದ್ಧಾಶ್ರಮ, ಹೆಚ್.ಐ.ವಿ / ಏಡ್ಸ್ ರೋಗಿಗಳು ಮತ್ತು ವಿಕಲ ಚೇತನ ವ್ಯಕ್ತಿಗಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಕ್ರಿಶ್ಚಿಯನ್ ಸಂಸ್ಥೆಗಳಿಗೆ ನೀಡುತ್ತಿರುವ ಹಣಕಾಸಿನ ನೆರವಿನ ಮಾದರಿಯಲ್ಲಿ ಇತರೆ ಅಲ್ಪಸಂಖ್ಯಾತರ ಸಮುದಾಯದ ಸಂಸ್ಥೆಗಳಿಗೂ ನೆರವು ನೀಡಲಾಗುವುದು.

219. IIM, IIT, IISC ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಅಲ್ಪಸಂಖ್ಯಾತ ವರ್ಗಗಳ ಸಮುದಾಯದ ವಿದ್ಯಾರ್ಥಿಗಳಿಗೆ ಒಂದು ಬಾರಿ ತಲಾ 2 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡಲು ಉದ್ದೇಶಿಸಿದೆ.

220. ಈ ಮೇಲೆ ಹೇಳಿದ ಅಂಶಗಳ ಜೊತೆಗೆ ಮುಂದಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

- ಹೊಸದಾಗಿ ಅಲ್ಪಸಂಖ್ಯಾತರ 20 ಮೊರಾರ್ಜಿ ದೇಸಾಯಿ ವಸತಿ ಶಾಲೆ, 05 ಪದವಿ ಪೂರ್ವ ಕಾಲೇಜು, 02 ಮಾದರಿ ವಸತಿ ಶಾಲೆಗಳನ್ನು ತೆರೆಯಲಾಗುವುದು ಹಾಗೂ 25 ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗುವುದು.

- MSDP ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ 15 ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ /

ಮಾದರಿ / ಆದರ್ಶ ಶಾಲೆ / ವಸತಿ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.

- ಸರ್ಕಾರಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ಎಲ್ಲಾ ವಸತಿ ಶಾಲೆಯ/ ಕಾಲೇಜುಗಳ ಪ್ರತಿ ವಿದ್ಯಾರ್ಥಿಗೆ ಆಹಾರ ಭತ್ಯೆಯನ್ನು 100 ರೂ.ಗಳಷ್ಟು ಹೆಚ್ಚಿಸಲಾಗುವುದು.

- ಅಲ್ಪಸಂಖ್ಯಾತರ 100 ವಿದ್ಯಾರ್ಥಿನಿಲಯ / 70 ವಸತಿ ಶಾಲೆ / 11 ಕಾಲೇಜುಗಳಲ್ಲಿ ಕೆಸ್ವಾನ್ ಸಹಯೋಗದೊಂದಿಗೆ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಮಾಡಲಾಗುವುದು.

- ಗುರು ಗೋವಿಂದ ಸಿಂಗ್‌ಜೀರವರ 350ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಸಿಖ್ ಸಮುದಾಯದ ಸಂಸ್ಕೃತಿ ಮತ್ತು ಪರಂಪರೆ ಸಂರಕ್ಷಿಸಲು ಬೀದರ್‌ನಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ. ಅನುದಾನ ಒದಗಿಸಲಾಗುವುದು.

- ಸಿಖ್ ಸಮುದಾಯದ ಗುರುದ್ವಾರಗಳ ಜೀರ್ಣೋದ್ಧಾರಕ್ಕಾಗಿ ತಲಾ 10 ಲಕ್ಷ ರೂ. ಸಹಾಯಧನ ಒದಗಿಸಲಾಗುವುದು.

- ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿಗಾಗಿ 175 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಜಾರಿಯಲ್ಲಿರುವ ಯೋಜನೆಗಳೊಂದಿಗೆ ಸ್ಮಶಾನಕ್ಕೆ ಗೋಡೆ ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸಲಾಗಿವುದು.

- ಅಲ್ಪಸಂಖ್ಯಾತರ ನಿರುದ್ಯೋಗಿಗಳಿಗೆ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಪತ್ರಿಕೋದ್ಯಮ ತರಬೇತಿ, ಐಐಟಿ, ಐಐಎಂ ಪದವಿ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮಗ್ರ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು. ಮತ್ತು ಅಲ್ಪಸಂಖ್ಯಾತರ ಸಮುದಾಯದ 1000 ಅಭ್ಯರ್ಥಿಗಳಿಗೆ ಸೇನೆಯಲ್ಲಿ ನೇಮಕಾತಿ ಪಡೆಯುವ ಸಲುವಾಗಿ ಪೂರ್ವಭಾವಿ ತರಬೇತಿ ಹಾಗೂ ವಿವಿಧ ಸರ್ಕಾರಿ ಸಂಸ್ಥೆಗಳ ಮೂಲಕ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪೂರ್ವಭಾವಿ ತರಬೇತಿ ನೀಡಲಾಗುವುದು.

- ಮುಸ್ಲಿಂ ಬಾಲಕ ಹಾಗೂ ಬಾಲಕಿಯರ ಅನಾಥಾಲಯ, ಅಶೋಕ ರಸ್ತೆ, ಮೈಸೂರು ರವರ ಸಂಸ್ಥೆಗೆ ಶೈಕ್ಷಣಿಕ ಮತ್ತು ಮೂಲಭೂತ ಸೌಕರ್ಯಕ್ಕೆ 2 ಕೋಟಿ ರೂ. ಅನುದಾನ ನೀಡಲಾಗುವುದು.

- ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮುರುಗಮಲ್ಲಾದಲ್ಲಿರುವ ಧಾರ್ಮಿಕ ಯಾತ್ರಾಸ್ಥಳದ

ಮೂಲಭೂತ ಸೌಕರ್ಯ ಹಾಗೂ ಮಾನಸಿಕ ಆರೋಗ್ಯ ಕೇಂದ್ರ (Rehabilitation Centre)ಗೆ 2 ಕೋಟಿ ರೂ. ಅನುದಾನ ಒದಗಿಸಲಾಗುವುದು.

- ಪೇಷ್ ಇಮಾಮ್ ರವರಿಗೆ ಹಾಲಿ ಇರುವ ಗೌರವಧನವನ್ನು 3,100 ರೂ.ಗಳಿಂದ 4,000 ರೂ.ಗಳಿಗೆ ಹಾಗೂ ಮೌಜನ್ ರವರ ಗೌರವಧನವನ್ನು 2,500 ರೂ.ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲಾಗುವುದು.

221. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 330 ಕೋಟಿ ರೂ.ಗಳ ಅನುದಾನ ನೀಡಲಾಗುವುದು. ಅದರಲ್ಲಿ ಜಾರಿಯಲ್ಲಿ ಇರುವ ಯೋಜನೆಗಳ ಜೊತೆಗೆ ಈ ಕೆಳಕಂಡ ಹೊಸ ಯೋಜನೆಗಳನ್ನು ಹಮ್ಮಿಕೊಳಲಾಗುವುದು.

- ಅಲ್ಪಸಂಖ್ಯಾತರ ಸಮುದಾಯಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ಟಿಲ್ಲರ್, ಉಕ್ಕಿನ ನೇಗಿಲು, ಡ್ರಿಲ್ಸ್, ಕಳೆ ಕೀಳುವ ಯಂತ್ರ, ಪಂಪ್‌ಸೆಟ್ ಟ್ರಾಕ್ಟರ್ ಮುಂತಾದ ನೂತನ ಕೃಷಿ ಸಲಕರಣೆಗಳನ್ನು ಶೇ.50 ರಷ್ಟು ಸಹಾಯಧನ ಸೇರಿ ಗರಿಷ್ಟ 1 ಲಕ್ಷ ರೂ. ಘಟಕ ವೆಚ್ಚದಲ್ಲಿ ನೀಡಲಾಗುವುದು.
- ಪಶುಸಂಗೋಪನೆಗೆ ಉತ್ತೇಜನ ನೀಡಿ ಅಲ್ಪಸಂಖ್ಯಾತರು ನಿರಂತರ ಆದಾಯ ಹೊಂದುವ ಸಲುವಾಗಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಮುಂತಾದ ಕೃಷಿ

ಸಂಬಂಧಿತ ಚಟುವಟಿಕೆಗಳನ್ನು ನಡೆಸಲು ಶೇ.50 ರಷ್ಟು ಸಹಾಯಧನ ಸೇರಿ 40,000 ರೂ. ಘಟಕ ವೆಚ್ಚದಲ್ಲಿ ಸಹಾಯ ನೀಡಲಾಗುವುದು.

- ಆಟೋ ಸರ್ವಿಸ್, ಆಟೋ ಮೊಬೈಲ್, ಬಿದರಿ ಮತ್ತು ರೇಷ್ಮೆ ಚಟುವಟಿಕೆಗಳಿಗೆ ತರಬೇತಿ ಪ್ರೋತ್ಸಾಹ ಮತ್ತು ಮೂಲಭೂತ ಸೌಕರ್ಯ ನೀಡಲಾಗುವುದು.
- **'ಮನೆ ಮಳಿಗೆ'** ಯೋಜನೆಯಡಿ ವಿಶೇಷ /ದುರ್ಬಲ ವರ್ಗದವರಿಗೆ ನಿಗಮದ ವತಿಯಿಂದ 5 ಲಕ್ಷ ರೂ. ಘಟಕ ವೆಚ್ಚದಲ್ಲಿ ಶೇ.50 ಸಹಾಯಧನ ಹಾಗೂ ಶೇ.50 ಸಾಲ ಯೋಜನೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ.
- 500 ಫಲಾನುಭವಿಗಳಿಗೆ ಟ್ಯಾಕ್ಸಿ ಖರೀದಿಸಲು ತಲಾ 3 ಲಕ್ಷ ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ನೀಡಲಾಗುವುದು.

222. ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯವನ್ನು ಒದಗಿಸಲು 800 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸಲಾಗುವುದು.

223. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ತನ್ನ ಚಟುವಟಿಕೆಗಳಿಗಾಗಿ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ

ನಿಗಮದಿಂದ ಸಾಲ ಪಡೆಯಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು 150 ಕೋಟಿ ರೂ.ಗಳ ಖಾತರಿಯನ್ನು ಒದಗಿಸಲಿದೆ.

224. ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸ ಮಾಡಿ ಹಿಂತಿರುಗಿರುವ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಹೊಂದಲು ಕೇರಳ ಮಾದರಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

225. ಕಾನೂನು ಪದವಿಧರರ ಮಾಸಿಕ ತರಬೇತಿ ಭತ್ಯೆಯನ್ನು 2000 ರೂ.ಗಳಿಂದ 4000 ರೂ.ಗಳಿಗೆ ಹೆಚ್ಚಿಸಲಾಗುವುದು.

226. 75,000 ಅಲ್ಪಸಂಖ್ಯಾತ ಯುವಜನರಿಗೆ ಮುಖ್ಯಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ತರಬೇತಿ ನೀಡಲಾಗುವುದು.

227. ಮಂಗಳೂರಿನಲ್ಲಿ ಹಜ್ ಭವನವನ್ನು ಸ್ಥಾಪಿಸಲು 10 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

228. 2017–18ನೇ ಸಾಲಿನಲ್ಲಿ 2,200 ಕೋಟಿ ರೂ.ಗಳನ್ನು ಒದಗಿಸಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 2,750 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ವಸತಿ

229. **ಕಳೆದ ನಾಲ್ಕು ವರ್ಷಗಳಲ್ಲಿ ಸಾಧನೆಗಳು**

- ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ, ಕರ್ನಾಟಕವನ್ನು ಗುಡಿಸಲು ಮುಕ್ತವನ್ನಾಗಿ ಮಾಡಲು ಪ್ರತಿ ವರ್ಷ 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯೊಂದಿಗೆ, 5 ವರ್ಷಗಳ ಅವಧಿಯಲ್ಲಿ 15 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. 2017ರ ಮಾರ್ಚ್ ಅಂತ್ಯದೊಳಗೆ 11 ಲಕ್ಷ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು. 2018ರ ಮಾರ್ಚ್ ಅಂತ್ಯಕ್ಕೆ 15.5 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗುವುದು.
- ವಸತಿ ನಿವೇಶನದ ಯೋಜನೆಯಡಿಯಲ್ಲಿ, 44,500 ವಸತಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

**2017–18 ನೇ ಸಾಲಿನ ಹೊಸ ಯೋಜನೆಗಳು**

230. ವಿವಿಧ ಯೋಜನೆಗಳ ಅಡಿಯಲ್ಲಿ, ಒಟ್ಟಾರೆ 7 ಲಕ್ಷ ಮನೆಗಳನ್ನು ಮಂಜೂರು ಮಾಡಲಾಗುವುದು. ಅವುಗಳ ಪೈಕಿ ಗ್ರಾಮೀಣ ಪ್ರದೇಶದಲ್ಲಿ 6 ಲಕ್ಷ ಮನೆಗಳನ್ನು ಬೆಂಗಳೂರಿನಲ್ಲಿ 1 ಲಕ್ಷ ಮನೆಗಳನ್ನು ನಿರ್ಮಿಸಲಾಗುವುದು.

231. ಡಾ॥ ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮದಿನಾಚರಣೆ ಅಂಗವಾಗಿ 2017–18 ನೇ ಸಾಲಿನಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಅಡಿಯಲ್ಲಿ ಮನೆಗಾಗಿ ಅರ್ಜಿ ಸಲ್ಲಿಸುವ ನಿವೇಶನ ಹೊಂದಿರುವಂತಹ ಎಲ್ಲಾ ವಸತಿರಹಿತ ಅರ್ಹ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ವಸತಿ ಸೌಲಭ್ಯ ಒದಗಿಸಲಾಗುವುದು.

232. ಮುಖ್ಯಮಂತ್ರಿಗಳ ಒಂದು ಲಕ್ಷ ಬೆಂಗಳೂರು ವಸತಿ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯನ್ವಯ ಲಭ್ಯವಿರುವ ಭೂಮಿಯಲ್ಲಿ ಶೇ.25ರವರೆಗಿನ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಿದ ಪ್ಲಾಟ್‌ಗಳು / ಮನೆಗಳ ಮಾರಾಟದಿಂದ ಲಭ್ಯವಾಗುವ ಹಣವನ್ನು ಬೆಂಗಳೂರು ನಗರದಲ್ಲಿ ಬಡವರಿಗೆ ಕೈಗೆಟುಕುವ ವಸತಿ ಸೌಲಭ್ಯ ಕಲ್ಪಿಸಲು ಕಾಲಾವಧಿಯಲ್ಲಿ ಸಹಾಯಧನವನ್ನು ನೀಡಲು ಬಳಸಲಾಗುವುದು. ಇದೇ ಮಾದರಿಯನ್ನು ಇತರೆ ನಗರ / ಪಟ್ಟಣಗಳಿಗೆ ವಿಸ್ತರಿಸಿ ನಗರ ಪ್ರದೇಶದ ಬಡಜನತೆಗೆ ಕೈಗೆಟುಕುವ ವಸತಿ ಸೌಕರ್ಯ ಕಲ್ಪಿಸಲಾಗುವುದು.

233. "ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆ" ಅಡಿಯಲ್ಲಿ 60:40ರ ಅನುಪಾತದಲ್ಲಿ ಖಾಸಗಿ ಭೂಮಾಲೀಕರ ಪಾಲುದಾರಿಕೆಯಲ್ಲಿ ಮನೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

234. ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ 50,000 ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

235. 2017–18ನೇ ಸಾಲಿನಲ್ಲಿ ವಸತಿ ಇಲಾಖೆಗೆ ಒಟ್ಟಾರೆಯಾಗಿ 4,708 ಕೋಟಿ ರೂ. ಒದಗಿಸಲಾಗಿದೆ.

**ಕಾರ್ಮಿಕ**

236. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ಒಟ್ಟು 47 ಅನುಸೂಚಿತ ಉದ್ದಿಮೆಗಳ ಕನಿಷ್ಠ ವೇತನವನ್ನು ಪರಿಷ್ಕರಿಸಿರುವುದರಿಂದ ಅಂದಾಜು 2.4 ಕೋಟಿ ಕಾರ್ಮಿಕರಿಗೆ ಅನುಕೂಲವಾಗಿದೆ.

- 7.3 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸಲಾಗಿದೆ. ಇವರಲ್ಲಿ 1.43 ಲಕ್ಷ ನೋಂದಾಯಿತ ನಿರ್ಮಾಣ ಕಾರ್ಮಿಕರಿಗೆ 139 ಕೋಟಿ ರೂ. ಆರ್ಥಿಕ ನೆರವು ನೀಡಲಾಗಿದೆ.

- ಸುಲಲಿತ ವ್ಯವಹಾರದ (Ease of doing business) ಮಾನದಂಡಗಳ ಅನುಷ್ಠಾನ ಹಾಗೂ ಕಾನೂನು ಪಾಲನೆಯಲ್ಲಿ ಪಾರದರ್ಶಕತೆಯನ್ನು ತರುವುದಕ್ಕಾಗಿ

ವಿವಿಧ ಕಾಯಿದೆಗಳಡಿ ಆನ್‌–ಲೈನ್ ಸೇವೆಯನ್ನು ಪ್ರಾರಂಭಿಸಲಾಗಿದೆ.

- ಪ್ರಸ್ತುತ ಸಾಲಿನಲ್ಲಿ ಬೀದರ್, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಮತ್ತು ಕೊಡಗು ಜಿಲ್ಲೆಗಳನ್ನು ESI ಯೋಜನೆಯ ವ್ಯಾಪ್ತಿಗೊಳಪಡಿಸುವ ಮೂಲಕ, ಎಲ್ಲಾ 30 ಜಿಲ್ಲೆಗಳ ಪ್ರದೇಶಗಳಲ್ಲಿ ESI ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. 2016–17ನೇ ಸಾಲಿನವರೆಗೆ ರಾಜ್ಯದಲ್ಲಿ 22.46 ಲಕ್ಷ ವಿಮಾದಾರರು ಹಾಗೂ 112 ಲಕ್ಷ ಅವಲಂಬಿತರಿಗೆ ESI ಯೋಜನೆಯಡಿ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

237. ಖಾಸಗಿ ವಲಯದ ಉದ್ದಿಮೆಗಳಲ್ಲಿಯ ಸಿ ಮತ್ತು ಡಿ ವೃಂದದ ನೇಮಕಾತಿಯಲ್ಲಿ ಕನ್ನಡಿಗರಿಗೆ ಶೇ.100 ರಷ್ಟು ಮತ್ತು ವಿಕಲಚೇತನರಿಗೆ ಶೇ.5ರಷ್ಟು ಆದ್ಯತೆ ನೀಡಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆ.

238. "ರಾಜ್ಯ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಪರಿಷ್ಕೃತ ಕ್ರಿಯಾ ಯೋಜನೆ' ಯನ್ನು 2017–18 ರಲ್ಲಿ ರೂಪಿಸಲಾಗುವುದು. ಈ ಕ್ರಿಯಾ ಯೋಜನೆಯ ಮೂಲಕ ಮುಂದಿನ 5 ವರ್ಷಗಳೊಳಗಾಗಿ ಕರ್ನಾಟಕವನ್ನು "ಬಾಲಕಾರ್ಮಿಕ ಹಾಗೂ ಕಿಶೋರ

ಕಾರ್ಮಿಕ ವ್ಯವಸ್ಥೆ ಮುಕ್ತ' ರಾಜ್ಯವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲಾಗುವುದು.

239. ಖಾಸಗಿ ವಲಯದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಡುವ ಸದುದ್ದೇಶದಿಂದ 'ಆಶಾದೀಪ ಯೋಜನೆ' ಯನ್ನು ಜಾರಿಗೆ ತರಲಾಗುವುದು. ಈ ಯೋಜನೆಯಡಿ ಖಾಸಗಿ ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆಡಳಿತ ವರ್ಗದವರು ಪಾವತಿಸಬೇಕಿರುವ ESI ಮತ್ತು ಭವಿಷ್ಯ ನಿಧಿ ವಂತಿಗೆಯನ್ನು ಸರ್ಕಾರವೇ ಭರಿಸಲಿದೆ. ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆ ಕಾರ್ಯಕ್ರಮದಡಿ ಈ ಉದ್ದೇಶಕ್ಕೆ ಪ್ರಾರಂಭಿಕವಾಗಿ 5 ಕೋಟಿ ರೂ. ಒದಗಿಸಲಾಗುವುದು.

240. ಹಮಾಲರು, ಬೀದಿಬದಿ ವ್ಯಾಪಾರಿಗಳು, ಮನೆಗೆಲಸದವರು ಮತ್ತು ಚಿಂದಿ ಆಯುವವರಿಗೆ 10 ಕೋಟಿ ರೂ. ವೆಚ್ಚದಲ್ಲಿ ಸ್ಮಾರ್ಟ್ ಕಾರ್ಡ್ ಒದಗಿಸುವ ಮೂಲಕ "ಅಪಘಾತ ಪರಿಹಾರ ಯೋಜನೆ" ಹಾಗೂ "ಭವಿಷ್ಯ ನಿಧಿ ಪಿಂಚಣಿ"ಯ ಅನುಕೂಲ ಕಲ್ಪಿಸಲು ಉದ್ದೇಶಿಸಿದೆ. ನೋಂದಾಯಿತ ಕಟ್ಟಡ ಕಾರ್ಮಿಕರಿಗಾಗಿ "ವಸತಿ ಯೋಜನೆಯೂ ಒಳಗೊಂಡಂತೆ ಸಮಗ್ರ ಭವಿಷ್ಯನಿಧಿ ಹಾಗೂ ಪಿಂಚಣಿ ಕಾರ್ಯಕ್ರಮ"ವನ್ನು ಜಾರಿಗೊಳಿಸಲಾಗುವುದು.

241. ಕರ್ನಾಟಕ ರಾಜ್ಯ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ" ಎಂದು ಪರಿಷ್ಕರಿಸಿ, ಚಾಲಕರೊಂದಿಗೆ ನಿರ್ವಾಹಕರು ಮತ್ತು ಕ್ಲೀನರ್‌ಗಳನ್ನೊಳಗೊಂಡಂತೆ ಅಂದಾಜು 30 ಲಕ್ಷ ಹೆಚ್ಚುವರಿ ಫಲಾನುಭವಿಗಳನ್ನು ಮುಂದಿನ 2 ವರ್ಷಗಳಲ್ಲಿ ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು. ಇದಕ್ಕಾಗಿ 33 ಕೋಟಿ ರೂ.ಗಳನ್ನು ಒದಗಿಸಲಾಗುವುದು.

242. ಖಾಸಗಿ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಗಳಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

243. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಸೇವೆಗಳನ್ನು ದೋಷರಹಿತವಾಗಿ, ತ್ವರಿತವಾಗಿ ಮತ್ತು ಸಾರ್ವಜನಿಕ ಸ್ನೇಹಿಯಾಗಿ ಒದಗಿಸಲು ಇ–ಸುರಕ್ಷತೆ–2 ಯೋಜನೆಯನ್ನು ಜಾರಿಗೊಳಿಸಲಾಗುವುದು.

244. ಕೈಗಾರಿಕಾ ಮತ್ತು ರಾಸಾಯನಿಕ ಅಪಘಾತಗಳ ಹಾಗೂ ಔದ್ಯೋಗಿಕ ಆರೋಗ್ಯ ಹಾನಿ ನಿಯಂತ್ರಣಕ್ಕಾಗಿ ತರಬೇತಿ ಕೌಶಲ್ಯಾಭಿವೃದ್ಧಿ ಕೋಶವನ್ನು ಸ್ಥಾಪಿಸಲಾಗುವುದು.

245. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿ "ಅಪಾಯಕಾರಿ ಕೈಗಾರಿಕೆಗಳ ಉಸ್ತುವಾರಿ ಕೋಶವನ್ನು" ಸ್ಥಾಪಿಸುವ ಮೂಲಕ ಹಾನಿಕಾರಕ ರಾಸಾಯನಿಕಗಳಿಂದಾಗಿ ಸಂಭವಿಸಬಹುದಾದ ವಿಪತ್ತನ್ನು ನಿಯಂತ್ರಿಸುವ ಮೂಲಕ ಪರಿಸರ ನಾಶ ಮತ್ತು ಕಾರ್ಮಿಕರು/ ಸಾರ್ವಜನಿಕರ ಆರೋಗ್ಯಹಾನಿಯನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಗುವುದು.

246. ಕಾರ್ಮಿಕರ ರಾಜ್ಯ ವಿಮಾ ನಿಗಮವು ಒದಗಿಸಿದ ಸಂಪನ್ಮೂಲದ ಮಿತಿಯೊಳಗೆ ಎಲ್ಲಾ ಜಿಲ್ಲೆಗಳ ಕಾರ್ಮಿಕ ರಾಜ್ಯ ವಿಮಾ ಸೇವೆಗಳನ್ನು ಸುಧಾರಣೆ ಮಾಡಲಾಗುವುದು. ಇದರಿಂದಾಗಿ ನೋಂದಾಯಿತ 1.2 ಕೋಟಿ ವಿಮಾದಾರರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸಹಾಯವಾಗಲಿದ್ದು, ಮುಂದಿನ ಮೂರು ವರ್ಷದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುವುದು.

- ರಾಜ್ಯದಲ್ಲಿ ಹೊಸದಾಗಿ 61 ESI ಚಿಕಿತ್ಸಾಲಯಗಳ ಪ್ರಾರಂಭ.
- ದಾವಣಗೆರೆ, ಹುಬ್ಬಳ್ಳಿ ಹಾಗೂ ಬೆಳಗಾವಿ ESI ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯವನ್ನು 100ಕ್ಕೆ ಹೆಚ್ಚಿಸುವುದು ಹಾಗೂ ಉನ್ನತೀಕರಿಸುವುದು.

- ಇಂದಿರಾನಗರದ ESI ಆಸ್ಪತ್ರೆಯ ಉನ್ನತೀಕರಣ ಹಾಗೂ super speciality ವಿಭಾಗಗಳ ಪ್ರಾರಂಭ.
- ಎಲ್ಲಾ ESI ಆಸ್ಪತ್ರೆಗಳಲ್ಲಿ ಆಯುಷ್ ವಿಭಾಗಗಳ ಪ್ರಾರಂಭ.
- ಎಲ್ಲಾ ESI ಆಸ್ಪತ್ರೆಗಳಲ್ಲಿ Dialysis, ICU, MICU, PICU ವಿಭಾಗಗಳನ್ನು ಹೊರ ಗುತ್ತಿಗೆ ಮುಖಾಂತರ ನಿರ್ವಹಣೆ.

247. 2017–18ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಗೆ ಒಟ್ಟಾರೆಯಾಗಿ 469 ಕೋಟಿ ರೂ. ಒದಗಿಸಲಾಗಿದೆ.

## ಕೌಶಲ್ಯ ಅಭಿವೃದ್ಧಿ

248. **ಕಳೆದ ವರ್ಷಗಳ ಸಾಧನೆಗಳು**

- ರಾಜ್ಯದ ವಿವಿಧ ಇಲಾಖೆಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೆಡೆ ತರುವ ಮೂಲಕ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸ್ಥಾಪಿಸಲಾಗಿದೆ.
- 2016–17ನೇ ಸಾಲಿನಿಂದ ಎಲ್ಲಾ ಇಲಾಖೆಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಎಲ್ಲಾ ಇಲಾಖೆಗಳ ಅನುದಾನವನ್ನು ಕ್ರೋಢೀಕರಿಸಿ

ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟಾರೆ 395 ಕೋಟಿ ರೂ.ಗಳ ಅನುದಾನದಲ್ಲಿ 1.18 ಲಕ್ಷ ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.

- ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ 2.2 ಲಕ್ಷ ವಿದ್ಯಾರ್ಥಿಗಳು ತರಬೇತಿ ಪಡೆದು ಕಾರ್ಮಿಕ ಪಡೆಗೆ ಸೇರಿದ್ದಾರೆ.

- 224 ಕೋಟಿ ರೂ.ಗಳ ವೆಚ್ಚದಲ್ಲಿ 68,500 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಉಪಕರಣಗಳ ಕಿಟ್, ಲೇಖನ ಸಾಮಗ್ರಿಗಳು, ಪುಸ್ತಕಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದೆ.

- 100 ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿ 8400 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ.

- 258 ಸರ್ಕಾರಿ ತರಬೇತಿ ಸಂಸ್ಥೆಗಳಿಗೆ ಉಪಕರಣಗಳನ್ನು ಒದಗಿಸಿ 78 ಕೋಟಿ ರೂ.ಗಳ ವೆಚ್ಚದಲ್ಲಿ ಆಧುನೀಕರಣಗೊಳಿಸಲಾಗಿದೆ.

- 64 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಗೆ NABARD-RIDF ಯೋಜನೆಯಡಿಯಲ್ಲಿ 166 ಕೋಟಿ ರೂ.ಗಳ ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ

ಹಾಗೂ 88 ಕೋಟಿ ರೂ.ಗಳ ವೆಚ್ಚದಲ್ಲಿ 43 ಕಟ್ಟಡ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

- ಜಿ.ಟಿ.ಟಿ.ಸಿ ಅಡಿ 11,835 ಅಲ್ಪಾವಧಿ ತರಬೇತಿಗಳನ್ನು ಮತ್ತು 19,500 ದೀರ್ಘಾವಧಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

## 2017–18 ನೇ ಸಾಲಿನ ಹೊಸ ಯೋಜನೆಗಳು

249. ಕೌಶಲ್ಯಾಭಿವೃದ್ಧಿ ಮಿಷನ್‌ನ್ನು 200 ಕೋಟಿ ರೂ.ಗಳ ಅನುದಾನದೊಂದಿಗೆ ಪ್ರಾರಂಭಿಸಲಾಗುತ್ತಿದ್ದು ಅದು ಈ ಮುಂದಿನ ಅಂಶಗಳನ್ನು ಒಳಗೊಂಡಿರುತ್ತದೆ;

i. ಮುಖ್ಯಮಂತ್ರಿಗಳ ಕೌಶಲ್ಯಾಭಿವೃದ್ಧಿ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಬೇಡಿಕೆ ಸಮೀಕ್ಷೆಯನ್ನು ಆಧರಿಸಿ ಪ್ರಸ್ತುತ ಜಾರಿಯಲ್ಲಿರುವ ವಿವಿಧ ಯೋಜನೆಗಳ ಅಡಿಯಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ಮೂಲಕ 5 ಲಕ್ಷ ಯುವಜನತೆಗೆ ತರಬೇತಿ ನೀಡಲಾಗುವುದು. ಇದರಲ್ಲಿ ಶೇ.20ರಷ್ಟು ಪರಿಶಿಷ್ಟ ಜಾತಿ, ಶೇ.7ರಷ್ಟು ಪರಿಶಿಷ್ಟ ಪಂಗಡ ಹಾಗೂ ಶೇ.15ರಷ್ಟು ಅಲ್ಪಸಂಖ್ಯಾತ ಯುವಜನರಿಗೆ ತರಬೇತಿ ನೀಡಲಾಗುವುದು.

ii. ಯುವ ಜನತೆಯನ್ನು ಸಬಲರನ್ನಾಗಿಸಲು ಮತ್ತು ಅವರಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಕಲ್ಪಿಸಲು

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ವೃತ್ತಿಪರ ಕೌಶಲ್ಯ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದ್ದು, ಈ ಯೋಜನೆಯಡಿ 2.50 ಲಕ್ಷ ಯುವಜನರಿಗೆ ಕೌಶಲ್ಯ ತರಬೇತಿ ನೀಡಲಾಗುವುದು ಮತ್ತು ಅವರ ಪೈಕಿ ಕನಿಷ್ಟ ಶೇ.70 ರಷ್ಟು ಯುವಜನತೆಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗುವುದು.

iii. **"ಮುಖ್ಯಮಂತ್ರಿಗಳ ಕರ್ನಾಟಕ ಜೀವನೋಪಾಯ ಯೋಜನೆ"**ಯನ್ನು "ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟದವರೆಗಿನ" ಉಪಕ್ರಮವಾಗಿ ಪ್ರಾರಂಭಿಸಲಾಗುವುದು. 50,000 ಸ್ಥಳೀಯ ಕುಶಲ ಕರ್ಮಿಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಸ್ಥಳೀಯ ಕರಕುಶಲ, ಕೈಮಗ್ಗ ಮುಂತಾದ ವಲಯವನ್ನು ಉತ್ತೇಜಿಸಿ ಜೀವನೋಪಾಯ ಕಲ್ಪಿಸಲು ಕೌಶಲ್ಯ ತರಬೇತಿ, ವಿನ್ಯಾಸ ನಿರ್ಮಾಣಕ್ಕೆ ನೆರವು ಮತ್ತು ಮಾರುಕಟ್ಟೆ ಸೌಲಭ್ಯ ಕಲ್ಪಿಸಲಾಗುವುದು.

iv. ಕರ್ನಾಟಕ ಅಪ್ರೆಂಟಿಷಿಪ್ ಯೋಜನೆಯಡಿ ಅಪ್ರೆಂಟಿಷಿಪ್ ತರಬೇತಿ ಕಾರ್ಯಕ್ರಮವನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಹಂತ ಹಂತವಾಗಿ 50,000 ವಿದ್ಯಾರ್ಥಿಗಳಿಗೆ ಅಪ್ರೆಂಟಿಷಿಪ್ ತರಬೇತಿ ನೀಡಲು ಪ್ರತಿ ಅಪ್ರೆಂಟೀಸ್‌ಗೆ ಮಾಹೆಯಾನ ತಲಾ 1,000 ರೂ.ಗಳ ಸ್ಟೈಫೆಂಡ್‌ನ್ನು ಮರುಪಾವತಿಸಲಾಗುವುದು.

v. ಉದ್ಯೋಗಾವಕಾಶಕ್ಕೆ ಒತ್ತು ನೀಡುವುದರೊಂದಿಗೆ ಗುಣಮಟ್ಟ, ಸುಸ್ಥಿರತೆ, ಪ್ರವೇಶಾವಕಾಶ ಮತ್ತು ಕೈಗಾರಿಕಾ ಸಂಪರ್ಕಗಳನ್ನು ಹೆಚ್ಚಿಸಲು ಕೌಶಲ್ಯ ತರಬೇತಿಗೆ ಸಂಬಂಧಿಸಿದಂತೆ "ಪ್ರಾವೀಣ್ಯತಾ ಕೇಂದ್ರ"ಗಳನ್ನು ಸ್ಥಾಪಿಸಲಾಗುವುದು. ಉದ್ಯಮಗಳ ಬೇಡಿಕೆಗಳಿನುಗುಣವಾಗಿ ಕೌಶಲ್ಯ ಹೊಂದಿದ ವ್ಯಕ್ತಿಗಳನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಮೂಲ ಸೌಕರ್ಯ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ 34 ಉದ್ಯೋಗ ವಿನಿಮಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.

vi. ವೃತ್ತಿಪರ ತರಬೇತಿ, ತರಬೇತುದಾರರ ತರಬೇತಿ, ಪಠ್ಯ ಕ್ರಮದ ಅಭಿವೃದ್ಧಿ ಇತ್ಯಾದಿಗಳ ಸಂಶೋಧನೆಯನ್ನು ಉತ್ತೇಜಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯಡಿ ಕೌಶಲ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು.

vii. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಉದ್ಯಮಿಗಳ ಹಾಗೂ ಉದ್ದಿಮೆದಾರರ ಸಂಘದ ವತಿಯಿಂದ ಸ್ಥಾಪಿಸಲಾಗುವ ಕೌಶಲ್ಯಾಭಿವೃದ್ಧಿ ಕೇಂದ್ರಗಳ ವಿಸ್ತರಣೆಗಾಗಿ 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.

250. ಸರ್ಕಾರ ಅಥವಾ ಅನುದಾನಿತ ಐಟಿಐಗಳಿಲ್ಲದ ತಾಲ್ಲೂಕುಗಳಾದ ಚಿಂತಾಮಣಿ, ಗುಬ್ಬಿ, ಕಾರ್ಕಳ, ನರಸಿಂಹರಾಜಪುರ, ಮೂಡಿಗೆರೆ, ರಾಯಬಾಗ, ಯಲ್ಲಾಪುರ, ಮುಧೋಳ, ಶಹಪುರ, ಸುರಪುರ ಮತ್ತು ಮಾನ್ವಿಯಲ್ಲಿ ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

251. ಐಟಿಐಗಳಲ್ಲಿ ಹಾಲಿ ಇರುವ ಎಲ್ಲಾ ಸಲಕರಣೆಗಳನ್ನು ಪ್ರಮಾಣಿತ ಮಾನದಂಡಗಳಿಗನುಗುಣವಾಗಿ ಒಂದು ಬಾರಿ ಮೇಲ್ದರ್ಜೆಗೇರಿಸುವ ಕಾರ್ಯವನ್ನು 228 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.

252. 2017–18ನೇ ಸಾಲಿನಲ್ಲಿ ಕೌಶಲ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 1,332 ಕೋಟಿ ರೂ. ಒದಗಿಸಲಾಗಿದೆ.

## ಕನ್ನಡ ಮತ್ತು ಸಂಸ್ಕೃತಿ

**ಕನ್ನಡಕ್ಕಾಗಿ ಕೈ ಎತ್ತು**
**ನಿನ್ನ ಕೈ ಕಲ್ಪವೃಕ್ಷವಾಗುವುದು.**

**– ಕುವೆಂಪು**

253. **ನಾಲ್ಕು ವರ್ಷದ ಪ್ರಮುಖ ಸಾಧನೆಗಳು**

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಛೇರಿ ಮತ್ತು ಜಿಲ್ಲಾ ಕಛೇರಿಗಳನ್ನು ಸಂಪೂರ್ಣ ಗ್ರಾಹಕ ಸ್ನೇಹಿ

ಮತ್ತು ಪರಿಸರ ಸ್ನೇಹಿ, ಪಾರದರ್ಶಕ ಆಡಳಿತ ವ್ಯವಸ್ಥೆಯಾದ ಇ–ಆಡಳಿತಕ್ಕೆ ಒಳಪಡಿಸಿದೆ.

- ಡಾ॥ ಬಿ.ಆರ್.ಅಂಬೇಡ್ಕರ್‌ರವರ 125ನೆಯ ಜನ್ಮದಿನಾಚರಣೆಯ ಅಂಗವಾಗಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಬರಹ ಮತ್ತು ಭಾಷಣಗಳನ್ನು 22 ಸಂಪುಟಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮೂಲಕ ಮುದ್ರಿಸಿ ರಾಜ್ಯದ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ವಿತರಿಸಲಾಗಿದೆ.

- 12ನೆಯ ಶತಮಾನದ ವಚನ ಸಾಹಿತ್ಯ ಪ್ರಕಾರದಲ್ಲಿ ಲಭ್ಯವಿರುವ 259 ವಚನಕಾರರ ಸುಮಾರು 21,644 ವಚನಗಳನ್ನು ಗ್ರಾಹಕಸ್ನೇಹಿ ಮಾಧ್ಯಮದಲ್ಲಿ ಅಳವಡಿಸಲಾಗಿದೆ. ಇದರಲ್ಲಿ 1000 ವಚನಗಳಿಗೆ ಸ್ವರ ಸಂಯೋಜನೆ ಮಾಡಲಾಗಿದ್ದು ಧ್ವನಿ ಮುದ್ರಿಕೆಗಳು ಅಂತರ್ಜಾಲದಲ್ಲಿ ಲಭ್ಯವಿದೆ.

- 16ನೆಯ ಶತಮಾನದ ದಾಸಸಾಹಿತ್ಯ ಪ್ರಕಾರದಲ್ಲಿ ಲಭ್ಯವಿರುವ 157 ಕೀರ್ತನಕಾರರ ಸುಮಾರು 13,967 ಕೀರ್ತನೆಗಳನ್ನು ಯೂನಿಕೋಡ್ ಶಿಷ್ಟತೆಯಲ್ಲಿ ಪರಿವರ್ತಿಸಿ ಗ್ರಾಹಕಸ್ನೇಹಿ ಮಾಧ್ಯಮದಲ್ಲಿ ಅಳವಡಿಸಲಾಗಿದೆ.

- ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೂಲಕ ತತ್ವಪದಗಳನ್ನು 50 ಸಂಪುಟಗಳಲ್ಲಿ ಸಂಗ್ರಹಿಸಿ ಪ್ರಕಟಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ಸಂಪುಟಗಳ ಮುದ್ರಣ/ಪ್ರಕಟಣೆಯ ವಿವಿಧ ಹಂತಗಳಲ್ಲಿವೆ.

- ಜೀವನ ಸಂಧ್ಯೆಯಲ್ಲಿರುವ ಅಶಕ್ತ ಸಾಹಿತಿ–ಕಲಾವಿದರ ಮನವಿಗಳನ್ನು ಪುರಸ್ಕರಿಸಿ 5130 ವ್ಯಕ್ತಿಗಳಿಗೆ ಮಾಸಾಶನ ಮಂಜೂರು ಮಾಡಿದೆ. ವಾರ್ಷಿಕ ಮಾಸಾಶನ ಮಂಜೂರಾತಿ ಮಿತಿಯನ್ನು 400 ರಿಂದ 1000ಕ್ಕೆ ವಿಸ್ತರಿಸಿದೆ. ಮಾಸಾಶನವನ್ನು 1000 ರೂಗಳಿಂದ 1,500 ರೂ.ಗಳಿಗೆ ಏರಿಸಲಾಗಿದೆ.

- ಹವ್ಯಾಸಿ ರಂಗಭೂಮಿಯ ಸಾಧಕರನ್ನು ಗುರುತಿಸಿ ಕೊಡಮಾಡುವ ಬಿ.ವಿ.ಕಾರಂತ ಪ್ರಶಸ್ತಿಯನ್ನು ಸ್ಥಾಪಿಸಿ ಸಾಧಕರನ್ನು ಗುರುತಿಸಿ ಕೊಡಲಾಗುತ್ತಿದೆ.

- ಹೋರಾಟಗಾರರು ಮತ್ತು ಸಂಘಟಕರನ್ನು ಗುರುತಿಸಿ ಕೊಡಮಾಡುವ ಸಂಗೊಳ್ಳಿ ರಾಯಣ್ಣ ಪ್ರಶಸ್ತಿಯನ್ನು ಸ್ಥಾಪಿಸಿ ಸಾಧಕರನ್ನು ಗುರುತಿಸಿ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

254. ಸೃಜನಶೀಲ ಸಾಹಿತ್ಯ ಪ್ರಕಾರದಲ್ಲಿ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಲು, ಯುವ ಮತ್ತು ಉದಯೋನ್ಮುಖ ಬರಹಗಾರರಿಗೆ ನೆರವು ನೀಡಲು, ಮಕ್ಕಳು ಎದುರಿಸುತ್ತಿರುವ ಸವಾಲುಗಳು ಮತ್ತು ಸಮಸ್ಯೆಗಳ ಕುರಿತಾದ ವಸ್ತು ವಿಷಯಗಳಿಗೆ ಸಂಬಂಧಪಟ್ಟಂತೆ ರಂಗ ನಾಟಕಗಳನ್ನು ರಚಿಸಲು 3 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ವೇದಿಕೆಯನ್ನು ಸೃಷ್ಟಿಸಲಾಗುವುದು.

255. ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಾಗೂ ಕನ್ನಡ ಸಾಹಿತ್ಯ ಪೋಷಕಿಯಾಗಿದ್ದ ಅತ್ತಿಮಬ್ಬೆಯವರ ಸ್ಥಳವಾದ ಲಕ್ಕುಂಡಿಯನ್ನು ಅಭಿವೃದ್ಧಿಪಡಿಸಲು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರವನ್ನು 3 ಕೋಟಿ ರೂ.ಗಳ ವೆಚ್ಚದಲ್ಲಿ ರಚಿಸಲಾಗುವುದು.

256. ಬಯಲಾಟ ಕಲಾಪ್ರಕಾರಗಳನ್ನು ಸಂರಕ್ಷಿಸಿ ಪ್ರಚುರಪಡಿಸಲು ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಬಯಲಾಟ ಅಕಾಡೆಮಿಯನ್ನು ಸ್ಥಾಪಿಸಲಾಗುವುದು.

257. ಶ್ರೀ ಎಂ.ಎಂ. ಕಲ್ಬುರ್ಗಿಯವರ ಸಮಗ್ರ ಸಾಹಿತ್ಯ ಕೃತಿಗಳನ್ನು ವಿಜಯಪುರದ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮುಖಾಂತರ ಪ್ರಕಟಿಸಲಾಗುವುದು.

258. ಇಲಾಖೆಯು ಜವಾಹರಲಾಲ್ ನೆಹರು ವಿಶ್ವ ವಿದ್ಯಾಲಯದಲ್ಲಿ ಸ್ಥಾಪಿಸಿರುವ ಕನ್ನಡ ಅಧ್ಯಯನ ಪೀಠವನ್ನು ನಿರ್ವಹಿಸಲು ಮೂಲ ನಿಧಿಯನ್ನು ಸೃಜಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

259. ಸಭಾಂಗಣಗಳು ಮತ್ತು ಇತರ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಹೊಸ ಜಿಲ್ಲೆಗಳಲ್ಲಿ ಸಭಾಂಗಣಗಳನ್ನು ನಿರ್ಮಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

260. ಕರ್ನಾಟಕ ರಾಜ್ಯದ ಏಕೀಕರಣದ 60 ವರ್ಷಗಳ ಸವಿನೆನಪಿಗೆ ವಿಶ್ವ ಕನ್ನಡ ಸಮ್ಮೇಳನವನ್ನು ಏರ್ಪಡಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

261. ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ಆಡಿಯೋ ವಿಡಿಯೋ ಕಾಲೇಜಿನಲ್ಲಿ 10.96 ಕೋಟಿ ರೂ.ಗಳ ವೆಚ್ಚದಲ್ಲಿ ಸುಸಜ್ಜಿತವಾದ 6 ಹೊಸ ತರಗತಿ ಕೊಠಡಿಗಳನ್ನು ನಿರ್ಮಿಸಲಾಗುವುದು.

262. ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೊಲ್ಲೂರು ಮಲ್ಲಪ್ಪನವರ ಸ್ಮರಣಾರ್ಥ ಯಾದಗಿರಿಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

263. ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಹಾಗೂ ಕೇಂದ್ರ ಮಂತ್ರಿಯಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿರುವ

ಶ್ರೀ ಕೆ.ಸಿ.ರೆಡ್ಡಿಯವರ ಸ್ಮರಣಾರ್ಥ ಅವರ ಸ್ಮಾರಕವನ್ನು 2 ಕೋಟಿ ರೂ.ಗಳಲ್ಲಿ ಸ್ಥಾಪಿಸಲಾಗುವುದು.

264. ಗಡಿ ಪ್ರದೇಶ ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂ.ಗಳನ್ನು ನೀಡಲಾಗುವುದು.

265. 12ನೇ ಶತಮಾನದಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇತ್ಯಾದಿ ಶರಣರು ಶೋಷಿತ ಧೀನದಲಿತರನ್ನು ಮೇಲೆತ್ತಲು ಶ್ರಮಿಸಿ, ಕ್ರಾಂತಿಯನ್ನು ಉಂಟು ಮಾಡಿದ್ದಾರೆ. ಇವರುಗಳು ಸಮಾಜಕ್ಕೆ ನೀಡಿದ ತತ್ವ, ವಿಚಾರಧಾರೆಗಳ ಬಗ್ಗೆ ಅಧ್ಯಯನ ನಡೆಸಲು ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು. ಈ ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತು ಭಕ್ತಾದಿಗಳಿಗೆ ವಸತಿ ಇನ್ನಿತರೆ ಮೂಲಸೌಕರ್ಯ ಕಲ್ಪಿಸಲು 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

266. ಛತ್ರಪತಿ ಶಿವಾಜಿರವರ ತಂದೆಯಾದ ಶ್ರೀ ಶಹಾಜಿ ಮಹಾರಾಜರ ಸಮಾಧಿ ಸ್ಥಳ ಅಭಿವೃದ್ಧಿ ಮತ್ತು ಅದನ್ನು ಪ್ರವಾಸಿ ತಾಣವನ್ನಾಗಿ ಮಾಡಲು 2 ಕೋಟಿ ರೂ. ಅನುದಾನ ಒದಗಿಸಲಾಗುವುದು.

267. 2017–18ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಟ್ಟಾರೆಯಾಗಿ 424 ಕೋಟಿ ರೂ. ಒದಗಿಸಲಾಗಿದೆ.

## ಯುವ ಸಬಲೀಕರಣ ಮತ್ತು ಕ್ರೀಡೆ

### 268. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಕಳೆದ ನಾಲ್ಕು ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಮೈಸೂರು, ಉಡುಪಿ, ಮೂಡಬಿದರೆ, ಕಲಬುರಗಿ ಮತ್ತು ಧಾರವಾಡ ಜಿಲ್ಲಾ ಕ್ರೀಡಾಂಗಣಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳು; ಬಳ್ಳಾರಿ ನಗರದಲ್ಲಿ ಸಿಂಥೆಟಿಕ್ ಫುಟ್‌ಬಾಲ್ ಟರ್ಫ್; ಕೊಡಗು ಜಿಲ್ಲೆಯ ಪೊನ್ನಂಪೇಟೆ ಹಾಗೂ ಮೈಸೂರಿನಲ್ಲಿ ಸಿಂಥೆಟಿಕ್ ಹಾಕಿ ಟರ್ಫ್; ಮಡಿಕೇರಿ, ಉಡುಪಿ, ಮೂಡಬಿದರೆ, ಗಂಗಾವತಿ, ಹರಿಹರ, ಬೆಂಗಳೂರಿನ ವಿದ್ಯಾನಗರಗಳಲ್ಲಿ ಆಧುನಿಕ ಈಜುಕೊಳಗಳು; ಚಾಮರಾಜನಗರ, ಮೈಸೂರು, ಉಡುಪಿ, ದಾವಣಗೆರೆ, ಹಳಿಯಾಳ, ಧಾರವಾಡದಲ್ಲಿ ಕ್ರೀಡಾ ವಸತಿ ನಿಲಯಗಳು; ಗುಂಡ್ಲುಪೇಟೆ, ಜಮಖಂಡಿ, ಭದ್ರಾವತಿ, ಹಿರೇಕೆರೂರು, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರಿನ ವಿದ್ಯಾನಗರದಲ್ಲಿ ಒಳಾಂಗಣ ಕ್ರೀಡಾಂಗಣಗಳು ಹಾಗೂ ಕಲಬುರಗಿ, ಚಿಕ್ಕಬಳ್ಳಾಪುರ, ಮಡಿಕೇರಿ ಮತ್ತು ಬಳ್ಳಾರಿಗಳಲ್ಲಿ ನಾಲ್ಕು ಹೊಸ ಕ್ರೀಡಾ ಶಾಲೆಗಳನ್ನು 64.8 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

- ಗ್ರಾಮೀಣ ದೇಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು 2014–15ನೇ ಸಾಲಿನಿಂದ 1 ಲಕ್ಷ ರೂ.ಗಳ ನಗದು ಪುರಸ್ಕಾರದೊಂದಿಗೆ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿಯನ್ನು ಆರಂಭಿಸಲಾಗಿದೆ, ತಮ್ಮೂರ ಶಾಲೆ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿರುವ 335 ಯುವ ಸಂಘಗಳನ್ನು ಗುರುತಿಸಿ ತಲಾ 1 ಲಕ್ಷ ರೂ.ಗಳ ಧನ ಸಹಾಯ ವಿತರಿಸಲಾಗಿದೆ.

- 2014 ರಲ್ಲಿ ಮಾಜಿ ಕುಸ್ತಿ ಪೈಲ್ವಾನರುಗಳಿಗೆ ಹಾಗೂ ಮಾಜಿ ಕ್ರೀಡಾ ಪಟುಗಳಿಗೆ ಮಾಸಾಶನ ದ್ವಿಗುಣಗೊಳಿಸಲಾಗಿದ್ದು ಇದರಿಂದ 1,400 ಮಾಜಿ ಕ್ರೀಡಾಪಟುಗಳಿಗೆ ಅನುಕೂಲವಾಗಿದೆ. ಕ್ರೀಡಾ ವಿದ್ಯಾರ್ಥಿ ವೇತನವನ್ನು 1,000 ರೂ.ಗಳಿಂದ 10,000 ರೂ.ಗಳಿಗೆ ಹೆಚ್ಚಿಸಲಾಗಿದೆ.

- ಯುವ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಮತ್ತು ಅವರಿಗೆ ಅಗತ್ಯ ಬೆಂಬಲ ನೀಡುವ ಸಲುವಾಗಿ 7 ವರ್ಷದ ನಂತರ ಕರ್ನಾಟಕ ರಾಜ್ಯದಲ್ಲಿ ಒಲಂಪಿಕ್ ಕ್ರೀಡಾಕೂಟವನ್ನು ಹುಬ್ಬಳ್ಳಿ–ಧಾರವಾಡ ನಗರದಲ್ಲಿ ಆಯೋಜಿಸಲಾಯಿತು.

## 2017–18ನೇ ಸಾಲಿನ ಹೊಸ ಯೋಜನೆಗಳು

269. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ತೋರಲು ಬೆಂಬಲ ನೀಡುವ ಉದ್ದೇಶದಿಂದ 1000 ಪೂರ್ವಾರ್ಹತೆ ಪಡೆದ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು

ಗುರುತಿಸಿ ಅವರಿಗೆ ತಲಾ 1 ಲಕ್ಷ ರೂ. ನೆರವು ನೀಡಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

270. ತಲಾ 1 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನ ವಿದ್ಯಾನಗರದಲ್ಲಿ ಬಾಸ್ಕೆಟ್ ಬಾಲ್, ಉಡುಪಿಯಲ್ಲಿ ಈಜು, ಮೈಸೂರಿನಲ್ಲಿ ಟೆನಿಸ್ ಮತ್ತು ಚಿತ್ರದುರ್ಗದಲ್ಲಿ ಆರೋಹಣ ಹೀಗೆ ಒಟ್ಟು ನಾಲ್ಕು ಕ್ರೀಡಾ ಅಕಾಡೆಮಿಗಳನ್ನು ಸ್ಥಾಪಿಸಲಾಗುವುದು. ಜೊತೆಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಬ್ಯಾಡ್ಮಿಂಟನ್ ಮತ್ತು ಗಾಲ್ಫ್ ಅಕಾಡೆಮಿಗಳನ್ನು ಪ್ರಾರಂಭಿಸಲಾಗುವುದು. ತಲಾ 2 ಕೋಟಿ ರೂ.ಗಳ ವೆಚ್ಚದಲ್ಲಿ 2 ಕ್ರೀಡಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಮೈಸೂರಿನ ವರುಣಾ ಕೆರೆಯಲ್ಲಿ ಜಲಕ್ರೀಡಾ ಕೇಂದ್ರವನ್ನು ಅಭಿವೃದ್ಧಿಪಡಿಸಲು 5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

271. ನಾಲ್ಕು ಕ್ರೀಡಾ ವಿದ್ಯಾರ್ಥಿನಿಲಯಗಳಲ್ಲಿ ಅತ್ಯಾಧುನಿಕ ವ್ಯಾಯಾಮ ಶಾಲೆ ಸೌಲಭ್ಯವನ್ನು ಕಲ್ಪಿಸಲು 8 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

272. ಪ್ರತಿಯೊಂದು ವಿಭಾಗದಲ್ಲಿ ಮಹಿಳಾ ಅಥ್ಲೀಟ್‌ಗಳಿಗಾಗಿ ತಲಾ 1 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರತ್ಯೇಕ ಸಂಪೂರ್ಣ ಸುಸಜ್ಜಿತ ಕ್ರೀಡಾ ವಿದ್ಯಾರ್ಥಿ ನಿಲಯಗಳ ಸೌಲಭ್ಯವನ್ನು ಕಲ್ಪಿಸಲಾಗುವುದು. ಬೆಳಗಾವಿ ಮತ್ತು ಮೈಸೂರಿನಲ್ಲಿ ಆಧುನಿಕ

ಜಿಮ್ನಾಸ್ಟಿಕ್ ಸೌಲಭ್ಯವನ್ನು ಕಲ್ಪಿಸಲು ತಲಾ 2 ಕೋಟಿ ರೂ.ಗಳಂತೆ ಒಟ್ಟು 4 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

273. ವಿಕಲಚೇತನ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ಕ್ರೀಡಾ ಕಿಟ್‌ಗಳನ್ನು ಒದಗಿಸಲು 2 ಕೋಟಿ ರೂ.ಗಳು ಮತ್ತು ವಿಕಲಚೇತನ ಸ್ನೇಹಿ ಕ್ರೀಡಾ ಸೌಕರ್ಯವನ್ನು ಕಲ್ಪಿಸಲು 2 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

274. ಒಲಂಪಿಕ್ಸ್ ಪದಕ ವಿಜೇತರಿಗೆ ನೀಡಲಾಗುವ ನಗದು ಬಹುಮಾನವನ್ನು ಸ್ವರ್ಣ ಪದಕ ವಿಜೇತರಿಗೆ 5 ಕೋಟಿ ರೂ.ಗಳು, ರಜತ ಪದಕ ವಿಜೇತರಿಗೆ 3 ಕೋಟಿ ರೂ.ಗಳು ಮತ್ತು ಕಂಚು ಪದಕ ವಿಜೇತರಿಗೆ 2 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು. ಒಲಂಪಿಕ್ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗ್ರೂಪ್ 'ಎ' ಹುದ್ದೆಯನ್ನು ಮತ್ತು ಏಷ್ಯಿಯನ್ ಮತ್ತು ಕಾಮನ್ ವೆಲ್ತ್ ಕ್ರೀಡಾ ಕೂಟಗಳ ಪದಕ ವಿಜೇತರಿಗೆ ಗ್ರೂಪ್ **'ಬಿ'** ಹುದ್ದೆಯನ್ನು ನೀಡಲಾಗುವುದು.

275. ಪ್ರತಿ ವರ್ಷ 10 ಜನ ಕ್ರೀಡಾ ಪ್ರವರ್ತಕರನ್ನು ಗುರುತಿಸಿ, ಗೌರವಿಸಲು ಪ್ರಸಕ್ತ ವರ್ಷದಿಂದ ತಲಾ 5 ಲಕ್ಷ ರೂ.ಗಳ **'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ'**ಯನ್ನು ಪ್ರತಿಷ್ಠಾಪಿಸಲಾಗುವುದು.

276. ಪ್ರಗತಿಯಲ್ಲಿರುವ ಎಲ್ಲಾ ತಾಲ್ಲೂಕು ಕ್ರೀಡಾಂಗಣ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲಾಗುವುದು. ಈ ಸಂಬಂಧ 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

277. ಗ್ರಾಮೀಣ ಯುವಜನತೆಯು ಆರೋಗ್ಯಕರ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ಸೃಜಿಸಲು "ಯುವ ಚೈತನ್ಯ" ಎಂಬ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲಾಗುವುದು. ಮುಂದಿನ 3 ವರ್ಷಗಳಲ್ಲಿ ತಲಾ 1 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳ ಯುವ ಜನತೆಗೆ ಕ್ರೀಡಾ ಸಾಮಗ್ರಿಗಳು ಮತ್ತು ಫಿಟ್ನೆಸ್ (Fitness) ಸಲಕರಣೆಗಳನ್ನು ಒದಗಿಸಲಾಗುವುದು. ಈ ಸಂಬಂಧ ಪ್ರಸಕ್ತ ವರ್ಷ 20 ಕೋಟಿ ರೂ.ಗಳ ಅನುದಾನವನ್ನು ಹಂಚಿಕೆ ಮಾಡಲಾಗುವುದು. ಯೂತ್ ಕ್ಲಬ್‌ಗಳು ಆರ್ಥಿಕ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗುವಂತೆ ಆವರ್ತ ನಿಧಿ ಒದಗಿಸಲು 5 ಕೋಟಿ ರೂ.ಗಳ ಅನುದಾನವನ್ನು ಹಂಚಿಕೆ ಮಾಡಲಾಗುವುದು.

278. ಕ್ರೀಡಾಪಟುಗಳ ಸ್ವವಿವರಗಳನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲು 1 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ಐಟಿ ಕೋಶವನ್ನು ಸ್ಥಾಪಿಸಲಾಗುವುದು. ಎಳೆಯ ವಯಸ್ಸಿನಲ್ಲಿಯೇ ಕ್ರೀಡಾಪ್ರತಿಭೆಗಳನ್ನು ಗುರುತಿಸಲು, ಅಗತ್ಯ

ತರಬೇತಿ ಸೌಲಭ್ಯಗಳನ್ನು ಕಲ್ಪಿಸಲು, ನಗದು ಬಹುಮಾನ, ಪ್ರೋತ್ಸಾಹಧನ ಯೋಜನೆಗಳಲ್ಲಿ ಹಾಗೂ ವೃತ್ತಿಪರ ಕೋರ್ಸುಗಳ ಸೀಟು ಹಂಚಿಕೆಯಲ್ಲಿ ಪಾರದರ್ಶಕತೆ ತರಲು ಇದರಿಂದ ಅನುಕೂಲವಾಗಲಿದೆ.

279. ಮಾಜಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕುಸ್ತಿ ಪೈಲ್ವಾನರುಗಳಿಗೆ ನೀಡುತ್ತಿರುವ ಮಾಸಾಶನವನ್ನು ಕ್ರಮವಾಗಿ 1500 ರೂ.ಗಳಿಂದ 2500 ರೂ.ಗಳಿಗೆ, 2000 ರೂ.ಗಳಿಂದ 3000 ರೂ.ಗಳಿಗೆ ಹಾಗೂ 3000 ರೂ.ಗಳಿಂದ 4000 ರೂ.ಗಳಿಗೆ ಹೆಚ್ಚಿಸಲಾಗುವುದು.

280. 2017–18ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಗೆ ಒಟ್ಟಾರೆಯಾಗಿ 285 ಕೋಟಿ ರೂ. ಒದಗಿಸಲಾಗಿದೆ.

## ಆಹಾರ ಮತ್ತು ನಾಗರೀಕ ಸರಬರಾಜು

281. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯವನ್ನು ಹಸಿವು ಮುಕ್ತಗೊಳಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಅನ್ನ ಭಾಗ್ಯ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ 1.08 ಕೋಟಿ ಕುಟುಂಬಗಳು ಈ ಯೋಜನೆಯ ಲಾಭ ಪಡೆದಿದ್ದಾರೆ.

- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅವರ ಪೌಷ್ಠಿಕಾಂಶದಲ್ಲಿ ಸಾಕಷ್ಟು ಪ್ರೋಟೀನ್‌ಗಳು ದೊರೆಯುವುದನ್ನು ಖಾತರಿಪಡಿಸಲು ಅನ್ನಭಾಗ್ಯ ಯೋಜನೆಯ ಭಾಗವಾಗಿ ಒಂದು ಪಡಿತರ ಚೀಟಿಗೆ ಒಂದು ಕೆ.ಜಿ ಬೇಳೆ ನೀಡುವುದನ್ನು ಪ್ರಸಕ್ತ ಸಾಲಿನಿಂದ ಚಾಲನೆ ನೀಡಲಾಗಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

282. ಅನ್ನಭಾಗ್ಯ ಯೋಜನೆಯಡಿ ಪ್ರಸ್ತುತ ನೀಡುತ್ತಿರುವ 5 ಕೆ.ಜಿ. ಆಹಾರ ಧಾನ್ಯ ಪ್ರಮಾಣವನ್ನು ಜನತೆಯ ಬೇಡಿಕೆ ಮೇರೆಗೆ ಪ್ರತಿ ವ್ಯಕ್ತಿಗೆ 7 ಕೆ.ಜಿ.ಗೆ ಏರಿಸಲಾಗಿದೆ.

283. ಪಡಿತರ ವ್ಯವಸ್ಥೆಯಿಂದ ಸುಮಾರು 20 ಲಕ್ಷ ಬಡಕುಟುಂಬಗಳನ್ನು ಅನ್ನಭಾಗ್ಯ ಯೋಜನೆ ವ್ಯಾಪ್ತಿಯಲ್ಲಿ ಈಗಾಗಲೇ ತರಲಾಗಿದ್ದು ಅರ್ಹತಾ ಮಾನದಂಡಗಳನ್ನು ಸರಳಗೊಳಿಸಿ ಹೊಸ ಪಡಿತರ ಚೀಟಿ ವಿತರಣೆಯ ಸೇವೆಯನ್ನು ಸಕಾಲ ಯೋಜನೆಯಡಿ 15 ದಿನಗಳೊಳಗಾಗಿ ಅರ್ಜಿದಾರರ ಮನೆಬಾಗಿಲಿಗೆ ಸ್ಪೀಡ್ ಪೋಸ್ಟ್ ಮುಖಾಂತರ ಜಾರಿಗೊಳಿಸಲಾಗುವುದು.

284. ಕಲ್ಯಾಣ ಸಂಸ್ಥೆಗಳಾದ ನಾರಿನಿಕೇತನ, ವೃದ್ಧಾಶ್ರಮ, ಅಂಧಮಕ್ಕಳ ಶಾಲೆ, ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಭಿಕ್ಷುಕರ ಪುನರ್ವಸತಿ ಕೇಂದ್ರ ಮುಂತಾದವುಗಳಿಗೆ ಅನ್ನಭಾಗ್ಯ

ಮಾದರಿಯಂತೆಯೇ ಉಚಿತವಾಗಿ ಆಹಾರ ಧಾನ್ಯ ನೀಡಲಾಗುವುದು.

285. ರಾಜ್ಯದ ಅನಿಲರಹಿತ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕ ಒದಗಿಸಲು ಹಾಗೂ ರಾಜ್ಯವನ್ನು ಪಡಿತರ ಸೀಮೆಎಣ್ಣೆ ಮುಕ್ತ ರಾಜ್ಯವನ್ನಾಗಿ ಮಾಡಲು "ಅನಿಲ ಭಾಗ್ಯ" ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಇದರಲ್ಲಿ 5 ಲಕ್ಷ ಅರ್ಹ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕಕ್ಕಾಗಿ ಪ್ರತಿ ಫಲಾನುಭವಿಗೆ 1600 ರೂ. ಸಹಾಯಧನ ವಿತರಣೆ ಹಾಗೂ ಅನಿಲ ಸೌಲಭ್ಯ ಹೊಂದಿದ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರಿಗೆ, ತಮಗೆ ಹಂಚಿಕೆಯಾದ ಸೀಮೆಎಣ್ಣೆ ಅಥವಾ ಉಚಿತ ರೀಚಾರ್ಜೇಬಲ್ ಎಲ್.ಇ.ಡಿ. ಸೆಟ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗುವುದು.

286. ಮುಂದುವರೆದು, ಈ ಕೆಳಕಂಡ ಸುಧಾರಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

- ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತಿ ಸಮಿತಿಗಳನ್ನು ಸಧೃಡಗೊಳಿಸಿ ಅವರ ಮೂಲಕ ಸಾಮಾಜಿಕ ಲೆಕ್ಕಪರಿಶೋಧನೆ.

- ಇ–ಆಡಳಿತ ಇಲಾಖೆಯೊಂದಿಗೆ ಎಲ್ಲಾ ನ್ಯಾಯಬೆಲೆ ಅಂಗಡಿಗಳನ್ನು "ಸೇವಾಸಿಂಧು" ಕೇಂದ್ರವನ್ನಾಗಿ ಪರಿವರ್ತಿಸುವುದು.

- ಹೆಚ್ಚುವರಿ ಗ್ರಾಹಕ ವ್ಯಾಜ್ಯ ಪೀಠಗಳನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಿ ಎಲ್ಲಾ ಬಾಕಿ ಉಳಿದ ವ್ಯಾಜ್ಯಗಳನ್ನು ಶಾಸನಬದ್ದ 3 ತಿಂಗಳ ಅವಧಿಯೊಳಗೆ ವಿಲೇಗೊಳಿಸಲು ಅನುವು ಮಾಡುವುದು.

287. 2017–18ನೇ ಸಾಲಿನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಒಟ್ಟಾರೆಯಾಗಿ 3,636 ಕೋಟಿ ರೂ. ಒದಗಿಸಲಾಗಿದೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

**ಹಳ್ಳಿಗಳು ನಮ್ಮ ಭಾರತದ ಜೀವಾತ್ಮಗಳು**
**ಹಳ್ಳಿಗಳ ಅಭಿವೃದ್ಧಿಯಾಗದೆ**
**ಭಾರತದ ಅಭಿವೃದ್ಧಿ ಕನಸಿನ ಮಾತು.**

**– ಮಹಾತ್ಮಗಾಂಧೀಜಿ**

288. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಇಲಾಖೆಯು ವಿಕೇಂದ್ರೀಕರಣ, ನೈರ್ಮಲ್ಯ, ಇ–ಆಡಳಿತ ಮತ್ತು ಪಾರದರ್ಶಕತೆ ಅಂಶಗಳ ಸಾಧನೆಗೆ ಕೇಂದ್ರ ಸರ್ಕಾರದಿಂದ ಪ್ರಾಪ್ತವಾಗುವ ವಾರ್ಷಿಕ ರಾಷ್ಟ್ರೀಯ ಪ್ರಶಸ್ತಿ,

ಅಬ್ದುಲ್ ನಜೀರ್‌ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಾಮರ್ಥ್ಯ ನಿರ್ಮಾಣಕ್ಕೆ ವಿಶ್ವಬ್ಯಾಂಕಿನ ಪ್ರಶಂಸೆ.

- ಕ್ರಾಂತಿಕಾರಕ "ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ–2015" ಅನುಷ್ಠಾನ.

- 460 ಹೊಸ ಗ್ರಾಮ ಪಂಚಾಯಿತಿಗಳ ರಚನೆ.

- 4023 "ಬಾಪೂಜಿ ಸೇವಾ ಕೇಂದ್ರ" ಗಳನ್ನು ಗ್ರಾಮ ಪಂಚಾಯಿತಿ ಕಛೇರಿಯಲ್ಲಿಯೇ ಸ್ಥಾಪನೆ. 18.5 ಲಕ್ಷ ಪಹಣಿ ಪತ್ರ, 2.4 ಲಕ್ಷ ನಾಡ ಕಛೇರಿ ಸೇವೆಗಳ ಅರ್ಜಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2802 ಸೇವೆಗಳ ಅರ್ಜಿಗಳನ್ನು ಬಾಪೂಜಿ ಸೇವಾ ಕೇಂದ್ರದ ಮೂಲಕ ವಿತರಣೆ.

- 9,300 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ; 1.6 ಕೋಟಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆ.

- 1,554 ಕೋಟಿ ರೂ.ಗಳ ವೆಚ್ಚದಲ್ಲಿ 190 ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ. 40 ಲಕ್ಷ ಜನರಿಗೆ ನೀರಿನ ಪೂರೈಕೆ. ಇದರಿಂದ 2,539 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ.

- ಶೌಚಾಲಯ ವ್ಯವಸ್ಥೆಯನ್ನು ಹೊಂದಿರುವ ಗ್ರಾಮೀಣ ಕುಟುಂಬಗಳ ಪ್ರಮಾಣ ಶೇ.35.41 ರಿಂದ ಶೇ.70ಕ್ಕೆ ಏರಿಕೆ. ಬಾಕಿ ಇದ್ದ 55 ಲಕ್ಷ ವೈಯಕ್ತಿಕ ಶೌಚಾಲಯಗಳ ಪೈಕಿ 28 ಲಕ್ಷ ಶೌಚಾಲಯಗಳ ನಿರ್ಮಾಣಕ್ಕಾಗಿ "ಶೌಚಾಲಯಕ್ಕಾಗಿ ಸಮರ" ಎಂಬ ವಿನೂತನ ಕಾರ್ಯಕ್ರಮದ ಅನುಷ್ಠಾನ.

- ಪಂಚಾಯತ್ ರಾಜ್ ವ್ಯವಸ್ಥೆಯನ್ನು ತಳಹಂತದಲ್ಲಿ ಸದೃಢಗೊಳಿಸಲು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ, ಗ್ರಾಮೀಣ ಜನತೆಯ ಶಿಕ್ಷಣ, ಆರ್ಥಿಕ, ಆರೋಗ್ಯ, ನೈರ್ಮಲ್ಯ ವ್ಯವಸ್ಥೆಯನ್ನು ಉತ್ತಮಗೊಳಿಸಲು ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸಲು ಉನ್ನತ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಗದಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಸ್ಥಾಪನೆ.

- ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ 9,583 ಕಿ.ಮೀ.ಗಳಿಗೆ ಅನುಮೋದನೆ ನೀಡಿಕೆ. ಇದರಲ್ಲಿ 4,167 ಕೋಟಿ ರೂ.ಗಳನ್ನು ವೆಚ್ಚದಲ್ಲಿ 8,288 ಕಿ.ಮೀ.ಗಳು ಪೂರ್ಣ.

- ಶಾಸಕರ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಸಮಿತಿಯ ಮೂಲಕ ಗ್ರಾಮೀಣ ರಸ್ತೆಗಳ ನಿರ್ವಹಣೆಗೆ 589 ಕೋಟಿ ರೂ. ಅನುದಾನದ ಹಂಚಿಕೆ.

- ಸುವರ್ಣ ಗ್ರಾಮ ಯೋಜನೆಯಡಿ ಬಾಕಿಯಿದ್ದ 1300 ಗ್ರಾಮಗಳನ್ನು 946 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಗ್ರಾಮ ವಿಕಾಸ ಯೋಜನೆಯಡಿ 700 ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗಿದೆ.

- ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 52.7 ಲಕ್ಷ ಕುಟುಂಬಗಳು ಉದ್ಯೋಗ ಚೀಟಿ ನೋಂದಾವಣೆ; 24.8 ಕೋಟಿ ಮಾನವ ದಿನಗಳ ಸೃಜನೆ; ಇದಕ್ಕಾಗಿ 7,056 ಕೋಟಿ ರೂ.ಗಳ ವ್ಯಯ. ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಲ್ಲಿ 11.89 ಲಕ್ಷ ಆಸ್ತಿಗಳ ಸೃಜನೆ.

- ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ರೈತರ ಸಹಭಾಗಿತ್ವದಲ್ಲಿ ನರೇಗಾ ವತಿಯಿಂದ 5,000 ಕಿ.ಮೀ. ಉದ್ದದ ಮಣ್ಣಿನ ರಸ್ತೆ ನಿರ್ಮಾಣ.

**2017–18ನೇ ಸಾಲಿನ ಹೊಸ ಯೋಜನೆಗಳು**

289. ನಮ್ಮ ಗ್ರಾಮ ನಮ್ಮ ಯೋಜನೆಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಗ್ರಾಮ ಪಂಚಾಯಿತಿಗಳಲ್ಲಿ ತಯಾರು ಮಾಡಿರುವ ಯೋಜನೆಗಳನ್ನು ಕ್ರೋಢೀಕರಿಸಿ ತಾಲ್ಲೂಕು ಮತ್ತು ಜಿಲ್ಲಾ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲಾಗುವುದು. ಮುಂದಿನ ಐದು ವರ್ಷದ ಅವಧಿಗೆ ಗುರುತಿಸಲಾಗಿದ್ದ ಒಟ್ಟು 22.5 ಲಕ್ಷ ಚಟುವಟಿಕೆಗಳಲ್ಲಿ ಪ್ರಸಕ್ತ

ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 3.9 ಲಕ್ಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು.

290. ಗ್ರಾಮೀಣ ನೀರು ಸರಬರಾಜು ಯೋಜನೆಗಾಗಿ 2200 ಕೋಟಿ ರೂ.ಗಳನ್ನು ನೀಡಲಾಗುವುದು.

291. ರಾಸಾಯನಿಕ ಕಲುಷತೆಯಿಂದಾಗಿ ಗ್ರಾಮೀಣ ಜನರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ತಪ್ಪಿಸಲು ಹಾಗೂ ಕುಡಿಯುವ ನೀರಿನ ಸರಬರಾಜಿನಲ್ಲಿ ನಿರಂತರತೆ ಸಾಧಿಸಲು ಮೇಲ್ಮೈ ನೀರನ್ನು ಜಲಮೂಲವನ್ನಾಗಿಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ನಮ್ಮ ಸರ್ಕಾರ ಪ್ರಾಮುಖ್ಯತೆ ನೀಡಲಿದೆ.

292. ಪ್ರಸಕ್ತ ಸಾಲಿನಲ್ಲಿ 2500 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗುವುದು.

293. ಗ್ರಾಮೀಣ ನೈರ್ಮಲ್ಯವನ್ನು ಕಾಪಾಡಲು ಹಾಗೂ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತವಾಗಿಸಲು 1585 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಇದರಲ್ಲಿ ಶೌಚಾಲಯ ರಹಿತ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಕ್ಕಾಗಿ ಪ್ರೋತ್ಸಾಹಧನ ನೀಡಲಾಗುವುದು ಮತ್ತು ಸ್ಥಳದ ಸಮಸ್ಯೆಯಿರುವ ಕಡೆ ಸಾಮೂಹಿಕ ಶೌಚಾಲಯ ಸಂಕೀರ್ಣ ನಿರ್ಮಿಸಲಾಗುವುದು. ಗ್ರಾಮ ಸ್ವಚ್ಛತೆಯನ್ನು

ಕಾಪಾಡಲು ಘನ ಮತ್ತು ದ್ರವ್ಯ ತ್ಯಾಜ್ಯಗಳ ನಿರ್ವಹಣೆ ಮಾಡಲಾಗುವುದು.

294. ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮಾರ್ಗಸೂಚಿಯಂತೆ "ಗ್ರಾಮೀಣ ರಸ್ತೆ ನಿರ್ವಹಣಾ ನೀತಿ"ಯನ್ನು ಜಾರಿಗೊಳಿಸಲಾಗುವುದು.

295. ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿ ರಾಜ್ಯದ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 25 ಕಿ.ಮೀ ಉದ್ದದ ಹೊಲಗಳಿಗೆ ಹೋಗುವ ಮಣ್ಣಿನ ರಸ್ತೆಯನ್ನು ನರೇಗಾ ವತಿಯಿಂದ ರೈತರ ಸಹಭಾಗಿತ್ವದೊಂದಿಗೆ ನಿರ್ಮಿಸಲಾಗುವುದು. ಇದಕ್ಕಾಗಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು

296. ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ 1 ಕೋಟಿ ರೂ.ಗಳಂತೆ ನೀಡುವ ಅನುದಾನದ ಜೊತೆಗೆ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಒಗ್ಗೂಡಿಸಿ 1000 ಗ್ರಾಮಗಳನ್ನು ಸರ್ವತೋಮುಖವಾಗಿ 2 ವರ್ಷಗಳಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ.

297. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–IVನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಿ, 4,386 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 1765 ಕೋಟಿ ರೂ.ಗಳನ್ನು ಒದಗಿಸಲಾಗುವುದು.

298. ದಿನಕ್ಕೆ 1000 ಲೀಟರ್ ಸಾಮರ್ಥ್ಯದ ಜೈವಿಕ ಇಂಧನ ಉತ್ಪಾದನಾ ಘಟಕ ಹಾಗೂ ಕೇಂದ್ರೀಯ ಜೈವಿಕ ಇಂಧನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಆರಂಭಿಸಲು 5 ಕೋಟಿ ರೂ.ಗಳನ್ನು ಒದಗಿಸಲು ಪ್ರಸ್ತಾಪಿಸಿದೆ.

299. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ 2017–18ನೇ ಸಾಲಿನಲ್ಲಿ –

- 12 ಕೋಟಿ ಮಾನವ ದಿನಗಳ ಸೃಜನೆಯ ಗುರಿ
- ರಾಷ್ಟ್ರೀಯ ಜೀವನೋಪಾಯ ಯೋಜನೆಯ ಸಹಯೋಗದೊಂದಿಗೆ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳನ್ನು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಕೈಗೊಳ್ಳಲು ಅನುಕೂಲವಾಗುವಂತೆ ಮಹಿಳಾ ವರ್ಕ್‌ಶೆಡ್‌ಗಳ ನಿರ್ಮಾಣ
- ಸ್ಥಳಾವಕಾಶ ಕೊರತೆಯಿರುವ ಕುಟುಂಬಗಳ ಪಶು / ಜಾನುವಾರುಗಳಿಗೆ ಅನುಕೂಲವಾಗುವಂತೆ ಗ್ರಾಮಗಳಲ್ಲಿ ಸಮುದಾಯ ದನದ ಕೊಟ್ಟಿಗೆ ನಿರ್ಮಾಣಕ್ಕೆ ಅವಕಾಶ.
- ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಪ್ರತಿ ತಾಲ್ಲೂಕಿಗೆ ಕನಿಷ್ಠ 200 ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ.

300. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನವನ್ನು 2 ಕೋಟಿ ರೂ.ಗಳಿಂದ 4 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

301. ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರ ಗೌರವಧನವನ್ನು ಕೆಳಕಂಡಂತೆ ಹೆಚ್ಚಿಸಲಾಗುವುದು.

- ಜಿಲ್ಲಾ ಪಂಚಾಯತ್ ಸದಸ್ಯರು – 3000 ರೂ.ಗಳಿಂದ 5000 ರೂ.
- ತಾಲ್ಲೂಕು ಪಂಚಾಯತಿ ಅಧ್ಯಕ್ಷರು – 4500 ರೂ.ಗಳಿಂದ 6000 ರೂ.
- ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರು – 3000 ರೂ.ಗಳಿಂದ 4000 ರೂ.
- ತಾಲ್ಲೂಕು ಪಂಚಾಯತಿ ಸದಸ್ಯರು – 1500 ರೂ.ಗಳಿಂದ 3000 ರೂ.
- ಗ್ರಾಮ ಪಂಚಾಯತಿ ಅಧ್ಯಕ್ಷರು – 1000 ರೂ.ಗಳಿಂದ 3000 ರೂ.
- ಗ್ರಾಮ ಪಂಚಾಯತಿ ಉಪಾಧ್ಯಕ್ಷರು – 600 ರೂ.ಗಳಿಂದ 2000 ರೂ.
- ಗ್ರಾಮ ಪಂಚಾಯತ್ ಸದಸ್ಯರು – 500 ರೂ.ಗಳಿಂದ 1000 ರೂ.

302. ಎಂ.ಜಿ.ಐ.ಆರ್.ಇ.ಡಿ ಆವರಣದಲ್ಲಿ 3 ಕೋಟಿ ರೂ.ಗಳ ವೆಚ್ಚದಲ್ಲಿ ಒಂದು ಮಾದರಿ ಪಾರಂಪರಿಕ ಗ್ರಾಮವನ್ನು ಸ್ಥಾಪಿಸಲಾಗುವುದು.

303. 2017–18ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಟ್ಟಾರೆಯಾಗಿ 14,061 ಕೋಟಿ ರೂ. ಒದಗಿಸಲಾಗಿದೆ.

## ಯೋಜನೆ ಮತ್ತು ಪ್ರದೇಶಾಭಿವೃದ್ಧಿ

304. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- 2014–15ನೇ ಸಾಲಿನ ಆಯವ್ಯಯ ಘೋಷಣೆಯಂತೆ ರಾಜ್ಯದಾದ್ಯಂತ ಗ್ರಾಮೀಣ ಭಾಗದಲ್ಲಿ ಜನನ ಮರಣಗಳ ಆನ್‌ಲೈನ್ ನೋಂದಣಿ ಪದ್ಧತಿಯನ್ನು ಜಾರಿಗೆ ತರಲಾಗಿದೆ.

- ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಡಾ॥ ಡಿ.ಎಂ.ನಂಜುಂಡಪ್ಪನವರ ವರದಿಯನ್ವಯ ಅನುಷ್ಠಾನಗೊಳಿಸುತ್ತಿರುವ ವಿಶೇಷ ಅಭಿವೃದ್ಧಿ ಯೋಜನೆಯನ್ನು 2014–15 ರಿಂದ ಮತ್ತೆ 5 ವರ್ಷಗಳವರೆಗೆ ವಿಸ್ತರಿಸಲಾಗಿದೆ.

- ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸಲು ಹಾಗೂ ಹೈದರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿಯ ಉದ್ದೇಶದೊಂದಿಗೆ ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿಯಲ್ಲಿ ಹೈದರಾಬಾದ್ – ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಗಿದೆ. ಅದಕ್ಕಾಗಿ ಕಳೆದ 3 ವರ್ಷಗಳಲ್ಲಿ 2503 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

## 2017–18 ರ ಹೊಸ ಯೋಜನೆಗಳು

305. ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರಾದೇಶಿಕ ಅಸಮತೋಲನಗಳ ಅಂತರವನ್ನು ಸರಿಪಡಿಸಲು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಈ ವರ್ಷ 1,500 ಕೋಟಿ ರೂ.ಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

306. ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಅನುಕ್ರಮವಾಗಿ 60 ಕೋಟಿ, 50 ಕೋಟಿ ಮತ್ತು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

307. ಕರ್ನಾಟಕ ಶಾಸಕರ ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಕ್ಕಾಗಿ 600 ಕೋಟಿ ರೂ.ಗಳನ್ನು ಒದಗಿಸಲಾಗುವುದು.

308. ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ತಗ್ಗಿಸುವ ಸಲುವಾಗಿ, ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಮುಂದುವರೆಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ 3000 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಎಲ್ಲಾ 114 ಹಿಂದುಳಿದ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸುಧಾರಣೆಗೊಳಿಸಲು ಈ ಅನುದಾನವನ್ನು ಬಳಸಿಕೊಳ್ಳಲಾಗುವುದು.

309. ನಕ್ಸಲ್ ಬಾಧಿತ 9 ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗಿ 2.25 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಒದಗಿಸಲಾಗುವುದು.

310. 2017–18ನೇ ಸಾಲಿನಲ್ಲಿ ಯೋಜನೆ ಮತ್ತು ಪ್ರದೇಶಾಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 1,828 ಕೋಟಿ ರೂ. ಒದಗಿಸಲಾಗಿದೆ.

## ನಗರಾಭಿವೃದ್ಧಿ

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

311. **ಅನುಮೋದನೆಗೊಂಡ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳು**

- ಕರ್ನಾಟಕದ ವಾಣಿಜ್ಯ ಉತ್ಪಾದನಾ ವಲಯದಲ್ಲಿ ಬೆಂಗಳೂರು ಸಿಂಹಪಾಲನ್ನು ಹೊಂದಿದೆ. ಇದನ್ನು

ಮನಗಂಡು ಬೆಂಗಳೂರಿಗೆ ಅಗತ್ಯವಿರುವ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುವುದು.

- ಬೆಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಹಾಗೂ ಬೆಂಗಳೂರು ನಾಗರಿಕರ ಕಲ್ಯಾಣಕ್ಕಾಗಿ ಕಳೆದ ವರ್ಷ 7300 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ದೂರದೃಷ್ಟಿಯಿಂದ ಈ ಅನುದಾನವನ್ನು 2016–17 ಮತ್ತು 2017–18ನೇ ಸಾಲಿಗೆ ಹಂಚಿಕೆ ಮಾಡಲಾಗಿದ್ದು, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿದ್ದು, ಈ ಕಾಮಗಾರಿಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. ಹಂಚಿಕೆಯಾದ ಪೂರ್ಣ ಮೊತ್ತವನ್ನು 2018ರ ಮಾರ್ಚ್ ಹೊತ್ತಿಗೆ ವೆಚ್ಚ ಮಾಡಲಾಗುವುದು.

312. **ಕಳೆದ** ವರ್ಷಗಳಲ್ಲಿ ನಮ್ಮ ಸರ್ಕಾರ ಆರಂಭಿಸಿದ ವ್ಯವಸ್ಥಿತ ನಗರ ರಸ್ತೆಗಳ ಉನ್ನತೀಕರಣ ನೀತಿಯನ್ನು (Systematic Road Upgradation Policy) ಮುಂದುವರೆಸುತ್ತಾ, ಈ ಕೆಳಕಂಡ ಕ್ರಿಯಾ ಯೋಜನೆಗಳಿಗೆ ಸಂಬಂಧಿಸಿದ ಪೂರ್ವಸಿದ್ಧತಾ ಕಾರ್ಯವನ್ನು 2017–18ರಲ್ಲಿ ಕೈಗೆತ್ತಿಕೊಳ್ಳಲಾಗುವುದು :–

- 690 ಕೋಟಿ ರೂ.ಗಳ ವೆಚ್ಚದಲ್ಲಿ ಸುಮಾರು 80 ಕಿ.ಮೀ. ಉದ್ದದ ಆಯ್ದ 43 ಪ್ರಮುಖ ರಸ್ತೆಗಳನ್ನು ಶ್ರೇಷ್ಠ ದರ್ಜೆ

ಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗುವುದು ಹಾಗೂ ಪಾದಚಾರಿ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲಾಗುವುದು.

- ಬೆಂಗಳೂರಿನ ಕೇಂದ್ರ ವಾಣಿಜ್ಯ ವಲಯದಲ್ಲಿ (CBD) 250 ಕೋಟಿ ರೂ.ಗಳ ವೆಚ್ಚದಲ್ಲಿ 3ನೇ ಹಂತದ ಟೆಂಡರ್‌ಶ್ಯೂರ್ ಮಾದರಿಯ 25 ಕಿ.ಮೀ. ಉದ್ದದ 25 ಅಂತರ್ ಸಂಪರ್ಕ ರಸ್ತೆಗಳನ್ನು ಸಮಗ್ರವಾಗಿ ಮೇಲ್ದರ್ಜೆಗೇರಿಸಲಾಗುವುದು.

- ಅತ್ಯಂತ ಹೆಚ್ಚಿನ ಸಂಚಾರ ದಟ್ಟಣೆ ಇರುವ 12 ಕಾರಿಡಾರ್‌ಗಳನ್ನು ಗುರುತಿಸಿದ್ದು, ಈ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಣೆ ಮಾಡಲು 150 ಕೋಟಿ ರೂ.ಗಳನ್ನು ಮೀಸಲಿರಿಸಲಾಗುವುದು.

- ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ 200 ಕಿ.ಮೀ. ಉದ್ದದ ವಿವಿಧ ರಸ್ತೆಗಳ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು 200 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

- ನಗರದ ರಸ್ತೆಗಳಲ್ಲಿ ತಡೆರಹಿತ ವಾಹನಗಳ ಸಂಚಾರಕ್ಕಾಗಿ ಬೆಂಗಳೂರು ನಗರದ ಆಯ್ದ 9 ವಾಹನ ದಟ್ಟಣೆ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್‌ಗಳನ್ನು ನಿರ್ಮಿಸಲು 421 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

ಅಲ್ಲದೆ, ವಾಹನಗಳ ತಡೆರಹಿತ ಚಾಲನೆಗೆ ಅನುವಾಗುವಂತೆ ರೈಲ್ವೆ ಮೇಲ್ಸೇತುವೆ ಮತ್ತು ಕೆಳ ಸೇತುವೆಗಳ ನಿರ್ಮಾಣಕ್ಕಾಗಿ ಬಿಬಿಎಂಪಿಗೆ 150 ಕೋಟಿ ರೂ.ಗಳನ್ನು ಒದಗಿಸಲಾಗುವುದು.

- ಬಿಬಿಎಂಪಿ ವ್ಯಾಪ್ತಿಯಲ್ಲಿನ ಬೃಹತ್ ಮಳೆ ನೀರು ಚರಂಡಿಗಳ (Storm water drains) ಅಭಿವೃದ್ಧಿಗಾಗಿ 300 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

- ರಸ್ತೆ ಉಬ್ಬುಗಳು, ಲೇನ್ ಮಾರ್ಕಿಂಗ್, ಸೈನೇಜ್, ಮೀಡಿಯನ್, ಜಂಕ್ಷನ್ ಅಭಿವೃದ್ಧಿ ಇತ್ಯಾದಿ ಸಂಚಾರಿ ಇಂಜಿನಿಯರಿಂಗ್ ಕಾಮಗಾರಿಗಳನ್ನು ಕೈಗೊಳ್ಳಲು 200 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

- ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲವಾಗುವಂತೆ ನಗರದ ವಿವಿಧ ಸ್ಥಳಗಳಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸುವುದು ಅಗತ್ಯವಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಇವುಗಳನ್ನು ನಿರ್ಮಿಸುವುದನ್ನು ಉತ್ತೇಜಿಸಲು ಬಿಬಿಎಂಪಿಗೆ 80 ಕೋಟಿ ರೂ.ಗಳನ್ನು Viability Gap Funding ರೂಪದಲ್ಲಿ ನೀಡಲಾಗುತ್ತಿದೆ.

313. 50 ಕೋಟಿ ರೂ.ಗಳ ವೆಚ್ಚದಲ್ಲಿ 1000 ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದು.

314. ಜನಸಾಮಾನ್ಯರಿಗೆ ಊಟ ಮತ್ತು ಉಪಹಾರವನ್ನು ಕೈಗೆಟುಕುವ ದರದಲ್ಲಿ ಒದಗಿಸುವ ಸಲುವಾಗಿ "ನಮ್ಮ ಕ್ಯಾಂಟೀನ್" ಎಂಬ ವಿನೂತನ ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಒಂದರಂತೆ ಕ್ಯಾಂಟೀನ್‌ಗಳನ್ನು ತೆರೆದು ಇದರಲ್ಲಿ ಬೆಳಗಿನ ಉಪಹಾರ 5 ರೂ.ಗಳಿಗೆ, ಮಧ್ಯಾಹ್ನ ಹಾಗೂ ರಾತ್ರಿ ಊಟ ತಲಾ 10 ರೂ.ಗಳಂತೆ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ 100 ಕೋಟಿ ರೂ.ಗಳನ್ನು ನೀಡಲಾಗುವುದು.

## ಬೆಂಗಳೂರು ಮೆಟ್ರೊ ರೈಲು ನಿಗಮ

315. **ಹಂತ-1 :** ಯೋಜನೆಯ ಹಂತ-1ರ 42.3 ಕಿ.ಮೀ. ಉದ್ದದ ಇಡೀ ಮಾರ್ಗವನ್ನು 2017ರ ಏಪ್ರಿಲ್‌ಗೆ ಪೂರ್ಣಗೊಳಿಸಲಾಗುವುದು.

316. **ಹಂತ-2 :** ಬೆಂಗಳೂರು ಮೆಟ್ರೊ ರೈಲು ಯೋಜನೆಯ 2ನೇ ಹಂತದ ಮಾರ್ಗವು ಒಟ್ಟು 72.095 ಕಿ.ಮೀ. ಗಳಾಗಿದ್ದು, ಇದರ ಅಂದಾಜು ವೆಚ್ಚ 26,405 ಕೋಟಿ ರೂ.ಗಳು ಆಗಿರುತ್ತದೆ. ಈ ಕಾಮಗಾರಿಯ ರೀಚ್-4ರ ವಿಸ್ತರಣೆ (ಪುಟ್ಟೇನಹಳ್ಳಿಯಿಂದ ಅಂಜನಾಪುರ) ಮತ್ತು ರೀಚ್-2ರ ವಿಸ್ತರಣೆಯು (ಮೈಸೂರು ರಸ್ತೆಯಿಂದ ಕೆಂಗೇರಿ) ಕಾಮಗಾರಿಗಳು ಪ್ರಗತಿಯಲ್ಲಿವೆ.

317. **ಬೆಂಗಳೂರು ಮೆಟ್ರೊ ರೈಲು ಯೋಜನೆ ಹಂತ–2A** ಅಡಿ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರಂ ಜಂಕ್ಷನ್ (17 ಕಿ.ಮೀ.ಉದ್ದ)ವರೆಗೆ ಹೆಚ್ಚುವರಿ ಮಾರ್ಗ ನಿರ್ಮಾಣಕ್ಕಾಗಿ ವಿನೂತನ ವಿಧಾನಗಳಿಂದ ಅನುದಾನ ಒದಗಿಸಲಾಗುತ್ತಿದ್ದು, 4200 ಕೋಟಿ ರೂ.ಗಳ ಘಟಕ ವೆಚ್ಚದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುವುದು.

318. ನಮ್ಮ ಮೆಟ್ರೊ ಹಂತ–3 ಯೋಜನೆಯ ಕಾರ್ಯ ಸಾಧ್ಯತೆಯ ಅಧ್ಯಯನವು (Feasibility Study) ಪೂರ್ಣಗೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸೂಕ್ತ ಸಂಪರ್ಕ ಕಲ್ಪಿಸುವ ಮಾರ್ಗವನ್ನು ಅಂತಿಮಗೊಳಿಸುವ ಹಂತದಲ್ಲಿದೆ.

## ನಗರ ಭೂಸಾರಿಗೆ ನಿರ್ದೇಶನಾಲಯ

319. ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಣೆ ಮಾಡಲು ಉಪನಗರ ರೈಲ್ವೆ ಯೋಜನೆಯನ್ನು ವಿಶೇಷ ಉದ್ದೇಶ ವಾಹಕದ (SPV) ಮೂಲಕ ಕೈಗೊಳ್ಳಲು ಭಾರತೀಯ ರೈಲ್ವೆ ಮಂತ್ರಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಯೋಜನೆಯ ಮೊದಲನೇ ಹಂತವನ್ನು 345 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

320. ಆರೋಗ್ಯಕರ, ಪರಿಸರ ಸ್ನೇಹಿ ಮೋಟಾರು–ರಹಿತ ಸಾರಿಗೆ ವ್ಯವಸ್ಥೆಯನ್ನು ನಾಗರಿಕರಿಗೆ ಒದಗಿಸುವ ಉದ್ದೇಶದಿಂದ

ಬಾಡಿಗೆ ಸೈಕಲ್ ಒದಗಿಸುವ ಯೋಜನೆಯನ್ನು ಮೈಸೂರಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಇದೇ ಯೋಜನೆಯನ್ನು ಬೆಂಗಳೂರು ನಗರದ ಆಯ್ದ ಕ್ಲಸ್ಟರ್‌ಗಳಲ್ಲಿ ಪ್ರಾರಂಭಿಸಲಾಗುವುದು.

**ಪೌರಾಡಳಿತ ನಿರ್ದೇಶನಾಲಯ**

321. ನಗರೋತ್ಥಾನ (ಮಹಾನಗರ ಪಾಲಿಕೆ) ಹಂತ–3 ಯೋಜನೆಯಡಿಯಲ್ಲಿ 1000 ಕೋಟಿ ರೂ.ಗಳ ವೆಚ್ಚದ ಎಲ್ಲಾ ಅನುಮೋದಿತ 1565 ಕಾಮಗಾರಿಗಳನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

322. ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ (CMSMTDP) ನಗರೋತ್ಥಾನ (ಪುರಸಭೆ / ನಗರಸಭೆ) ಹಂತ–2 ಯೋಜನೆಯಡಿ 2,060 ಕೋಟಿ ರೂ.ಗಳ ವೆಚ್ಚದ ಎಲ್ಲ ಅನುಮೋದಿತ 2050 ಕಾಮಗಾರಿಗಳನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

323. ನಗರೋತ್ಥಾನ (ಪುರಸಭೆ/ನಗರಸಭೆ) ಹಂತ–3 ಯೋಜನೆಯಡಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಾಗರಿಕರಿಗೆ ಕುಡಿಯುವ ನೀರು ಮತ್ತು ಮೂಲಭೂತ ಸೌಕರ್ಯಗಳಿಗೆ ಆದ್ಯತೆಯೊಂದಿಗೆ 2,886 ಕೋಟಿ ರೂ.ಗಳ

ವೆಚ್ಚದ ಕಾಮಗಾರಿಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

324. ರಾಜೀವ್ ಆವಾಸ್ ಯೋಜನೆಯಡಿ 550 ಕೋಟಿ ರೂ.ಗಳ ವೆಚ್ಚದಲ್ಲಿ 22,133 ವಸತಿಗೃಹಗಳ (DUs) ನಿರ್ಮಾಣವನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

325. ಎಲ್ಲರಿಗೂ ಸೂರು ಅಭಿಯಾನದಡಿ 2,612 ಕೋಟಿ ರೂ.ಗಳ ವೆಚ್ಚದಲ್ಲಿ 60,000 ಮನೆಗಳ ನಿರ್ಮಾಣವನ್ನು ನಗರ ಸ್ಥಳೀಯ ಸಂಸ್ಥೆಗಳು ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು.

326. ಘನತ್ಯಾಜ್ಯ ನಿರ್ವಹಣಾ ಯೋಜನೆಯಲ್ಲಿ 134 ನಗರ ಸ್ಥಳೀಯ ಸಂಸ್ಥೆಗಳಲ್ಲಿ 2017–18ನೇ ಸಾಲಿನಲ್ಲಿ ಕೆಲಸ ಆರಂಭವಾಗಲಿದೆ. ಮುಂದಿನ 2 ವರ್ಷಗಳಲ್ಲಿ 3.29 ಲಕ್ಷಗಳಷ್ಟು ವೈಯಕ್ತಿಕ ಶೌಚಾಲಯಗಳು, 9104 ಸಾಮರ್ಥ್ಯದ ಸಮುದಾಯ ಶೌಚಾಲಯಗಳು, 4,522 ಸಾಮರ್ಥ್ಯದ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿರುತ್ತದೆ.

327. 'ಅಮೃತ್' ಅಭಿಯಾನದಡಿ 2015–16ನೇ ಸಾಲಿನಿಂದ 2019–20 ರವರೆಗೆ ಒಟ್ಟು 4,953 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು 1080

ಕೋಟಿ ಆಗಿದೆ. 2,314 ಕೋಟಿ ರೂ. ಮೊತ್ತದ 36 ಯೋಜನೆಗಳ ಅನುಷ್ಠಾನವನ್ನು ಆರಂಭಿಸಲಾಗುವುದು.

328. ಜಲನಿಧಿ (ನೀರು / ಒಳಚರಂಡಿ ಸಂಪರ್ಕ ಅನುಮತಿ), ನಿರ್ಮಾಣ್ (ಕಟ್ಟಡ ನಿರ್ಮಾಣ ಅನುಮತಿ), ವ್ಯಾಪಾರ್ (ಉದ್ದಿಮೆ ಪರವಾನಿಗೆ), ಇ–ಆಸ್ತಿ (ಆಸ್ತಿಗಳ ಮಾಲೀಕತ್ವದ ಹಕ್ಕು ವರ್ಗಾವಣೆ) ಮತ್ತು ಜನಹಿತ (ಸಾರ್ವಜನಿಕ ದೂರುಗಳ ನಿರ್ವಹಣೆ)ಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಸ್ವೀಕೃತಿ, ಅನುಮೋದನೆ ಮತ್ತು ಸೇವಾ ವಿತರಣೆಯನ್ನು ಸುಗಮಗೊಳಿಸಲು ಸುಧಾರಿತ 'web application'ನ್ನು ಜಾರಿಗೆ ತರಲಾಗುವುದು. ಈ web applicationನ Mobile Version ಸಹ ಸಿದ್ಧಪಡಿಸಲಾಗುವುದು.

329. ಕರ್ನಾಟಕ ನಗರಸಭೆ ಅಧಿನಿಯಮ, 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ, 1976 ಇವುಗಳಿಗೆ ಸೂಕ್ತ ತಿದ್ದುಪಡಿ ತಂದು ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳನ್ನು ಒಂದೇ ಅಧಿನಿಯಮದಡಿ ತರಲಾಗುವುದು.

330. ಆಯ್ದ ಹತ್ತು ಪಟ್ಟಣಗಳಲ್ಲಿ ಮೈಕ್ರೋ ಪ್ಲಾನಿಂಗ್ ಯೋಜನೆ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ನಗರ ಅಭಿವೃದ್ದಿ ಪರಿಚಯಿಸುವುದರ ಜೊತೆಗೆ ಪಾರದರ್ಶಕತೆ ಮತ್ತು ಕಾಲಮಿತಿಯಲ್ಲಿ ಸೇವೆಗಳನ್ನು ಒದಗಿಸಲು ಕಟ್ಟಡ ಪರವಾನಗಿ ಮತ್ತು ಲೇಔಟ್ ಅನುಮೋದನೆ ಪ್ರಕ್ರಿಯೆಗಳನ್ನು ಸ್ವಯಂ

ಚಾಲಿತ ಆನ್‌ಲೈನ್ ತಂತ್ರಾಂಶ ಅಭಿವೃದ್ಧಿಯೊಂದಿಗೆ ನಗರಾಭಿವೃದ್ಧಿ ಇಲಾಖೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಗಣಕೀಕರಣಗೊಳಿಸಲಾಗುವುದು. ಇದಕ್ಕಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

331. ಈ ಸಾಲಿನಲ್ಲಿ ರಾಜ್ಯದ ಎಲ್ಲಾ 274 ನಗರ ಸ್ಥಳೀಯ ಸಂಸ್ಥೆಗಳ ಮಾಸ್ಟರ್ ಪ್ಲಾನ್‌ಗಳನ್ನು ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

332. ಟೌನ್ ಪ್ಲಾನಿಂಗ್ ಸ್ಕೀಂ ಅನ್ವಯ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಸ್ಥಾನದ ನಗರಗಳಿಗೆ ವರ್ತುಲ ರಸ್ತೆಗಳನ್ನು ಯಾವುದೇ ಬಂಡವಾಳ ಹೂಡಿಕೆ ಇಲ್ಲದ ಪಾಲುದಾರಿಕೆಯಲ್ಲಿ ನಿರ್ಮಿಸಲು ಕ್ರಮ ವಹಿಸಲಾಗುವುದು. ಇದರ ಸಿದ್ಧತಾ ಕಾರ್ಯಗಳಿಗಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

333. ಕುಡಿಯುವ ನೀರಿನ ಕೊರತೆ ಹಿನ್ನೆಲೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಮಂಗಳೂರಿನಲ್ಲಿ ಸಮುದ್ರ ನೀರು ಸಂಸ್ಕರಣ ಘಟಕವನ್ನು (Desalination Plant) ಸ್ಥಾಪಿಸಲಾಗುವುದು.

## ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

334. 290 ಕೋಟಿ ರೂ.ಗಳ ವೆಚ್ಚದ 6 ನೀರು ಸರಬರಾಜು ಯೋಜನೆಗಳು ಮತ್ತು 45 ಕೋಟಿ ರೂ.ಗಳ ವೆಚ್ಚದ 3

ಒಳಚರಂಡಿ ಯೋಜನೆಗಳನ್ನು 2016–17ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದೆ.

335. 865.41 ಕೋಟಿ ರೂ.ಗಳ ವೆಚ್ಚದ ಒಟ್ಟಾರೆ 27 ಯೋಜನೆಗಳು (14 ನೀರು ಸರಬರಾಜು ಮತ್ತು 13 ಒಳಚರಂಡಿ ಯೋಜನೆಗಳು)ನ್ನು 2017–18ನೇ ಸಾಲಿನಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

336. 3,000 ಫ್ಲ್ಯಾಟ್‌ಗಳ ನಿರ್ಮಾಣ ಮತ್ತು ಹಂಚಿಕೆಯನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಅನುಷ್ಠಾನದ ಹಂತದಲ್ಲಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 5,000 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

337. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 166 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಕೋನದಾಸಪುರ ಗ್ರಾಮದಲ್ಲಿ ನವೀನ ಮಾದರಿಯ ಟೌನ್‌ಶಿಪ್‌ನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

338. 2017–18ನೇ ಸಾಲಿನಲ್ಲಿ 350 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೆಂಪೇಗೌಡ ಬಡಾವಣೆಯ ಮೂಲಕ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 10.7 ಕಿ.ಮೀ. ಪ್ರಮುಖ ಅರ್ಟೀರಿಯಲ್ ರಸ್ತೆಯನ್ನು ನಿರ್ಮಿಸಲು

ಉದ್ದೇಶಿಸಿದೆ ಮತ್ತು ಈ ರಸ್ತೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಆಯ್ದ 5 ಸ್ಥಳಗಳಲ್ಲಿ ವಾಣಿಜ್ಯ ಚಟುವಟಿಕೆಗಳ ಕೇಂದ್ರಗಳನ್ನು (Commercial Hubs) ಅಭಿವೃದ್ಧಿಪಡಿಸಲು ಸಹ ಉದ್ದೇಶಿಸಿದೆ.

339. 75 ಕೋಟಿ ರೂ.ಗಳ ವೆಚ್ಚದಲ್ಲಿ, 12 ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ಪೂರ್ಣಗೊಳಿಸಲಾಗಿದೆ. 42 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಇತರೆ 10 ಕೆರೆಗಳ ಸಮಗ್ರ ಅಭಿವೃದ್ಧಿಯನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. 2017–18ನೇ ಸಾಲಿನಲ್ಲಿ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.

340. ಹೊರವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್ ನಲ್ಲಿ ಕೆಳಸೇತುವೆ ನಿರ್ಮಾಣ ಹಾಗೂ ಮೇಲು ಸೇತುವೆಯ ಅಗಲೀಕರಣ ಕಾರ್ಯವನ್ನು 88 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು.

341. 44 ಕೋಟಿ ರೂ.ಗಳ ವೆಚ್ಚದಲ್ಲಿ ಹೊರವರ್ತುಲ ರಸ್ತೆಯಲ್ಲಿ ದೊಡ್ಡನೆಕ್ಕುಂದಿ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಮೇಲು ಸೇತುವೆಯನ್ನು ಜೂನ್ 2017ರಲ್ಲಿ ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು.

342. ಬೆಂಗಳೂರು ನಗರದಲ್ಲಿ ಸಂಚಾರದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದಂತಹ ಸಿಲ್ಕ್ ಬೋರ್ಡ್ ಜಂಕ್ಷನ್ ಹಾಗೂ ಕೆ.ಆರ್.ಪುರ ಜಂಕ್ಷನ್‌ಗಳನ್ನು ಬಿ.ಎಂ.ಆರ್.ಸಿ.ಎಲ್ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗುವುದು.

## ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ

343. 2012–13ರಲ್ಲಿ ನೀರಿನ ತಾಂತ್ರಿಕ ಹಾಗೂ ವಾಣಿಜ್ಯ ಸೋರಿಕೆ ಶೇ.49ರಷ್ಟಿದ್ದು, ಈಗ ಶೇ.44ಕ್ಕೆ ಇಳಿಸಲಾಗಿದೆ. ಹಾಗೂ 2017–18ರ ಅಂತ್ಯದ ವೇಳೆಗೆ ಈ ಪ್ರಮಾಣವನ್ನು ಶೇ.40ಕ್ಕೆ ಇಳಿಸಲಾಗುವುದು.

344. ಕಳೆದ 4 ವರ್ಷಗಳ ಅವಧಿಯಲ್ಲಿ 2.43 ಲಕ್ಷ ಹೊಸ ನೀರಿನ ಸಂಪರ್ಕಗಳನ್ನು ನೀಡಲಾಗಿದೆ. ಇದು ಹಿಂದಿನ ಸಂಪರ್ಕಗಳ ಮೇಲೆ ಶೇ.35ರಷ್ಟು ಹೆಚ್ಚಳವಾಗಿರುತ್ತದೆ.

345. ಮಂಡಳಿ ವತಿಯಿಂದ 845 ಕೋಟಿ ರೂ.ಗಳ ವೆಚ್ಚದಲ್ಲಿ 340 ದಶಲಕ್ಷ ಲೀಟರ್ ಸಾಮರ್ಥ್ಯದ 12 ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕಾರ್ಯವು ಈ ವರ್ಷ ಪೂರ್ಣಗೊಳ್ಳುವ ಹಂತದಲ್ಲಿದೆ.

346. ನಗರದ 110 ಗ್ರಾಮಗಳಿಗೆ 1,886 ಕೋಟಿ ರೂ.ಗಳ ವೆಚ್ಚದಲ್ಲಿ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಕಾಮಗಾರಿಯನ್ನು ಏಪ್ರಿಲ್ 2017ರಲ್ಲಿ ಪ್ರಾರಂಭಿಸಿ 2 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

347. ಜೈಕಾ ಸಹಾಯದೊಂದಿಗೆ 5052 ಕೋಟಿ ರೂ.ಗಳ ವೆಚ್ಚದಲ್ಲಿ ಕಾವೇರಿ 5ನೇ ಹಂತ ಹಾಗೂ 110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಸಾಲಿನಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುವುದು. ಇದರಿಂದ ನಗರಕ್ಕೆ 775 ದಶಲಕ್ಷ ಲೀಟರ್ ಕುಡಿಯುವ ನೀರು ಕಾವೇರಿ ನದಿಯಿಂದ ಲಭ್ಯ ಮಾಡಲಾಗುವುದು.

348. ರಾಜ್ಯ ಸರ್ಕಾರದ ಮೆಗಾ ಸಿಟಿ ಯೋಜನೆಯಡಿಯಲ್ಲಿ 1209 ಕೋಟಿ ರೂ.ಗಳ ವೆಚ್ಚದಲ್ಲಿ 440 ದಶಲಕ್ಷ ಲೀಟರ್ ಸಾಮರ್ಥ್ಯದ 4 ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ಪ್ರಾರಂಭಿಸಲಾಗುವುದು ಹಾಗೂ ಅಮೃತ್ ಯೋಜನೆಯಡಿಯಲ್ಲಿ 129 ಕೋಟಿ ರೂ.ಗಳ ವೆಚ್ಚದಲ್ಲಿ 75 ದಶ ಲಕ್ಷ ಲೀಟರ್ ಸಾಮರ್ಥ್ಯದ 5 ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಯನ್ನು 2020ರ ವೇಳೆಗೆ ಪೂರ್ಣಗೊಳಿಸಲಾಗುವುದು. ಇದರಿಂದ ನಗರದಲ್ಲಿ ತ್ಯಾಜ್ಯ ನೀರು ಸಂಸ್ಕರಣ ಸಾಮರ್ಥ್ಯವು ಪ್ರಸ್ತುತ 721 ದಶಲಕ್ಷ ಲೀಟರ್ ಸಾಮರ್ಥ್ಯದಿಂದ 1576 ದಶ ಲಕ್ಷ ಲೀಟರ್ ಆಗಲಿದೆ.

349. ಕೊಳಚೆ ಪ್ರದೇಶದ 30*20 ನಿವೇಶನಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ 10,000 ಲೀಟರ್ ನೀರನ್ನು ಪ್ರತಿ ತಿಂಗಳು

ಉಚಿತವಾಗಿ ನೀಡಲು ಸರ್ಕಾರವು ತೀರ್ಮಾನಿಸಿದೆ ಹಾಗೂ ಸದರಿ ನಿವಾಸಿಗಳ ಬಾಕಿ ಬಿಲ್ಲನ್ನು ಮನ್ನಾ ಮಾಡಲಾಗುವುದು.

350. ತಿಪ್ಪಗೊಂಡನಹಳ್ಳಿಯಲ್ಲಿರುವ ಜಲಾಶಯವನ್ನು ಪುನಶ್ಚೇತನಗೊಳಿಸಲು ಮಂಡಳಿ ವತಿಯಿಂದ ಯೋಜನೆಯನ್ನು ಪ್ರಾರಂಭಿಸಲಾಗುವುದು.

**ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ:**

351. ಕರ್ನಾಟಕ ಸಮಗ್ರ ಮತ್ತು ನಗರ ಜಲ ನಿರ್ವಹಣೆ ಬಂಡವಾಳ ಹೂಡಿಕೆ ಕಾರ್ಯಕ್ರಮದಡಿಯಲ್ಲಿ 2187 ಕೋಟಿ ರೂ.ಗಳ ವೆಚ್ಚದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿಯನ್ನು 8 ಪಟ್ಟಣಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. 4 ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿ ಈ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

352. ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮ (NKUSIP) ದಡಿ 12 ಪಟ್ಟಣಗಳಲ್ಲಿ 24X7 ನೀರು ಸರಬರಾಜು ಕಾಮಗಾರಿಗಳು ಮತ್ತು 7 ಪಟ್ಟಣಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

353. ಕರ್ನಾಟಕ ನೀರು ಸರಬರಾಜು ಆಧುನೀಕರಣ ಯೋಜನೆ ಅಡಿಯಲ್ಲಿ ಹುಬ್ಬಳ್ಳಿ–ಧಾರವಾಡಕ್ಕೆ 12 ವರ್ಷಗಳಿಗೆ ನೀರು

ಸರಬರಾಜು ಮಾಡಲು ಆಪರೇಟರ್ ಗುತ್ತಿಗೆಯನ್ನು 252 ಕೋಟಿ ರೂ.ಗಳಿಗೆ ನೀಡಲಾಗಿದೆ. ಬೆಳಗಾವಿ ಮತ್ತು ಕಲಬುರಗಿ ಗುತ್ತಿಗೆಯನ್ನು 2017–18ನೇ ಸಾಲಿನಲ್ಲಿ ಅಂತಿಮಗೊಳಿಸಲಾಗುವುದು.

354. ಸ್ಮಾರ್ಟ್ ಸಿಟಿ ಅಭಿಯಾನದಡಿ ಸೇರಿರುವ ಆರು ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ, ಮಂಗಳೂರು ಮತ್ತು ತುಮಕೂರು ನಗರಗಳಿಗೆ 800 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಕಾಮಗಾರಿಗಳು ಪ್ರಸಕ್ತ ಸಾಲಿನಲ್ಲಿ ಪ್ರಾರಂಭವಾಗಲಿವೆ.

355. 2017–18ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 18,127 ಕೋಟಿ ರೂ. ಒದಗಿಸಲಾಗಿದೆ.

## ಕಂದಾಯ

### 356. ಕಳೆದ ನಾಲ್ಕು ವರ್ಷಗಳ ಸಾಧನೆಗಳು

- ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿದ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ಕ್ಕೆ ಕಲಂ 94ಸಿ ಮತ್ತು 94ಸಿಸಿ ಸೇರ್ಪಡೆ ಮಾಡಲಾಗಿದೆ.

- ಕರ್ನಾಟಕ ಭೂಕಂದಾಯ ಕಾಯಿದೆ 1964ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಗೋಮಾಳ ಜಮೀನುಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಅರ್ಜಿಗಳನ್ನು ಒಂದು ಬಾರಿ ಸಕ್ರಮಾತಿ ಮಾಡಲು ಭೂ ಕಂದಾಯ ನಿಯಮಗಳು, 1966ರ ನಿಯಮ 97ಕ್ಕೆ ತಿದ್ದುಪಡಿ ತರಲಾಗಿದೆ.

- ಸರ್ಕಾರ ಹಾಗೂ ಸರ್ಕಾರದ ಒಡೆತನದ ಇನ್ನಿತರೆ ಸಂಸ್ಥೆಗಳಿಗೆ ಸೇರಿದ ಭೂಮಿಗಳನ್ನು ಕಬಳಿಸಲು ಮಾಡಲಾಗುವ ಸಂಘಟಿತ ಪ್ರಯತ್ನಗಳನ್ನು ತಡೆಗಟ್ಟುವ ಸಲುವಾಗಿ ಸರ್ಕಾರವು **ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011**ನ್ನು ಜಾರಿಗೆ ತಂದು ಕಾಯ್ದೆಯಡಿ ನಿರ್ದಿಷ್ಟ ಪಡಿಸಲಾದ ಅಪರಾಧಗಳ ಅಧಿವಿಚಾರಣೆ ನಡೆಸುವುದಕ್ಕೆ ಒಂದು ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ.

- ರಾಜ್ಯದಲ್ಲಿ ಒಟ್ಟು 2.02 ಲಕ್ಷ ಎಕರೆ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆ ಒಂದರಲ್ಲಿಯೇ 1 ಲಕ್ಷ ಕೋಟಿ ರೂ.ಗಳ ಮೌಲ್ಯದ ಒಟ್ಟು 5,325 ಎಕರೆ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

- ರಾಜ್ಯದಲ್ಲಿನ ಲಂಬಾಣಿ (ಬಂಜಾರ), ಗೊಲ್ಲ, ಭೋವಿ, ನಾಯಕ, ಸೋಲಿಗ, ಕಾಡುಕುರುಬ, ಮುಂತಾದ ಹಿಂದುಳಿದ ಸಮುದಾಯಗಳ ಜನರು ವಾಸಿಸುವ ಹಲವು ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಸಂಬಂಧ ಕಂದಾಯ ಇಲಾಖೆಯಲ್ಲಿ ವಿಶೇಷ ಕೋಶವೊಂದನ್ನು ಸೃಜಿಸಲಾಗಿದೆ. ಇದುವರೆಗೆ 339 ಪ್ರಕರಣಗಳಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.

- **'ಪರಿಹಾರ'** ಎಂಬ ಹೊಸ ತಂತ್ರಾಂಶದ ಮೂಲಕ ಇನ್‌ಪುಟ್ ಸಬ್ಸಿಡಿ / ಇತರೆ ಪರಿಹಾರಗಳನ್ನು ರೈತರ ಖಾತೆಗಳಿಗೆ ನೇರ ವರ್ಗಾವಣೆ ಮಾಡಲು ಅನುವು ಮಾಡಿಕೊಡಲಾಗಿದೆ.

- 2015 ರಿಂದ **"ಪೋಡಿ ಮುಕ್ತ ಅಭಿಯಾನ"**ವನ್ನು ಪ್ರಾರಂಭಿಸಿದ್ದು, ಈವರೆಗೆ 3782 ಗ್ರಾಮಗಳ ಒಟ್ಟು 8.36 ಲಕ್ಷ ಬ್ಲಾಕ್‌ಗಳ ಭೂಮಾಪನ ಕಾರ್ಯವನ್ನು ಪೂರ್ಣಗೊಳಿಸಿ, 6.28 ಲಕ್ಷ ಏಕಮಾಲೀಕತ್ವ ಪಹಣಿಗಳನ್ನು ಸೃಜಿಸಲಾಗಿದೆ.

- ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ 2,000 ರೂ.ಗಳ ಪಿಂಚಣಿ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಪಿಂಚಣಿಯೊಂದಿಗೆ ಆಶ್ರಿತ ಮಕ್ಕಳಿಗೆ ಪದವಿ ಹಂತದವರಗೆ

ಶಿಕ್ಷಣ ಮುಂದುವರೆಸಲು ಅನುವಾಗುವಂತೆ ಉಚಿತ ಹಾಸ್ಟೆಲ್ ಸೌಲಭ್ಯ, ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚ ಮರುಪಾವತಿಗೆ ಆದೇಶ ನೀಡಲಾಗಿದೆ.

- ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಬೃಹತ್ ದೇವಾಲಯಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರವು **"ಬೃಹತ್ ದೇವಾಲಯಗಳ ಪೂರ್ಣಾಭಿವೃದ್ಧಿ ಯೋಜನೆ"**ಯಡಿ ಈವರೆವಿಗೆ 17 ದೇವಾಲಯಗಳಲ್ಲಿ 201 ಕೋಟಿ ರೂ.ಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ.

- ಈ ವರ್ಷದಿಂದ ಪಿಂಚಣಿ ಮಂಜೂರಾತಿಗೆ ನಿಗದಿತ ಅವಧಿಯನ್ನು 70 ದಿನಗಳಿಂದ 45 ದಿನಗಳಿಗೆ ಇಳಿಸಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

357. ಈಗಾಗಲೇ 15 ಜಿಲ್ಲಾಧಿಕಾರಿಗಳ ಕಚೇರಿ, 15 ಉಪವಿಭಾಗಾಧಿಕಾರಿಗಳ ಕಚೇರಿ ಹಾಗೂ 15 ತಾಲ್ಲೂಕು ಕಛೇರಿಗಳಲ್ಲಿ ಕಡಿಮೆ ಕಾಗದ ಬಳಕೆಯ ಕಛೇರಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ಮುಂದಿನ 2 ವರ್ಷಗಳಲ್ಲಿ ಕಂದಾಯ ಇಲಾಖೆಯ ಎಲ್ಲಾ ಕಚೇರಿಗಳಿಗೆ ವಿಸ್ತರಿಸಲಾಗುವುದು. ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

358. ಡಿಜಿಟಲ್ ಭೂ ದಾಖಲೆಗಳ ನಿರ್ವಹಣಾ ಯೋಜನೆಯಡಿ (ಡಿ.ಎಲ್.ಆರ್.ಎಂ.ಪಿ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು:

- ಎಲ್ಲಾ ತಾಲ್ಲೂಕುಗಳ ಹಳೆ ಕಂದಾಯ ದಾಖಲೆಗಳ ಕೊಠಡಿಯನ್ನು ಆಧುನೀಕರಣಗೊಳಿಸಲಾಗುವುದು.
- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿರುವ ಟಿಪ್ಪಣಿ (parcel maps) ಗಳನ್ನು ಎನ್ಐಸಿ ಅಭಿವೃದ್ಧಿ ಪಡಿಸಿದ "ಭೂನಕ್ಷೆ ಅಥವಾ ಕೊಲ್ಯಾಬ್ ಲ್ಯಾಂಡ್" ಸಾಫ್ಟ್‌ವೇರ್ ಬಳಸಿ ಡಿಜಿಟಲೀಕರಣ ಮಾಡಲಾಗುವುದು.
- ಪ್ರಮುಖ ದಾಖಲೆಯಾದ "ಆಕಾರ್ ಬಂದ್"ನ್ನು ಡಿಜಿಟಲೀಕರಣ ಮಾಡಲಾಗುವುದು. ಇದೇ ಉದ್ದೇಶಕ್ಕಾಗಿ ವಿಶೇಷ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುವುದು. ಈ ಯೋಜನೆಯನ್ನು 2017–18 ರಲ್ಲಿ ಪೂರ್ಣಗೊಳಿಸಲಾಗುವುದು.

359. ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರಗಳಿಗೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತಲಾ 5 ಕೋಟಿ ರೂ. ಗಳನ್ನು ಒದಗಿಸಲಾಗುವುದು.

360. ಶಬರಿಮಲೆಗೆ ಭೇಟಿ ನೀಡುವ ಕರ್ನಾಟಕದ 50 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳ ಅನುಕೂಲಕ್ಕಾಗಿ ವೈದ್ಯಕೀಯ ಸೌಲಭ್ಯಗಳು, ಸಹಾಯವಾಣಿ, ರಕ್ಷಣೆ ಮತ್ತು ನೆರವು ನೀಡಲು ಒಂದು ಉಪ ಕಚೇರಿಯನ್ನು ತೆರೆಯಲಾಗುವುದು.

361. ಶ್ರವಣಬೆಳಗೊಳದಲ್ಲಿ 12 ವರ್ಷಕ್ಕೊಮ್ಮೆ ನಡೆಯುವ ಭಗವಾನ್ ಬಾಹುಬಲಿ ಮಹಾಮಸ್ತಕಾಭಿಷೇಕ ಉತ್ಸವ ಆಚರಣೆಯನ್ನು ವಿಜೃಂಭಣೆಯಿಂದ ನಡೆಸಲು 175 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

362. ಶ್ರೀ ಮೈಲಾರಲಿಂಗೇಶ್ವರ, ಹಾಗೂ ಶ್ರೀ ದೇವರಗುಡ್ಡ, ಅಭಿವೃದ್ಧಿ ಪ್ರಾಧಿಕಾರವನ್ನು 5 ಕೋಟಿ ರೂ.ಗಳ ಅನುದಾನದಲ್ಲಿ ಮೈಲಾರದಲ್ಲಿ ರಚಿಸಲಾಗುವುದು.

363. 10 ಕೋಟಿ ರೂ.ಗಳ ವೆಚ್ಚದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾವಾರು ಕಾರ್ಯಪಡೆಯನ್ನು ರಚಿಸಿ ರಾಜ್ಯದ ಎಲ್ಲಾ ಕೆರೆಗಳನ್ನು ಅಳತೆ ಮಾಡಲು ಕ್ರಮಕೈಗೊಳ್ಳಲಾಗುವುದು.

364. ಹೊಸ ತಾಲ್ಲೂಕುಗಳನ್ನು ರಚಿಸಲು ಇರುವ ಬಹುದಿನಗಳ ಬೇಡಿಕೆಯನ್ನು ಈಡೇರಿಸಲು ಹಾಗೂ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳನ್ನು ಪರಿಗಣಿಸಿ, ಪ್ರಸಕ್ತ ಸಾಲಿನಲ್ಲಿ ಅನುಬಂಧ–'ಅ'ರಲ್ಲಿರುವ 49 ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು.

365. 2018 ಮಾರ್ಚ್ ಅಂತ್ಯಕ್ಕೆ ಸುಮಾರು 1100 ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು.

366. ಪ್ರಸ್ತುತ 60 ರಿಂದ 64ರ ವಯೋಮಾನದವರಿಗೆ ನೀಡಲಾಗುತ್ತಿರುವ ವೃದ್ಧಾಪ್ಯ ವೇತನವನ್ನು 200 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು.

367. 2017–18ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ ಒಟ್ಟಾರೆಯಾಗಿ 5,900 ಕೋಟಿ ರೂ. ಒದಗಿಸಲಾಗಿದೆ.

## ಇಂಧನ

368. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ, ಎಲ್ಲಾ ಮೂಲಗಳಿಂದ ಒಟ್ಟು 5848 ಮೆಗಾವ್ಯಾಟ್ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ
- ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬನೆ ಹೊಂದಲು ವಿಶೇಷವಾಗಿ ನವೀಕೃತ ಇಂಧನ ಮೂಲಗಳು ಮತ್ತು ಸೌರ ವಿದ್ಯುತ್ ಉತ್ಪಾದನೆಗೆ ಸರ್ಕಾರವು ಹೆಚ್ಚು ಒತ್ತು ನೀಡುತ್ತಿದ್ದು, 2014–21ರ ಸೌರ ನೀತಿಯನ್ನು

ಜಾರಿಗೊಳಿಸಲಾಗಿದೆ. ಇದರನ್ವಯ ಇಡೀ ವಿಶ್ವದಲ್ಲಿಯೇ ದೊಡ್ಡದೆನಿಸಿರುವ 2000 ಮೆ.ವ್ಯಾ.ಗಳ "ಸೌರ ವಿದ್ಯುತ್ ಪಾರ್ಕ್"ನ್ನು ಪಾವಗಡದಲ್ಲಿ ನಿರ್ಮಿಸಲಾಗುತ್ತಿದೆ.

- ಪ್ರಸರಣ ಜಾಲದ ಬಲವರ್ಧನೆಗಾಗಿ ಒಟ್ಟು 107 ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪನೆಗೊಳಿಸಲಾಗಿದೆ ಹಾಗೂ 2485 ಸರ್ಕ್ಯೂಟ್ ಕಿ.ಮೀ ಪ್ರಸರಣ ಮಾರ್ಗಗಳನ್ನು ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಲಾಗಿದೆ.

- ಗಂಗಾ ಕಲ್ಯಾಣ ಯೋಜನೆಯಡಿ 58,145 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

- 37,251 ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

- ಸಕ್ರಮಗೊಂಡಿರುವ 1.55 ಲಕ್ಷ ಪಂಪ್‌ಸೆಟ್‌ಗಳಿಗೆ ಮೂಲಸೌಕರ್ಯ ಕಲ್ಪಿಸಲಾಗಿದೆ.

- ರಾಜ್ಯದ ವಿದ್ಯುತ್ ಜಾಲದ ಪ್ರಸರಣ ಮತ್ತು ವಿತರಣಾ ನಷ್ಟವು ಕಳೆದ ನಾಲ್ಕು ವರ್ಷಗಳಲ್ಲಿ ಕ್ರಮವಾಗಿ ಶೇ. 3.81 ರಿಂದ 3.22ವರೆಗೆ ಮತ್ತು ಶೇ.16.10ರಿಂದ 14.09ವರೆಗೆ ಇಳಿಕೆಯಾಗಿದೆ.

- ರಾಜ್ಯದಲ್ಲಿ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ 3 ಫೇಸ್ ವಿದ್ಯುತ್ತನ್ನು ಬ್ಯಾಚ್‌ಗಳಲ್ಲಿ ಪೂರೈಸಲಾಗುತ್ತಿದೆ.

## 2017–18 ನೇ ಸಾಲಿನ ಹೊಸ ಯೋಜನೆಗಳು

369. ಯರಮರಸ್ ಯೋಜನೆಯಿಂದ 1600 ಮೆ.ವ್ಯಾ., ಪಾವಗಡದ ಸೌರಶಕ್ತಿ ಇಂಧನ ಪಾರ್ಕ್‌ನಿಂದ 1000 ಮೆ.ವ್ಯಾ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳಿಂದ 1375 ಮೆ.ವ್ಯಾ. ಸೇರಿದಂತೆ, 2017–18ನೇ ಸಾಲಿನಲ್ಲಿ ಒಟ್ಟಾರೆ 3975 ಮೆ.ವ್ಯಾ. ಸಾಮರ್ಥ್ಯವನ್ನು ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ.

370. ಬಹುಕಾಲದಿಂದ ಬಾಕಿ ಇರುವ ಗ್ರಾಮ ಪಂಚಾಯತಿಗಳ ವಿದ್ಯುಚ್ಛಕ್ತಿ ಬಾಕಿ ಬಿಲ್‌ಗಳು ಎಸ್ಕಾಂಗಳು ಹಾಗೂ ಕರ್ನಾಟಕ ವಿದ್ಯುತ್ ನಿಗಮಕ್ಕೆ ಬಹಳಷ್ಟು ಆರ್ಥಿಕ ಒತ್ತಡವನ್ನು ಉಂಟು ಮಾಡಿವೆ. 31.3.2015ವರೆಗಿನ ಬಾಕಿ ಇರುವ ಮೊತ್ತ 3766 ಕೋಟಿ ರೂ.ಗಳ ಬಾಕಿಯನ್ನು ಪಾವತಿಸಲು ತೀರ್ಮಾನಿಸಿದ್ದೇವೆ. ಇದರಿಂದಾಗಿ ಉನ್ನತೀಕರಣ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ತೊಡಗಿಸಲು ಈ ಕಂಪೆನಿಗಳಿಗೆ ಆರ್ಥಿಕ ಅವಕಾಶ ಕಲ್ಪಿಸಿದಂತಾಗುತ್ತದೆ.

371. ಭಾಗ್ಯ ಜ್ಯೋತಿ ಯೋಜನೆಯಡಿ ಉಚಿತವಾಗಿ ನೀಡುತ್ತಿರುವ ವಿದ್ಯುತ್ ಮಿತಿಯನ್ನು 18 ಯೂನಿಟ್‌ಗಳಿಂದ 40 ಯೂನಿಟ್‌ಗಳಿಗೆ ಹೆಚ್ಚಿಸಲಾಗುವುದು.

372. ವಿದ್ಯುಚ್ಛಕ್ತಿಯ ಸಮರ್ಥ ಬಳಕೆಗೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರತಿಯೊಂದು ವಿಧಾನಸಭಾ ಸದಸ್ಯರ ಮತ ಕ್ಷೇತ್ರವ್ಯಾಪ್ತಿಯ 5 ಗ್ರಾಮಗಳನ್ನು ಮಾದರಿ ವಿದ್ಯುತ್ ಗ್ರಾಮಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ.

373. ಪ್ರಸರಣ ಜಾಲವನ್ನು ಬಲಪಡಿಸುವ ನಿಟ್ಟಿನಲ್ಲಿ 40 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

374. 2017–18ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆಯಾಗಿ 14,094 ಕೋಟಿ ರೂ. ಒದಗಿಸಲಾಗಿದೆ.

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

375. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- 9,644 ಕಿಮೀಗಳ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು 9,616 ಕೋಟಿ ರೂ. ವೆಚ್ಚದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಲೋಕೋಪಯೋಗಿ ಇಲಾಖೆ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆಶಿಪ್

ಮತ್ತು ಕೆಆರ್‌ಡಿಸಿಎಲ್ ಮೂಲಕ ಪೂರ್ಣಗೊಳಿಸಲಾಗಿದೆ.

- 1,854 ಕಿ.ಮೀ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗಿದೆ ಹಾಗೂ 6,262 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿದೆ.

- 20,733 ಕಿಮೀ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು 8,190 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

- 136 ಸೇತುವೆಗಳನ್ನು ಜಿಲ್ಲಾ ಮುಖ್ಯ ರಸ್ತೆಯಲ್ಲಿ ಮತ್ತು 163 ಸೇತುವೆಗಳನ್ನು ರಾಜ್ಯ ಹೆದ್ದಾರಿಗಳಲ್ಲಿ 372 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ / ಪುನರ್ ನಿರ್ಮಾಣ ಮಾಡಲಾಗಿದೆ.

- ಪರಿಶಿಷ್ಟ ಜಾತಿ ಉಪ ಯೋಜನೆ / ಗಿರಿಜನ ಉಪ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ 2900 ಕೋಟಿ ರೂ. ವೆಚ್ಚದಲ್ಲಿ ಕ್ರಮವಾಗಿ 2663 ಕಿ.ಮೀ. ಮತ್ತು 1190 ಕಿ.ಮೀ.ಗಳ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ.

- ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿ 1210 ಕೋಟಿ ರೂ. ವೆಚ್ಚದಲ್ಲಿ 2420 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು 307 ಸೇತುವೆಗಳನ್ನು ಪೂರ್ಣಗೊಳಿಲಾಗಿದೆ.

- 2016–17ರಲ್ಲಿ ಕೆಆರ್‌ಡಿಸಿಎಲ್ ವತಿಯಿಂದ 1396 ಕೋಟಿ ರೂಗಳ ಮೊತ್ತದಲ್ಲಿ 195 ಸೇತುವೆಗಳ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ.

- ಕರಾವಳಿ ತೀರ ಸಂರಕ್ಷಣೆ ಯೋಜನೆಯನ್ನು ಎಡಿಬಿ ನೆರವಿನೊಂದಿಗೆ 911 ಕೋಟಿ ರೂ.ಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

- ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ 49 ಕಿ.ಮೀ. ಉದ್ದದ ದೇವನಹಳ್ಳಿ–ವಿಜಯಪುರ–ಕೋಲಾರ ರಸ್ತೆಯನ್ನು 148 ಕೋಟಿ ರೂ.ಗಳ ವೆಚ್ಚದಲ್ಲಿ ಕೆ.ಆರ್.ಡಿ.ಸಿ.ಎಲ್. ಮೂಲಕ ಅಭಿವೃದ್ಧಿಪಡಿಸಲಾಗುತ್ತಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

376. ರಾಜ್ಯದ ಪ್ರಮುಖ ರಸ್ತೆ ಜಾಲವನ್ನು (ಕೋರ್ ರೋಡ್ ನೆಟ್‌ವರ್ಕ್) ಅಭಿವೃದ್ಧಿಪಡಿಸಲು ಕೆಶಿಪ್–III (ಎಡಿಬಿ 2ನೇ ಲೋನ್) ಅಡಿಯಲ್ಲಿ ಈ ಕೆಳಕಂಡ ಒಟ್ಟು 418.5 ಕಿ.ಮೀ

ಉದ್ದದ ರಸ್ತೆಗಳನ್ನು 5,310 ಕೋಟಿ ರೂ. ಯೋಜನಾ ಮೊತ್ತದಲ್ಲಿ ಕೈಗೊಳ್ಳಲಾಗುತ್ತಿದೆ.

- ಕೊಳ್ಳೇಗಾಲ–ಹನೂರು ರಸ್ತೆ– 23.8 ಕಿಮೀ
- ಚಿಂತಾಮಣಿ–ಆಂಧ್ರ ಪ್ರದೇಶ ಗಡಿ ರಸ್ತೆ– 39.8 ಕಿಮೀ
- ಬೆಂಗಳೂರು–ಮಾಗಡಿ ರಾಷ್ಟ್ರೀಯ ಹೆದ್ದಾರಿ–75, (ನೆಲಮಂಗಲ–ಮಂಗಳೂರು)– 50.7 ಕಿ.ಮೀ.
- ಮಾಗಡಿ–ಸೋಮವಾರಪೇಟೆ ರಸ್ತೆ ಮಾರ್ಗ ಹುಲಿಯೂರುದುರ್ಗ–ನಾಗಮಂಗಲ–ಕೆಆರ್‌ಪೇಟೆ–166 ಕಿ.ಮೀ.
- ಗದಗ–ಹೊನ್ನಾಳಿ ರಸ್ತೆ– 138.2 ಕಿ.ಮೀ.

377. ಬೆಂಗಳೂರು ನಗರದ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು 1455 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೆಆರ್‌ಡಿಸಿಎಲ್ ಮೂಲಕ ಬೆಂಗಳೂರು ಸುತ್ತಮುತ್ತಲಿನ ಕೆಳಕಂಡ 150 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

- ಹೊಸಕೋಟೆ – ಬೂದಿಗೆರೆ – ಮೈಲೇನಹಳ್ಳಿ – ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ
- ನೆಲಮಂಗಲ–ಮಧುರೆ–ಬ್ಯಾಥಾ ರಸ್ತೆ

- ಆನೇಕಲ್ – ಅತ್ತಿಬೆಲೆ – ಸರ್ಜಾಪುರ – ವರ್ತೂರು – ವೈಟ್‌ಫೀಲ್ಡ್ – ಹೊಸಕೋಟೆ ರಸ್ತೆ.
- ಹಾರೋಹಳ್ಳಿ – ಉರುಗನದೊಡ್ಡಿ – ಕೆಐಎಡಿಬಿ ಕೈಗಾರಿಕಾ ಪ್ರದೇಶ – ಜಿಗಣಿ – ಆನೇಕಲ್ ರಸ್ತೆ

378. ಮೈಸೂರು ನಗರದ ಸುತ್ತಲಿನ 22 ಕಿಮೀ ಉದ್ದದ ರಸ್ತೆಗಳನ್ನು 117 ಕೋಟಿ ರೂ. ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

379. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಮಂಗಳೂರು–ಆತ್ರಾಡಿ ರಾಜ್ಯ ಹೆದ್ದಾರಿ 67ರ 2.50 ಕಿ.ಮೀ ಉದ್ದದ ರಸ್ತೆಯನ್ನು 50 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.

380. ಕಾರವಾರ ಬಂದರಿನಲ್ಲಿ ಆಮದು / ರಫ್ತು ಚಟುವಟಿಕೆಗಳನ್ನು ಉತ್ತೇಜಿಸಲು ಹೆಚ್ಚುವರಿಯಾಗಿ 14 ಮೀ. ಆಳದ 5 ಹಡಗುಗಳ ನಿಲುಗಡೆಗೆ 1508 ಮೀ. ಉದ್ದದ ದಕ್ಕೆಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗುವುದು.

381. ಕೊಡಗು ಜಿಲ್ಲೆಗೆ 50 ಕೋಟಿ ರೂ.ಗಳ ವಿಶೇಷ ರಸ್ತೆ ಪ್ಯಾಕೇಜ್ ನೀಡಲಾಗುವುದು.

382. 2017–18ನೇ ಸಾಲಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಒಟ್ಟಾರೆಯಾಗಿ 8,559 ಕೋಟಿ ರೂ. ಒದಗಿಸಲಾಗಿದೆ.

## ಮೂಲಸೌಲಭ್ಯ ಅಭಿವೃದ್ಧಿ

383. **ಕಳೆದ 4 ವರ್ಷಗಳ ಸಾಧನೆಗಳು**

- 2013–14 ರಿಂದ 2016–17 ರವರೆಗೆ ಅನುಷ್ಠಾನದ ಹಂತದಲ್ಲಿರುವ ರೈಲ್ವೆ ಮೇಲ್ಸೇತುವೆ/ ಕೆಳಸೇತುವೆಗಳ ಕಾಮಗಾರಿಗಳಿಗೆ 1,637 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದೆ.

- ಯಾದಗಿರಿಯ ರೈಲ್ವೆ ಬೋಗಿ ಕಾರ್ಖಾನೆ ನಿರ್ಮಾಣ ಬಹುತೇಕ ಪೂರ್ಣಗೊಂಡಿದ್ದು, ಇದನ್ನು 2017ರ ಏಪ್ರಿಲ್‌ಗೆ ಮುಗಿಸುವ ನಿರೀಕ್ಷೆಯಿದೆ. ಭೂಸ್ವಾಧೀನಕ್ಕಾಗಿ ಸರ್ಕಾರ 15 ಕೋಟಿ ರೂ. ಬಿಡುಗಡೆ ಮಾಡಿದೆ.

- ಹಾಸನ–ಬೆಂಗಳೂರು ರೈಲ್ವೆ ಮಾರ್ಗದ ನಿರ್ಮಾಣ ಕಾರ್ಯವು ಈಗಾಗಲೇ ಪೂರ್ಣಗೊಂಡಿದ್ದು, ಬೀದರ್–ಕಲಬುರ್ಗಿ ಮತ್ತು ರಾಮನಗರ–ಮೈಸೂರು ಜೋಡಿ ಮಾರ್ಗಗಳ ಕಾಮಗಾರಿಗಳನ್ನು 2017ರ ಏಪ್ರಿಲ್‌ಗೆ ಪೂರ್ಣಗೊಳಿಸಲಾಗುವುದು.

- ಗಿಣಿಗೇರದಿಂದ ಚಿಕ್ಕಬೆನಕಲ್ ವರೆಗಿನ 27 ಕಿ.ಮಿ. ಮುನಿರಾಬಾದ್–ಮೆಹಬೂಬ್ ನಗರ ರೈಲ್ವೆ ಮಾರ್ಗವು ಪ್ರಸಕ್ತ ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ.

- ಕುಡಚಿ–ಬಾಗಲಕೋಟೆ ಹೊಸ ರೈಲ್ವೆ ಮಾರ್ಗದಲ್ಲಿ ಬಾಗಲಕೋಟೆಯಿಂದ ಖಜ್ಜಿದೋಣಿವರೆಗಿನ 30 ಕಿ.ಮೀ. ರೈಲ್ವೆ ಮಾರ್ಗವು ಪ್ರಸಕ್ತ ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ.

- ಗದಗ–ವಾಡಿ ಹೊಸ ರೈಲ್ವೆ ಮಾರ್ಗದ 156 ಕಿ.ಮಿ. ಉದ್ದದ ಮಾರ್ಗಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸರ್ಕಾರ ಈ ಯೋಜನೆಗೆ ಉಚಿತವಾಗಿ ಭೂಮಿಯನ್ನು ನೀಡುತ್ತಿದ್ದು, 1922 ಕೋಟಿ ರೂ.ಗಳ ಯೋಜನಾ ವೆಚ್ಚದ ಶೇ 50 ರಷ್ಟು ಪಾಲನ್ನು ಭರಿಸುತ್ತದೆ.

- ಹುಬ್ಬಳ್ಳಿ ವಿಮಾನ ನಿಲ್ದಾಣದ ಮೇಲ್ದರ್ಜೆ ಕಾಮಗಾರಿಗಳಿಗಾಗಿ 588 ಎಕರೆ ಭೂಮಿಯನ್ನು ಹಾಗೂ ಬೆಳಗಾವಿ ವಿಮಾನ ನಿಲ್ದಾಣ ಮೇಲ್ದರ್ಜೆ ಕಾಮಗಾರಿಗಳಿಗಾಗಿ 370 ಎಕರೆ ಭೂಮಿಯನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗಿದೆ.

- ಬೆಂಗಳೂರು ನಗರದಲ್ಲಿ ಅಡುಗೆ ಅನಿಲ ವಿತರಣೆ ಯೋಜನೆಯು ಮುಕ್ತಾಯದ ಹಂತದಲ್ಲಿದೆ. ಕೈಗಾರಿಕೆ,

ನಗರ ಸಾರಿಗೆ, ಗೃಹ ಬಳಕೆದಾರರು ಪೈಪ್‌ಲೈನ್ ಮೂಲಕ ಅನಿಲ ಪೂರೈಕೆಯ ಅನುಕೂಲ ಪಡೆಯಲಿದ್ದಾರೆ.

## 2017–18ನೇ ಸಾಲಿನ ಹೊಸ ಯೋಜನೆಗಳು

384. ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರಯಾಣಿಕರ ಸಂಚಾರದಟ್ಟಣೆ ಅನುಸಾರ ದೇಶದಲ್ಲೇ 3ನೇ ಅತಿ ದೊಡ್ಡ ವಿಮಾನ ನಿಲ್ದಾಣವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಂಚಾರದಟ್ಟಣೆಯನ್ನು ತಗ್ಗಿಸುವ ಸಲುವಾಗಿ ವಿಮಾನ ನಿಲ್ದಾಣದ 2ನೇ ರನ್‌ವೇ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದೆ. 2ನೇ ಟರ್ಮಿನಲ್ ನಿರ್ಮಾಣ ಮಾಡಲಾಗುವುದು.

385. ಕಾರವಾರ, ಮಡಿಕೇರಿ ಮತ್ತು ಚಿಕ್ಕಮಗಳೂರು ವಿಮಾನ ಇಳಿದಾಣಗಳನ್ನು (Air Strip) ನಿರ್ಮಿಸಲಾಗುವುದು.

386. ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಿಸ್ತರಣೆಗಾಗಿ, 286 ಎಕರೆ ಭೂಸ್ವಾಧೀನಕ್ಕಾಗಿ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವಿಸ್ತರಣಾ ಕಾರ್ಯಕ್ಕೆ ರಾಜ್ಯ ಸರ್ಕಾರವು ಅಗತ್ಯ ಸೌಲಭ್ಯ ಕಲ್ಪಿಸಲಿದೆ.

387. ತದಡಿ ಸಮುದ್ರ ಬಂದರು ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುವುದು.

388. 2017–18ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 790 ಕೋಟಿ ರೂ. ಒದಗಿಸಲಾಗಿದೆ.

## ವಾಣಿಜ್ಯ ಮತ್ತು ಕೈಗಾರಿಕೆ

389. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ 2014–19 ರ ಘೋಷಣೆ ಮಾಡಲಾಗಿದ್ದು, ಸುಮಾರು 5 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಿಸುವ ಮೂಲಕ ವಾರ್ಷಿಕ ಶೇ. 12 ರ ಕೈಗಾರಿಕಾ ಬೆಳವಣಿಗೆ ಸಾಧಿಸುವ ಹಾಗೂ 15 ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಗುರಿ ಹೊಂದಲಾಗಿದೆ.

- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಅನುಮೋದಿಸಿದ 17,293 ಕೋಟಿ ರೂ. ಹೂಡಿಕೆಯ 124 ಯೋಜನೆಗಳು ಈಗಾಗಲೇ ಜಾರಿಗೊಂಡಿದ್ದು, 1.6 ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಲಾಗಿದೆ ಹಾಗೂ 2.8 ಲಕ್ಷ ಕೋಟಿ ರೂ. ಹೂಡಿಕೆಯ 1,492 ಯೋಜನೆಗಳು ಪ್ರಗತಿಯಲ್ಲಿವೆ.

- "ಇನ್ವೆಸ್ಟ್ ಕರ್ನಾಟಕ–2016" ಜಾಗತಿಕ ಹೂಡಿಕೆದಾರರ ಸಮಾವೇಶವು 2016ರ ಫೆಬ್ರುವರಿಯಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು. ಈ ಅವಧಿಯಲ್ಲಿ 1.27 ಲಕ್ಷ ಕೋಟಿ ರೂ. ಹೂಡಿಕೆಯ ಉದ್ದೇಶಕ್ಕಾಗಿ 112 ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ಅದರಲ್ಲಿ 164 ಕೋಟಿ ರೂ. ಹೂಡಿಕೆಯ 4

ಯೋಜನೆಗಳು ಈಗಾಗಲೇ ಜಾರಿಗೊಂಡಿದ್ದು, 32,480 ಕೋಟಿ ರೂ. ಹೂಡಿಕೆಯ 41 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

- ಭಾರತ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆಯ ಪ್ರಕಾರ 2016ರ ಜನವರಿಯಿಂದ ಡಿಸೆಂಬರ್ ಅವಧಿಯಲ್ಲಿ 1,54,173 ಕೋಟಿ ರೂ. ಬಂಡವಾಳ ಆಕರ್ಷಿಸುವ ಮೂಲಕ ಹೂಡಿಕೆಯ ಉದ್ದೇಶ ಹೊಂದಿರುವುದರಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ.

- ಕರ್ನಾಟಕದಲ್ಲಿ ಬಂಡವಾಳ ಹೂಡಲು ಹೂಡಿಕೆದಾರರನ್ನು ಉತ್ತೇಜಿಸುವ ಸಲುವಾಗಿ ಬೆಂಗಳೂರಿನಲ್ಲಿ ಪ್ರವಾಸಿ ಭಾರತೀಯ ದಿವಸ್– 2017 ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿದ್ದು, 2,000 ಸಾಗರೋತ್ತರ ಪ್ರತಿನಿಧಿಗಳೂ ಸೇರಿದಂತೆ 7,200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

- 2017ರ ಫೆಬ್ರವರಿಯಲ್ಲಿ "ಮೇಕ್ ಇನ್ ಇಂಡಿಯಾ" ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಾಯಿತು.

- 2013–14 ರಿಂದ ಇಲ್ಲಿಯವರೆಗೆ 22,175 ಕೋಟಿ ರೂ.ಗಳ ಹೂಡಿಕೆಯೊಂದಿಗೆ 1.16 ಲಕ್ಷ ಸಣ್ಣ ಮತ್ತು ಅತಿ ಸಣ್ಣ

ಕೈಗಾರಿಕಾ ಘಟಕಗಳನ್ನು ನೋಂದಾಯಿಸಲಾಗಿದೆ ಹಾಗೂ 10.3 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

- ಕಳೆದ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ 2807 ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲಾಗಿದೆ. 230 ಉದ್ಯಮಿಗಳಿಗೆ ಮೂಲ ಬಂಡವಾಳ, 627 ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಶೇ.60 ರಷ್ಟು ಬಂಡವಾಳ ಹೂಡಿಕೆ ಸಹಾಯಧನವನ್ನು ನೀಡಲಾಗಿದೆ. 15,350 ಯುವಕರಿಗೆ ವಿವಿಧ ಯೋಜನೆಯಡಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿದೆ.

- ನೂತನ ಜವಳಿ ನೀತಿ 2013-18ರ ನೀತಿಯಡಿ 1,918 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದ್ದು, 96,568 ಜನರಿಗೆ ಉದ್ಯೋಗಾವಕಾಶ ಲಭಿಸಿದೆ.

- ಪಾರದರ್ಶಕತೆಯಿಂದ ನ್ಯಾಯೋಚಿತವಾಗಿ ಗಣಿ ಗುತ್ತಿಗೆಗಳ ಮಂಜೂರಾತಿ ನೀಡಲು ಇ-ಹರಾಜು ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. 7 ಕಬ್ಬಿಣದ ಅದಿರಿನ ಬ್ಲಾಕ್‌ಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

- ನದಿ ಪಾತ್ರದ ಪರಿಸರವನ್ನು ಸಂರಕ್ಷಿಸಲು ರಾಜ್ಯ ಸರ್ಕಾರವು ಎಂ-ಸ್ಯಾಂಡ್ ಉತ್ಪಾದನೆ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ.

2013–14ನೇ ಸಾಲಿನಲ್ಲಿ 1.5 ದಶಲಕ್ಷ ಟನ್ ಉತ್ಪಾದನೆ ಇದ್ದ ಎಂ–ಸ್ಯಾಂಡ್ ಪ್ರಮಾಣವು 2016–17ನೇ ಸಾಲಿನಲ್ಲಿ 20 ದಶಲಕ್ಷ ಟನ್‌ಗೆ ಏರಿಕೆಯಾಗಿರುತ್ತದೆ. ಪ್ರಸ್ತುತ, 164 ಎಂ–ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

- ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ–2016) ನಿಯಮಾವಳಿ–1994ರಲ್ಲಿ ಜೀವನ ನಡೆಸಲು ಕಲ್ಲುಗಣಿಗಾರಿಕೆಯನ್ನೇ ಅವಲಂಬಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಾಂಗಗಳಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಮತ್ತು ಅಂಗವಿಕಲರಿಗೆ ಗುತ್ತಿಗೆ ಮಂಜೂರಾತಿಗೆ ಮೀಸಲಾತಿ ನಿಗದಿಪಡಿಸಲಾಗಿದೆ.

- ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರು / ಹಂಚಿಕೆ ಮಾಡಲಾದ ಫ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ. 50ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

390. ಚೆನ್ನೈ–ಬೆಂಗಳೂರು–ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ ಯೋಜನೆಯಡಿಯಲ್ಲಿ ತುಮಕೂರು ಕೈಗಾರಿಕಾ ಘಟಕಕ್ಕಾಗಿ ಕೆಐಎಡಿಬಿಯಿಂದ ಭೂಸ್ವಾಧೀನಕ್ಕಾಗಿ ಒಂದು ಬಾರಿ

ಅನುದಾನವಾಗಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

391. ಇಂಡಿಯನ್ ಮಷಿನ್ ಟೂಲ್ ತಯಾರಕರ ಸಂಸ್ಥೆಯೊಂದಿಗೆ ಸಮಾಲೋಚಿಸಿ ಭಾರತ ಸರ್ಕಾರದ ಭಾರಿ ಕೈಗಾರಿಕೆ ಮಂತ್ರಾಲಯದ ನೆರವಿನೊಂದಿಗೆ ತುಮಕೂರು ಜಿಲ್ಲೆಯ ವಸಂತ ನರಸಾಪುರದಲ್ಲಿ 542 ಎಕರೆ ಜಮೀನಿನಲ್ಲಿ "ಮಷಿನ್ ಟೂಲ್ ಕೈಗಾರಿಕಾ ಪಾರ್ಕ್"ನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿದೆ.

392. ರಾಜ್ಯದಲ್ಲಿನ ಇಂಜಿನಿಯರಿಂಗ್ ತಯಾರಿಕಾ ಕೈಗಾರಿಕೆಗಳಿಗೆ ಉತ್ತೇಜನ ನೀಡಲು, ಭಾರತ ಸರ್ಕಾರದೊಂದಿಗೆ ಶೇ.50ರಷ್ಟು ವೆಚ್ಚವನ್ನು ಹಂಚಿಕೊಳ್ಳುವುದರ ಮೂಲಕ ಕೇಂದ್ರ ತಯಾರಿಕಾ ತಂತ್ರಜ್ಞಾನ ಸಂಸ್ಥೆಯ (CMTI) ಸಹಯೋಗದೊಂದಿಗೆ ಅದರ ಆವರಣದಲ್ಲಿ ನಿಖರ ಮಾಪನ ಪ್ರಯೋಗಾಲಯವನ್ನು (Precision Metrology Lab) ಸ್ಥಾಪಿಸಲು ಪ್ರಸ್ತಾಪಿಸಿದೆ.

393. ರಾಜ್ಯದಲ್ಲಿನ ಔಷಧೀಯ ಮತ್ತು ವೈದ್ಯಕೀಯ ಉಪಕರಣಗಳ ತಯಾರಿಕಾ ಘಟಕಗಳಿಗೆ ಉತ್ತೇಜನ ನೀಡುವುದಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲು ವಲಯ ತಜ್ಞರ ನೇತೃತ್ವದಲ್ಲಿ ಔಷಧೀಯ ಹಾಗೂ ವೈದ್ಯಕೀಯ ಉಪಕರಣ ವಲಯಕ್ಕೆ ಸಂಬಂಧಿಸಿದಂತೆ ಒಂದು 'ವಿಷನ್ ಗ್ರೂಪ್' ನ್ನು ರಚಿಸಲು ಪ್ರಸ್ತಾಪಿಸಲಾಗುವುದು.

394. ಕರ್ನಾಟಕದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ತಯಾರಿಕಾ ಕಂಪನಿಗೆ ಉತ್ತೇಜನ ನೀಡುವ ಸಲುವಾಗಿ ಪ್ರಶಸ್ತಿಯೊಂದನ್ನು ಸ್ಥಾಪಿಸಲಾಗುವುದು.

395. ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ (ಎಂಎಸ್ಎಂಇ) ಮಾರುಕಟ್ಟೆ ನೆರವು ನೀಡುವುದಕ್ಕಾಗಿ ಎಂಎಸ್ಎಂಇಗಳು ಮತ್ತು ಬೃಹತ್ ತಯಾರಕರು / ಸಾರ್ವಜನಿಕ ವಲಯದ ಉದ್ಯಮಗಳನ್ನು ಒಂದೆಡೆ ತರಲು, ರಾಷ್ಟ್ರ ಮಟ್ಟದಲ್ಲಿ ವರ್ತಕರ ಅಭಿವೃದ್ಧಿ ಮೇಳವನ್ನು ಆಯೋಜಿಸಲಾಗುವುದು.

396. ಕರ್ನಾಟಕ ರಾಜ್ಯವು ಮುಂದಿನ 20 ವರ್ಷಗಳಲ್ಲಿ ಪ್ರವರ್ಧಮಾನಕ್ಕೆ ಬರಲಿರುವ ಹೈ–ಟೆಕ್ ಮತ್ತು ಮುಂಚೂಣಿ ಕೈಗಾರಿಕೆಗಳಾದ 3D ಪ್ರಿಂಟಿಂಗ್, ರೋಬೋಟಿಕ್ಸ್, ನ್ಯಾನೋ ತಂತ್ರಜ್ಞಾನ, IOT, ಬಿಗ್ ಡೇಟಾ ವಿಶ್ಲೇಷಣೆ, ಆರ್ಟಿಫೀಷಿಯಲ್ ಇಂಟಲಿಜನ್ಸ್ ಮತ್ತು ಮಷೀನ್ ಲರ್ನಿಂಗ್, ಸ್ಟೆಮ್‌ಸೆಲ್ ಸಂಶೋಧನೆ, ಬಿಸ್ಪೋಕ DNA ಮೆಡಿಸಿನ್ ಮತ್ತು ಇತರ ಕ್ಷೇತ್ರಗಳಿಗಾಗಿ ಕಾರ್ಯ ನೀತಿಯೊಂದನ್ನು ರೂಪಿಸಲು ಉದ್ದೇಶಿಸಿದೆ.

397. ಬೆಂಗಳೂರನ್ನು ಭಾರತದ ವಿದ್ಯುತ್ ಚಾಲಿತ ವಾಹನಗಳ ರಾಜಧಾನಿ (ಇಲೆಕ್ಟ್ರಿಕ್ ವಹಿಕಲ್ ಕ್ಯಾಪಿಟಲ್) ಯನ್ನಾಗಿ ಮಾಡಲು ಇಚ್ಛಿಸಿದೆ.

398. ಉದ್ಯೋಗ ಸೃಷ್ಟಿಯು ನಮ್ಮ ಕೈಗಾರಿಕಾ ನೀತಿಯ ಧ್ಯೇಯವಾಗಿದೆ. ಈ ವರ್ಷ ನಾವು, ರಫ್ತಿಗಾಗಿ ಬೊಂಬೆ ತಯಾರಿಕೆ, ಮೊಬೈಲ್ ಫೋನ್ ತಯಾರಿಕೆ, ಟ್ಯಾಬ್‌ಲೆಟ್‌ಗಳು, ವಿದ್ಯುನ್ಮಾನ ಉಪಕರಣಗಳು ಮತ್ತು ಜೋಡಣೆಗಳು ಮುಂತಾದ ಉದ್ಯೋಗ ಉತ್ತೇಜಕ ವಲಯಗಳಿಗೆ ಒತ್ತು ನೀಡಲು ಉದ್ದೇಶಿಸಿದ್ದೇವೆ.

399. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗುನಾರು ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹಕಗಳನ್ನು ಸಂದಾಯ ಮಾಡಲಾಗುವುದು.

400. ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಅಭಿವೃದ್ಧಿಗಾಗಿ 2017-18ನೇ ಸಾಲಿಗೆ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

401. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸಾರ್ವಜನಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ 4 ಕೋಟಿ ರೂ.ಗಳನ್ನು ಒದಗಿಸಲಾಗುವುದು.

402. ಭಾರತ ಸರ್ಕಾರದ ನೆರವಿನೊಂದಿಗೆ ಬೆಂಗಳೂರು ಮತ್ತು ಬೆಳಗಾವಿಯಲ್ಲಿ ತಲಾ 10 ಕೋಟಿ ರೂ. ವೆಚ್ಚದಲ್ಲಿ ಖಾದಿ ಪ್ಲಾಜಾ ಸ್ಥಾಪಿಸಲು ಉದ್ದೇಶಿಸಿದೆ.

403. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಉತ್ತೇಜನ ನೀಡಲು ಈ ಕೆಳಕಂಡ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳು ಸ್ಥಾಪಿಸುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ.

- ಮೊದಲ ಬಾರಿಗೆ ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಪಡೆಯುವ ಸಂದರ್ಭದಲ್ಲಿ ಹಣಕಾಸು ಸಂಸ್ಥೆಗಳು ವಿಧಿಸುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರ ಶುಲ್ಕಗಳನ್ನು ಭರಿಸಲಾಗುವುದು.

- 100 ಸಿ ಮತ್ತು 100 ಡಿ ಮಾದರಿಯ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಸ್ಥಾಪಿಸಲಾಗುವುದು.

- 2010–11 ರಿಂದ ದಿನಾಂಕ:31–03–2017 ರವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳು ಬೀಜಧನ

ಬಂಡವಾಳ ಯೋಜನೆಯಡಿಯಲ್ಲಿ ಪಡೆದಿರುವ 46 ಕೋಟಿ ರೂ. ಸಾಲ ಮನ್ನಾ ಮಾಡಲಾಗುವುದು.

404. ಪ್ರಸ್ತುತ ಜಾರಿಯಲ್ಲಿರುವ 99 ವರ್ಷಗಳ ಗುತ್ತಿಗೆ ಅವಧಿಗೆ ಬದಲಾಗಿ 10 ವರ್ಷಗಳ ಗುತ್ತಿಗೆ / ಮಾರಾಟ ಆಧಾರದಲ್ಲಿ ಸಣ್ಣ ಮತ್ತು ಅತೀ ಸಣ್ಣ ಉದ್ಯಮಿಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಎರಡು ಎಕರೆ ವರೆಗಿನ ಕೈಗಾರಿಕಾ ಭೂಮಿ / ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

405. ದಾಬಸಪೇಟೆಯಲ್ಲಿ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಸ್ಥಾಪಿಸಲು ಬೆಂಗಳೂರಿನ ಕಾಸಿಯಾ ಸಂಸ್ಥೆಗೆ 5 ಕೋಟಿ ರೂ. ವಿಶೇಷ ಅನುದಾನ ನೀಡಲಾಗುವುದು.

406. ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳಿಂದ ಹಿಂದುಳಿದ ವರ್ಗ ಪ್ರವರ್ಗ–1, ಪ್ರವರ್ಗ 2ಎ ಮತ್ತು ಪ್ರವರ್ಗ 2ಬಿರವರಿಗೆ ಮಂಜೂರು / ಹಂಚಿಕೆ ಮಾಡಲಾಗುವ ಫ್ಲಾಟ್ / ಶೆಡ್ಡುಗಳ ಒಟ್ಟು ಮೊತ್ತದಲ್ಲಿ ಶೇ.25ರಷ್ಟು ರಿಯಾಯಿತಿ ನೀಡಲಾಗುವುದು. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ರಿಯಾಯಿತಿಯನ್ನು 1 ಎಕರೆಗೆ ಮತ್ತು ಇತರೆ ಜಿಲ್ಲೆಗಳಲ್ಲಿ 2 ಎಕರೆಗೆ ಸೀಮಿತಗೊಳಿಸಲಾಗುವುದು.

407. ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಸ್ತುತದಲ್ಲಿ ಶೇ.4ರ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 50 ಲಕ್ಷ ರೂ.ಗಳಿಂದ 2 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

408. ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕವಾಗಿ ಒಂದು Business incubator ಸ್ಥಾಪಿಸಲಾಗುವುದು.

409. ನೇಕಾರರ ಪ್ಯಾಕೇಜ್‌ನಲ್ಲಿ 150 ಕೋಟಿ ರೂ.ಗಳನ್ನು ನೀಡಲಾಗುವುದು. ಜಾರಿಯಲ್ಲಿರುವ ಯೋಜನೆಗಳ ಜೊತೆಗೆ ಈ ಕೆಳಕಂಡ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

- ಕೈಮಗ್ಗಗಳಿಗೆ ಎಲೆಕ್ಟ್ರಾನಿಕ್ ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ ಸೌಲಭ್ಯ.
- ಉಣ್ಣೆ ವಲಯವನ್ನು ಪುನಶ್ಚೇತನ ಮತ್ತು ಬಲವರ್ಧನೆ.
- ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಆವರ್ತಕ ನಿಧಿಗಳು.
- Low Tension ವಿದ್ಯುತ್ ಪಡೆಯುತ್ತಿರುವ ರೆಪೀಯರ್ ಮಗ್ಗಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ.
- ಮೈಸೂರಿನಲ್ಲಿ ಸಿಲ್ಕ್ ಮೆಗಾ ಕ್ಲಸ್ಟರನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಸ್ಥಾಪನೆ.

- ಕೆಎಸ್‌ಟಿಐಡಿಸಿ ಮೂಲಕ ಹಾವೇರಿ, ಹೊಸದುರ್ಗ, ಬನಹಟ್ಟಿ ಮತ್ತು ಗೌರಿಬಿದನೂರುನಲ್ಲಿ ವಿದ್ಯುತ್ ಮಗ್ಗಗಳ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಹಾಗೂ ಬೆಳಗಾವಿ ಜಿಲ್ಲೆಯ ಪಂತಬಾಳೆಕುಂದ್ರಿಯಲ್ಲಿ ಗೋದಾಮು ಮತ್ತು ನಾಗರೀಕ ಸೌಲಭ್ಯ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

- ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯುನಿಟ್‌ಗೆ 2 ರೂ.ಗಳಂತೆ ವಿದ್ಯುತ್ ಸಹಾಯಧನ ಒದಗಿಸಲಾಗುವುದು.

- ಸಹಕಾರಿ ನೂಲಿನ ಗಿರಣಿಗಳು ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ರವರಿಂದ ಖರೀದಿಸುವ ಹತ್ತಿಯ ಮೇಲೆ ಶೇ.5 ರಷ್ಟು ಸಹಾಯಧನ ನೀಡಲಾಗುವುದು.

410. ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಒಂದು ಹೊಸ ನಿರ್ದೇಶನಾಲಯವನ್ನು ಸ್ಥಾಪಿಸಲಾಗುವುದು.

411. 2017-18ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 2,250 ಕೋಟಿ ರೂ. ಒದಗಿಸಲಾಗಿದೆ.

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

412. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- 2016–17 ನೇ ಸಾಲಿನಲ್ಲಿ "Define the Next" ಧ್ಯೇಯದೊಂದಿಗೆ ರಾಜ್ಯದ ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ ಮತ್ತು ವಿದ್ಯುನ್ಮಾನ ಸಮಾರಂಭ Bengaluru ITE.biz ಅನ್ನು ಆಯೋಜಿಸಲಾಗಿತ್ತು.
- ಭಾರತ ಸರ್ಕಾರ ಮತ್ತು ನಾಸ್ಕಾಂ (NASSCOM) ಸಹಯೋಗದೊಂದಿಗೆ ಇಂಟರ್‌ನೆಟ್ ಆಫ್ ಥಿಂಗ್ಸ್ (IoT)ನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲಾಗಿದೆ.
- AVGC (ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಅಂಡ್ ಕಾಮಿಕ್ಸ್) ವಲಯದಲ್ಲಿರುವ ಕಂಪನಿಗಳಿಗೆ ಸಾಹಸೋದ್ಯಮ ಬಂಡವಾಳ (Venture Capital) ವನ್ನು ಒದಗಿಸಲು 20 ಕೋಟಿ ರೂ.ಗಳ AVGC ಸಾಹಸೋದ್ಯಮ ನಿಧಿಯನ್ನು (venture fund) ಸ್ಥಾಪಿಸಲಾಗುತ್ತಿದೆ.
- K-GIS Portal Version-1 ನ್ನು ಪ್ರಾರಂಭಿಸಲಾಗಿದ್ದು, ಇದರಿಂದ geo tagging ಮತ್ತು mapping of assets,

beneficiary tracking, ಮಣ್ಣಿನ ಮಾದರಿ ಸಂಗ್ರಹ ಇತ್ಯಾದಿಗಳು ಸಾಧ್ಯವಾಗಿವೆ.

- ಬೆಂಗಳೂರಿನ ಜವಾಹರಲಾಲ್ ನೆಹರು ತಾರಾಲಯವನ್ನು ಆಧುನಿಕ ಆಪ್ಟೋ–ಮೆಕ್ಯಾನಿಕಲ್ ಮತ್ತು ಡಿಜಿಟಲ್ ಪ್ರೊಜೆಕ್ಷನ್ ವ್ಯವಸ್ಥೆಗಳೊಂದಿಗೆ 12 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗಿದೆ.

- ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ 22 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅತ್ಯಾಧುನಿಕ 3ಡಿ ಡಿಜಿಟಲ್ ತಾರಾಲಯದ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

413. ಸೂಕ್ತ ತಾಂತ್ರಿಕ ಸಂಪನ್ಮೂಲಗಳನ್ನು, ಕೌಶಲ್ಯ ಅಭಿವೃದ್ಧಿಯನ್ನು ಸೃಜಿಸಲು ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮರ್ಥ್ಯ ನಿರ್ಮಾಣಕ್ಕೆ ಒತ್ತು ನೀಡಲು ಕೈಗಾರಿಕೋದ್ಯಮದ ಸಹಯೋಗದೊಂದಿಗೆ 'Center of Excellence in Data Sciences and Artificial Intelligence' ಮತ್ತು 'Cyber Security' ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

414. ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಲು ಭಾರತ ಸರ್ಕಾರ, SCP/TSP, ಕೈಗಾರಿಕೆಗಳ ವಂತಿಗೆಯಿಂದ ನಿಧಿಗಳನ್ನು ಸಂಗ್ರಹಿಸುವ ಮೂಲಕ ಐಟಿ, ಎಲೆಕ್ಟ್ರಾನಿಕ್ಸ್, ಅನಿಮೇಷನ್ ಮತ್ತು ಇತರ ವಲಯಗಳಲ್ಲಿ 1,10,000 ವ್ಯಕ್ತಿಗಳಿಗೆ ತರಬೇತಿ ನೀಡಲು "ಯುವ ಯುಗ" ಎಂಬ ಹೊಸ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು.

415. 2/3ನೇ ಹಂತದ ನಗರಗಳಲ್ಲಿ ಚೈತನ್ಯಪೂರ್ಣ ತಂತ್ರಜ್ಞಾನ (Vibrant Technology) ಮತ್ತು ಹೊಸ ಪರಿಕಲ್ಪನೆಯ ನವೀನ ಪರಿಸರ ವ್ಯವಸ್ಥೆಯನ್ನು ಸೃಜಿಸುವ ಸಲುವಾಗಿ ಕೈಗಾರಿಕೋದ್ಯಮದ ಸಹಯೋಗದೊಂದಿಗೆ ಹುಬ್ಬಳ್ಳಿಯಲ್ಲಿ VLSI Incubator ಮತ್ತು Brown Field ESDM Cluster ಸ್ಥಾಪಿಸಲು ಉದ್ದೇಶಿಸಲಾಗಿದೆ.

416. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಉಚಿತ ವೈ–ಫೈ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಕಿಯೋನಿಕ್ಸ್ ಸಾರಥ್ಯದಲ್ಲಿ ಖಾಸಗಿ–ಸಹಭಾಗಿತ್ವದ ಮೂಲಕ Viability Gap Funding ನೀಡಿ, ಮೊದಲ ಹಂತದಲ್ಲಿ ರಾಜ್ಯದ 2500 ಗ್ರಾಮ ಪಂಚಾಯತಿಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು.

417. ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿರುವ 35.69 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅತ್ಯಾಧುನಿಕ

ತಾರಾಲಯವನ್ನು ಡಿಸೆಂಬರ್ 2017ರೊಳಗೆ ಕಾರ್ಯಾರಂಭ ಗೊಳಿಸಲಾಗುವುದು.

418. ಮಡಿಕೇರಿ ಮತ್ತು ಗದಗ್ ನಲ್ಲಿ ತಲಾ 5.75 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 10 ಮೀ ಗೋಳಾಕೃತಿಯ 3ಡಿ ಕಿರು ತಾರಾಲಯವನ್ನು ಸ್ಥಾಪಿಸಲಾಗುವುದು.

419. ಪ್ರಸಕ್ತ ವರ್ಷಾವಧಿಯಲ್ಲಿ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಗ್ಯಾಲರಿ ಕಟ್ಟಡ ಕಾಮಗಾರಿಯನ್ನು 30 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಪ್ರಾರಂಭಿಸಲಾಗುವುದು.

420. ಪ್ರಸಕ್ತ ಹಣಕಾಸು ವರ್ಷದಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಐದು ಜಿಲ್ಲೆಗಳಿಗೆ ಒಂದರಂತೆ ಸಂಚಾರಿ ತಾರಾಲಯ ವಾಹನಗಳನ್ನು ನಿಯೋಜಿಸುವ ಮೂಲಕ ಸಂಚಾರಿ ತಾರಾಲಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

421. ಕರ್ನಾಟಕ ಜ್ಞಾನ ಆಯೋಗವು ನಿರ್ಣಯ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ದತ್ತಾಂಶ ವಿಶ್ಲೇಷಣೆಗಳನ್ನು ಅಳವಡಿಸಿಕೊಳ್ಳಲು ಹಾಗೂ ಭವಿಷ್ಯದ ದೃಷ್ಟಿಯಲ್ಲಿ ಯಾಂತ್ರಿಕ ಬುದ್ಧಿಶಕ್ತಿ ಮತ್ತು ರೊಬೋಟಿಕ್ ಅಭಿವೃದ್ಧಿಯನ್ನು ಗುರುತಿಸಿರುತ್ತದೆ. ಇದರ ಅನುಸಾರವಾಗಿ, ಬೆಂಗಳೂರಿನ ಐಐಐಟಿ ಸಂಸ್ಥೆಯಲ್ಲಿ ಯಾಂತ್ರಿಕ ಬುದ್ಧಿಶಕ್ತಿ ಮತ್ತು ರೋಬೋಟಿಕ್ಸ್ ಕೇಂದ್ರ ಸ್ಥಾಪಿಸಲು ಉದ್ದೇಶಿಸಿದ್ದು, ಇದಕ್ಕಾಗಿ

ಪ್ರಸಕ್ತ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

422. ಕೃಷಿ, ನಗರಾಭಿವೃದ್ಧಿ ಹಾಗೂ ಪಾರಂಪರಿಕ ಸ್ಥಳಗಳಲ್ಲಿ ಮಾನವರಹಿತ ವೈಮಾನಿಕ ವ್ಯವಸ್ಥೆ (ಯು.ಎ.ಎಸ್)ಯನ್ನು ಪ್ರಾಯೋಗಿಕ ಸಹಯೋಜನೆ ಮೂಲಕ ಕೈಗೆತ್ತಿಕೊಳ್ಳಲು 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

423. 2017–18ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಟ್ಟಾರೆಯಾಗಿ 299 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

**ಇ–ಆಡಳಿತ**

424. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- **ಮೊಬೈಲ್ ಒನ್ ಯೋಜನೆಯು** ರಾಷ್ಟ್ರದ ಪ್ರಥಮ ಮತ್ತು ವಿಶ್ವದ ಬೃಹತ್ ವಿವಿಧೋದ್ದೇಶ ವ್ಯಾಪ್ತಿಯ ಸರ್ಕಾರ ಮತ್ತು ಖಾಸಗಿ ವಲಯದ ನಾಗರೀಕ ಸೇವೆಗಳ ಏಕೀಕೃತ ಮೊಬೈಲ್ ಆಡಳಿತದ ವೇದಿಕೆಯಾಗಿದೆ.
- ಬೆಂಗಳೂರು–ಒನ್ ಯೋಜನೆಯ ಮಾದರಿಯಲ್ಲಿಯೇ 39 **ಕರ್ನಾಟಕ–ಒನ್** ಕೇಂದ್ರಗಳನ್ನು ರಾಜ್ಯದ 09 ಮಹಾನಗರಗಳಾದ ಹುಬ್ಬಳ್ಳಿ–ಧಾರವಾಡ, ಮಂಗಳೂರು,

ಶಿವಮೊಗ್ಗ, ಬೆಳಗಾವಿ, ಬಳ್ಳಾರಿ, ಮೈಸೂರು, ದಾವಣಗೆರೆ, ಕಲಬುರ್ಗಿ ಮತ್ತು ತುಮಕೂರುಗಳಲ್ಲಿ ಸ್ಥಾಪಿಸಲಾಗಿದೆ.

- ವಿಶ್ವ ಬ್ಯಾಂಕಿನ ಸಹಕಾರದ **ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ** (HRMS) ಹೆಚ್ಚಿನ ಪ್ರಗತಿಯನ್ನು ಕಂಡಿದೆ. ಹೆಚ್‌ಆರ್‌ಎಂಎಸ್– 2.0 ಪ್ರಗತಿಯಲ್ಲಿದೆ. ಇದರಲ್ಲಿ 5.5 ಲಕ್ಷ ಸರ್ಕಾರಿ ನೌಕರರ ವೇತನ (ರಾಜ್ಯ, AIS, AICTE, UGC, FNJPC) ಹಾಗೂ ಶೇ 100% ರಷ್ಟು ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ವೇತನ ನಿರ್ವಹಣೆ ಮಾಡಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

425. 2017–18ನೇ ಹಣಕಾಸು ವರ್ಷದಲ್ಲಿ 18ಕ್ಕೂ ಅಧಿಕ ಜಿಲ್ಲಾ ಕೇಂದ್ರಗಳಲ್ಲಿ **ಕರ್ನಾಟಕ–ಒನ್** ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಪ್ರತಿಯೊಂದು ಜಿಲ್ಲೆಯನ್ನು ಸೇವಾ ಪ್ರಕ್ರಿಯೆಯ ಕಾರ್ಯ ವ್ಯಾಪ್ತಿಗೆ ತರಲಾಗುವುದು

426. ಕೇಸ್ವಾನ್–2 ಅನ್ನು ಮುಂದಿನ 5 ವರ್ಷಗಳಲ್ಲಿ 800 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ಇದರ ವ್ಯಾಪ್ತಿಗೆ ಸೇರ್ಪಡೆಗೊಳ್ಳುವ ಸರ್ಕಾರಿ ಕಚೇರಿಗಳ ಸಂಖ್ಯೆಯು 10,000ಕ್ಕೆ ಹೆಚ್ಚಲಿದೆ. ಈ ಯೋಜನೆಯಿಂದ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಮತ್ತು ಅವುಗಳ ಅನ್ವಯಿಕಗಳಿಗೆ ಅತ್ಯಂತ ಪ್ರಬಲ ಮತ್ತು ತೀವ್ರಗತಿಯ ಸಂಪರ್ಕ ದೊರೆಯಲಿದೆ.

427. 2017–18ನೇ ಸಾಲಿನಲ್ಲಿ ಇ–ಆಡಳಿತ ಇಲಾಖೆಗೆ ಒಟ್ಟಾರೆಯಾಗಿ 189 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

## ಪ್ರವಾಸೋದ್ಯಮ

428. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ನೂತನ ಪ್ರವಾಸೋದ್ಯಮ ನೀತಿ 2015–20ನ್ನು ಜಾರಿಗೊಳಿಸಲಾಗಿದೆ. ಸದರಿ ನೀತಿಯಲ್ಲಿ ಖಾಸಗಿ ಹೂಡಿಕೆಯನ್ನು ಉತ್ತೇಜಿಸಲು 20 ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ.

- ಪ್ರವಾಸಿ ತಾಣಗಳಲ್ಲಿ ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ 2015–16ನೇ ಸಾಲಿನಲ್ಲಿ 92 ಮಹಿಳೆಯರು ಸೇರಿಸಿ 472 ಗೃಹರಕ್ಷಕರಿಗೆ ತರಬೇತಿ ನೀಡಿ, ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಿಗೆ ಪ್ರವಾಸಿ ಮಿತ್ರರನ್ನಾಗಿ ನಿಯೋಜಿಸಲಾಗಿದೆ.

- ವಿಶ್ವವಿದ್ಯಾನಿಲಯಗಳ ಮೂಲಕ 9 ಮಹಿಳೆಯರು ಸೇರಿದಂತೆ 111 ಪ್ರವಾಸಿ ಮಾರ್ಗದರ್ಶಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಹಾಗೂ ಮಾರ್ಗದರ್ಶಿ ಪರವಾನಗಿ ವಿತರಿಸಲಾಗಿದೆ.

- ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ

ನಿರುದ್ಯೋಗಿ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ತಲಾ 2 ಲಕ್ಷ ರೂ.ಗಳ ಸಹಾಯಧನದೊಂದಿಗೆ 3804 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲಾಗಿದೆ.

- ಬೆಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ 2015ನೇ ಸಾಲಿನಲ್ಲಿ 38ನೇ ಪಾಟಾ ಅಂತರರಾಷ್ಟ್ರೀಯ ಮೇಳವನ್ನು ಆಯೋಜಿಸಲಾಗಿದ್ದು, ಈ ಮೇಳದಲ್ಲಿ 57 ರಾಷ್ಟ್ರಗಳು ಹಾಗೂ ದೇಶದ 19 ರಾಜ್ಯಗಳು ಭಾಗವಹಿಸಿದ್ದವು.

- ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯು ಚಿಕ್ಕಮಗಳೂರು ಜಿಲ್ಲೆಯ ಭಗವತಿ, ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು, ಉಡುಪಿ ಜಿಲ್ಲೆಯ ಆನೆಜರಿ ಹಾಗೂ ಸೀತಾನದಿ ಪ್ರದೇಶಗಳಲ್ಲಿ ಮಧ್ಯಮ ವರ್ಗದವರಿಗೆ ಕೈಗೆಟಕುವ ದರದಲ್ಲಿ ಜಂಗಲ್ ಕ್ಯಾಂಪ್ಸ್‌ಗಳನ್ನು ಅಭಿವೃದ್ದಿಪಡಿಸಿರುತ್ತದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

429. ರಾಜ್ಯಾದ್ಯಂತ ಅರಣ್ಯ ಪ್ರವಾಸೋದ್ಯಮ ಮತ್ತು ಚಾರಣ ಪಥಗಳನ್ನು (ಎಕೋ–ಟ್ರೇಲ್ಸ್) ಜನಪ್ರಿಯಗೊಳಿಸಲು, ಕರ್ನಾಟಕದಲ್ಲಿ ನಿರ್ಜನ ಕಾಡು ಪ್ರದೇಶ ಮತ್ತು ವನ್ಯ ಜೀವಿಯನ್ನು ಅನ್ವೇಷಿಸಲು ಪ್ರವಾಸಿಗರಿಗೆ 2017ನೇ ವರ್ಷವನ್ನು **"ವನ್ಯಜೀವಿ ವರ್ಷ"** (Year of the Wild) ವೆಂದು ಘೋಷಿಸಿದೆ.

430. ಆತಿಥ್ಯ ಉದ್ಯಮದಲ್ಲಿ ಪರಿಣಿತ ಮಾನವ ಸಂಪನ್ಮೂಲವನ್ನು ಹೆಚ್ಚಿಸಲು ಈ ಉದ್ಯಮಗಳ ಸಹಯೋಗದೊಂದಿಗೆ 5 ಕೋಟಿ ರೂ. ವೆಚ್ಚದಲ್ಲಿ ಕಾರ್ಯಕ್ರಮ ರೂಪಿಸಲಾಗುವುದು.

431. ಕರ್ನಾಟಕದ ಕರಾವಳಿ ತೀರವನ್ನು ಅಂತರರಾಷ್ಟ್ರೀಯ ಸರ್ಫಿಂಗ್ ತಾಣವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಮಂಗಳೂರಿನ ಸಸಿಹಿತ್ಲು ಬೀಚ್‌ನಲ್ಲಿ **"ರಾಷ್ಟ್ರೀಯ ವಾರ್ಷಿಕ ಸರ್ಫಿಂಗ್ ಉತ್ಸವ"** (National Annual surfing Festival) ವನ್ನು ಈ ವರ್ಷದಿಂದ ಏರ್ಪಡಿಸಲಾಗುವುದು.

432. ಪ್ರವಾಸೋದ್ಯಮ ಮೂಲ ಸೌಕರ್ಯ ಅಭಿವೃದ್ಧಿಗಾಗಿ 385 ಕೋಟಿ ರೂ.ಗಳನ್ನು ಒದಗಿಸಲಾಗುವುದು ಮತ್ತು ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು:

- ಎ.ಎಸ್.ಐ. ಮತ್ತು ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆ, ಮೂಲ ಸೌಕರ್ಯವನ್ನೊಳಗೊಂಡಂತೆ ಪಾರಂಪರಿಕ ಪ್ರವಾಸೋದ್ಯಮ ಮೂಲ ಸೌಕರ್ಯಗಳ ಸಮಗ್ರ ಅಭಿವೃದ್ಧಿ.

- ಪ್ರಮುಖ ಪ್ರವಾಸಿ ತಾಣಗಳಲ್ಲಿ ನಿರ್ಮಲ ಶೌಚಾಲಯ ಸೌಲಭ್ಯಗಳ ನಿರ್ಮಾಣ.

- ಪ್ರವಾಸಿ ತಾಣಗಳನ್ನು ಉತ್ತಮ ಸ್ಥಿತಿಯಲ್ಲಿಡಲು, ಈ ಅನುದಾನದ ಒಂದು ಭಾಗವನ್ನು ನಿರ್ವಹಣಾ ನಿಧಿಯಾಗಿ ಮೀಸಲಿರಿಸಲಾಗುವುದು.

- ವಿಶ್ವಪಾರಂಪರಿಕ ಸ್ಥಳಗಳು ಮತ್ತು ಇತರ ಅತಿ ಪ್ರಮುಖ ಪ್ರವಾಸಿ ತಾಣಗಳಿಗೆ ಸಂಪರ್ಕ ರಸ್ತೆಗಳ ಅಭಿವೃದ್ಧಿ.

433. 16 ಪ್ರವಾಸಿ ಕೇಂದ್ರಗಳನ್ನು ವಿಶ್ವದರ್ಜೆಯ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲಾಗುವುದು.

434. ಉತ್ತರ ಕರ್ನಾಟಕದ ಐತಿಹಾಸಿಕ ತಾಣಗಳಾದ ಲಕ್ಕುಂಡಿ, ಹಂಪಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬನವಾಸಿ ಮುಂತಾದ ಸ್ಥಳಗಳನ್ನು ಪುನಶ್ಚೇತನಗೊಳಿಸಿ ಆಕರ್ಷಕಗೊಳಿಸಲು ಕಾರವಾರದಿಂದ ವಿಜಯಪುರದವರೆಗೆ ಹಾಗೂ ಬೆಳಗಾವಿಯಿಂದ ಬಳ್ಳಾರಿಯವರೆಗೆ ಹಾಗೂ ಬೀದರ್ ನಿಂದ ಕೊಪ್ಪಳದವರೆಗೆ ಒಂದು ಪ್ರವಾಸಿ "ಬೆಳ್ಳಿ ಶೃಂಗ"ವನ್ನು ಸ್ಥಾಪಿಸಲಾಗುವುದು.

435. ಮೈಸೂರಿನಲ್ಲಿ ಏರೋ ಸ್ಪೋರ್ಟ್ಸ್ ಹಬ್ (Aero Sports Hub) ನಿರ್ಮಿಸಲು ಉದ್ದೇಶಿಸಿದೆ.

436. 2017-18ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಒಟ್ಟಾರೆಯಾಗಿ 572 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

## ಸಾಮಾನ್ಯ ಆಡಳಿತ

437. ರಾಜ್ಯದ ಅಭಿವೃದ್ದಿಯಲ್ಲಿ ಸರ್ಕಾರಿ ನೌಕರರ ಪಾತ್ರ ಮಹತ್ವದ್ದು. ವೇತನ ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಹಿಂದಿನ ವೇತನ ಪರಿಷ್ಕರಣೆಯ ಸೌಲಭ್ಯವನ್ನು ಸರ್ಕಾರಿ ನೌಕರರಿಗೆ ದಿನಾಂಕ: 01.04.2012 ರಿಂದ ನೀಡಲಾಗಿದೆ. ತಮ್ಮ ವೇತನ ಪರಿಷ್ಕರಣೆ ಮಾಡುವಂತೆ ಸರ್ಕಾರಿ ನೌಕರರ ಬೇಡಿಕೆಯಿದೆ. ಈ ಮಧ್ಯೆ, ಕೇಂದ್ರ ಸರ್ಕಾರವು ಸಹ ತನ್ನ ನೌಕರರ ವೇತನ ಪರಿಷ್ಕರಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರ ಕೋರಿಕೆಯನ್ನು ಪರಿಶೀಲಿಸಲು ವೇತನ ಆಯೋಗ ರಚಿಸಲಾಗುವುದು.

438. ಸ್ವಾತಂತ್ರ ಯೋಧರ ಮಾಸಾಶನವನ್ನು 8000 ರೂ.ಗಳಿಂದ 10,000 ರೂ.ಗಳಿಗೆ ಮತ್ತು ಗೋವಾ ವಿಮೋಚನಾ ಹೋರಾಟಗಾರ ಮಾಸಾಶನವನ್ನು 3,000 ರೂ.ಗಳಿಂದ 4,000 ರೂ.ಗಳಿಗೆ ಹೆಚ್ಚಿಸಲಾಗುವುದು.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ

439. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಚಿವರು ನೇರವಾಗಿ ಸಂವಾದ ನಡೆಸುವ **"ಜನ–ಮನ"** ಕಾರ್ಯಕ್ರಮವನ್ನು ಜಿಲ್ಲೆಗಳಲ್ಲಿ ನಡೆಸಲಾಗಿದೆ.

- ಜವಹರಲಾಲ್ ನೆಹರು 125ನೇ ವರ್ಷಾಚರಣೆ ಮತ್ತು ದೇವರಾಜ ಅರಸು ಜನ್ಮಶತಮಾನೋತ್ಸವ ಅಂಗವಾಗಿ ಛಾಯಾಚಿತ್ರ ಪ್ರದರ್ಶನ ಮತ್ತು ಅಂಬೇಡ್ಕರ್ ಅವರ 125ನೇ ಜನ್ಮ ವರ್ಷಾಚರಣೆ ನಿಮಿತ್ತ ರಾಜ್ಯಾದ್ಯಂತ **'ಭಾರತ ಭಾಗ್ಯವಿಧಾತ'** ಧ್ವನಿ–ಬೆಳಕು ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

- ಕನ್ನಡ ಹಾಗೂ ಪ್ರಾದೇಶಿಕ ಚಲನಚಿತ್ರಗಳಿಗೆ ನೀಡುವ ಸಹಾಯಧನವನ್ನು 75 ರಿಂದ 125 ಚಲನಚಿತ್ರಗಳಿಗೆ ಹೆಚ್ಚಿಸಲಾಗಿದೆ.

- ಕನ್ನಡ ಚಿತ್ರೋದ್ಯಮದ ಅಬಿವೃದ್ಧಿಗಾಗಿ ಮೈಸೂರಿನ ಹಿಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಿಸಲಾಗುತ್ತಿದೆ.

- ಬೆಂಗಳೂರಿನಲ್ಲಿ ಡಾ॥ ರಾಜ್‌ಕುಮಾರ್ ಸ್ಮಾರಕವನ್ನು ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ. ಮೈಸೂರಿನಲ್ಲಿ ಡಾ॥ ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಲಾಗುತ್ತಿದೆ.

- ಬೆಂಗಳೂರಿನಲ್ಲಿ ಮಾತ್ರ ನಡೆಯುತ್ತಿದ್ದ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಕಳೆದ ಎರಡು ವರ್ಷಗಳಿಂದ ಮೈಸೂರು ನಗರಕ್ಕೂ ಸಹ ವಿಸ್ತರಿಸಲಾಗಿದೆ.

**2017–18ನೇ ಸಾಲಿನ ಹೊಸ ಯೋಜನೆಗಳು**

440. ವಿವಿಧ ಇಲಾಖೆಗಳು ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಎಲ್ಲಾ ಜಿಲ್ಲೆಗಳಲ್ಲಿ ಮೂರು ದಿನಗಳ **"ಜಿಲ್ಲಾ ಮಾಹಿತಿ ಉತ್ಸವ"**ವನ್ನು ಆಯೋಜಿಸಲಾಗುವುದು. ಈ ಉದ್ದೇಶಕ್ಕಾಗಿ 16 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

441. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಮತ್ತು ಎಲ್ಲಾ ತಾಲ್ಲೂಕಗಳ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಡಿಜಿಟಲ್ ಪ್ರದರ್ಶನ ಫಲಕಗಳನ್ನು ಅಳವಡಿಸಲಾಗುವುದು. ಇದಕ್ಕಾಗಿ 17 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

442. ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ವರ್ಷಾಚರಣೆಯು 2ನೇ ಅಕ್ಟೋಬರ್ 2018 ರಂದು ಪ್ರಾರಂಭವಾಗುವುದು. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯದಾದ್ಯಂತ "ಮಹಾತ್ಮ ಗಾಂಧೀಜಿ" ಧ್ವನಿ–ಬೆಳಕು ಪ್ರದರ್ಶನವನ್ನು ಆಯೋಜಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

443. ಮಹಾತ್ಮ ಗಾಂಧೀಜಿಯವರ ಚಿತಾಭಸ್ಮವಿರುವ ಅರಸಿಕೆರೆಯ ಕಸ್ತೂರಬಾ ಆಶ್ರಮವನ್ನು ಅಭಿವೃದ್ಧಿಪಡಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

444. ಜಿಲ್ಲಾ ಕೇಂದ್ರಗಳಲ್ಲಿನ ಪತ್ರಕರ್ತರಿಗೆ ಆಯಾ ನಗರ ಸಾರಿಗೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸಲು ಉಚಿತ ಬಸ್ ಪಾಸ್ ನೀಡಲಾಗುವುದು.

445. ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರ ಮಾಸಾಶನವನ್ನು 8000 ರೂ.ಗಳಿಂದ 10,000 ರೂ.ಗಳಿಗೆ ಹೆಚ್ಚಿಸಲಾಗುವುದು.

446. ಚಲನಚಿತ್ರೋದ್ಯಮದ ಕಾರ್ಮಿಕರು, ತಂತ್ರಜ್ಞರು ಹಾಗೂ ಕಲಾವಿದರ ಆರೋಗ್ಯ ಸೇವೆಗಾಗಿ ಸ್ಥಾಪಿಸಿರುವ ದತ್ತಿ ನಿಧಿಯ ಮೊತ್ತವನ್ನು 1 ಕೋಟಿ ರೂ.ಗಳಿಂದ 10 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

447. ರಾಜ್ಯದಲ್ಲಿನ ಮಲ್ಟಿಪ್ಲೆಕ್ಸ್ ಚಿತ್ರಮಂದಿರದ ಒಂದು ಪರದೆಯಲ್ಲಿ ಮಧ್ಯಾಹ್ನ 1.30 ರಿಂದ 7.30ರವರೆಗೆ ಪ್ರಮುಖ ಅವಧಿಯಲ್ಲಿ ಕನ್ನಡ ಹಾಗೂ ಪ್ರಾದೇಶಿಕ ಭಾಷೆಗಳ ಚಲನಚಿತ್ರ ಪ್ರದರ್ಶನವನ್ನು ಕಡ್ಡಾಯಗೊಳಿಸಲಾಗುವುದು.

448. ರಾಜ್ಯದಲ್ಲಿ ಮಲ್ಟಿಪ್ಲೆಕ್ಸ್‌ಗಳೂ ಸೇರಿದಂತೆ ಎಲ್ಲಾ ಚಿತ್ರಮಂದಿರಗಳಲ್ಲಿ ಏಕರೀತಿಯ ಪ್ರವೇಶದರ ನೀತಿ ಜಾರಿಗೆ ತರಲು ಉದ್ದೇಶಿಸಲಾಗಿದ್ದು, 200 ರೂ.ಗಳ ಗರಿಷ್ಠ ಪ್ರವೇಶದರವನ್ನು ನಿಗದಿಪಡಿಸಲಾಗುವುದು.

449. 2017–18ನೇ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒಟ್ಟಾರೆಯಾಗಿ 283 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

**ಒಳಾಡಳಿತ**

450. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಮನೋಸ್ಥೈರ್ಯ ಹೆಚ್ಚಿಸಲು 12,000 ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲಾಗಿದೆ.
- 20,487 ಪಿ.ಎಸ್.ಐ ಮತ್ತು ಪಿ.ಸಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಮುಂದಿನ ಒಂದು ತಿಂಗಳಲ್ಲಿ ಇನ್ನು 3274 ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
- 11,000 ವಸತಿ ಗೃಹಗಳನ್ನು ನಿರ್ಮಾಣ ಮಾಡುವ 'ಪೊಲೀಸ್ ಗೃಹ–2020' ಯೋಜನೆಯಡಿ, ಇದುವರೆವಿಗೆ 4,016 ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿದ್ದು, 2ನೇ ಹಂತದ 4,198 ವಸತಿ ಗೃಹಗಳ ನಿರ್ಮಾಣ ಪ್ರಗತಿಯಲ್ಲಿದೆ.
- ಪ್ರತಿ ಪೊಲೀಸ್ ಸಿಬ್ಬಂದಿಗೆ 1,000 ರೂ. ವೆಚ್ಚದಲ್ಲಿ ವಾರ್ಷಿಕ ವೈದ್ಯಕೀಯ ತಪಾಸಣೆ ಪ್ರಾರಂಭಿಸಿದೆ.
- ಪೊಲೀಸ್ ಕಾನ್ಸ್‌ಟೆಬಲ್ ಹುದ್ದೆಯಿಂದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯವರೆಗೆ ಭತ್ಯೆಗಳನ್ನು ತಿಂಗಳಿಗೆ 2,000 ರೂ.ಗಳಷ್ಟು ಹೆಚ್ಚಿಸಲಾಗಿದೆ.

- ಮಹಿಳಾ ಸುರಕ್ಷತೆ ದೃಷ್ಟಿಯಿಂದ 2 ಹೊಸ ಮಹಿಳಾ ಪೊಲೀಸ್ ಕಂಪೆನಿ ಸ್ಥಾಪಿಸಲಾಗಿದೆ.
- 2013 ರಿಂದ ಇಲ್ಲಿಯವರೆಗೆ 27 ಹೊಸ ಅಗ್ನಿಶಾಮಕ ಠಾಣೆಗಳು, 40 ಹೊಸ ಅಗ್ನಿಶಾಮಕ ಠಾಣಾ ಕಟ್ಟಡಗಳು, 308 ಅಗ್ನಿಶಾಮಕ ವಾಹನಗಳನ್ನು ಖರೀದಿಸಲಾಗಿದೆ.
- 2013ನೇ ಸಾಲಿನಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪಡೆಯನ್ನು ಸ್ಥಾಪಿಸಲಾಗಿದೆ.
- ಕಾರಾಗೃಹಗಳ ಆಧುನೀಕರಣ ಕಾರ್ಯಕ್ರಮದಡಿಯಲ್ಲಿ ಸಿಸಿಟಿವಿಗಳು, ಸೌರಶಕ್ತಿ ದೀಪಗಳು, ಮೊಬೈಲ್ ಜಾಮರ್‌ಗಳು, ಪ್ರಿಸನರ್ ಇನ್‌ಫರ್‌ಮೇಷನ್ ಕಿಯೋಸ್ಕ್‌ಗಳು, ಪ್ರಿಸನ್ ಕಾಲ್ ಸಿಸ್ಟಮ್, ವಿಚಾರಣಾಧೀನ ಖೈದಿಗಳ ವೀಡಿಯೋ ಕಾನ್ಫರೆನ್ಸಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.
- ಕರ್ನಾಟಕದಲ್ಲಿ ಗೃಹರಕ್ಷಕರ ಸಂಖ್ಯಾಬಲವನ್ನು 25,000 ರಿಂದ 30,000ಕ್ಕೆ ಹೆಚ್ಚಿಸಲಾಗಿದೆ ಮತ್ತು ಸರ್ಕಾರವು ಗೃಹರಕ್ಷಕರಿಗೆ ನೀಡಲಾಗುತ್ತಿರುವ ಕರ್ತವ್ಯ ಭತ್ಯೆಯನ್ನು ಬೆಂಗಳೂರು ನಗರದಲ್ಲಿ 300/– ರೂ. ಗಳಿಂದ 400/– ರೂ.ಗಳಿಗೆ ಹಾಗೂ ಬೆಂಗಳೂರು ನಗರದ ಹೊರಗೆ 250/– ರೂ. ಗಳಿಂದ 325/– ರೂ.ಗಳಿಗೆ ಹೆಚ್ಚಿಸಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

451. ಪೊಲೀಸ್ ತರಬೇತಿ ಶಾಲೆಗಳಲ್ಲಿ ಮಹಿಳೆಯರಿಗೆ ಮೂಲಸೌಕರ್ಯ ಹೆಚ್ಚಿಸಲು ಹಾಗೂ ಬಲವರ್ಧನೆಗೊಳಿಸಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

452. ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ಶೌಚಾಲಯ ಕಲ್ಪಿಸಲಾಗುವುದು.

453. ಪೊಲೀಸ್ ಸ್ಪಂದನಾ ಸಮಯದಲ್ಲಿ ವಿಶೇಷವಾಗಿ, ಮಹಿಳೆಯರು ಮತ್ತು ಮಕ್ಕಳ ವಿರುದ್ಧ ನಡೆಯುವ ಅಪರಾಧಗಳಿಗೆ ತ್ವರಿತವಾಗಿ ಸ್ಪಂದಿಸಲು ಡೌನಲೋಡ್ ಮಾಡಿಕೊಳ್ಳಬಹುದಾದ ಆ್ಯಪ್‌ಗಳು ಸೇರಿದಂತೆ ತಂತ್ರಜ್ಞಾನ ಆಧಾರಿತ ಪೊಲೀಸ್ ಪರಿಕರಗಳನ್ನು ಅಳವಡಿಸಿಕೊಳ್ಳಲಾಗುವುದು.

454. "Dial 100" ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಾಗುವುದು ಹಾಗೂ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

455. ಪ್ರಸ್ತುತ 5 ನಗರಗಳಲ್ಲಿ ಸಂಚಾರ ನಿರ್ವಹಣೆಗಾಗಿ ಇರುವ ಟ್ರ್ಯಾಕ್ ಪ್ರೋಗ್ರಾಮ್‌ನ್ನು ಮತ್ತಷ್ಟು ಬಲಪಡಿಸಲಾಗುವುದು ಹಾಗೂ ಈ ಕಾರ್ಯಕ್ರಮವನ್ನು ಕಲಬುರಗಿ ಮತ್ತು ತುಮಕೂರು ನಗರಗಳು ಒಳಗೊಂಡಂತೆ ಬೆಂಗಳೂರು ಮತ್ತು ಮೈಸೂರು ರೈಲ್ವೆ ನಿಲ್ದಾಣಗಳಿಗೂ ವಿಸ್ತರಿಸಲಾಗುವುದು.

456. ಕಲಬುರಗಿಯಲ್ಲಿ ಪೊಲೀಸ್ ಆಯುಕ್ತಾಲಯವನ್ನು ಸ್ಥಾಪಿಸಲಾಗುವುದು.

457. ಅಪರಾಧ ಪತ್ತೆ ಮತ್ತು ಅಪರಾಧ ನಿರ್ಣಯ ದರದಲ್ಲಿ ಸುಧಾರಣೆ ತರುವ ಸಲುವಾಗಿ ಮೂಲ ಸೌಕರ್ಯವನ್ನು ಸುಧಾರಣೆ ಮಾಡುವುದರೊಂದಿಗೆ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ಮತ್ತಷ್ಟು ಆಧುನೀಕರಣಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ ಬೆಂಗಳೂರಿನಲ್ಲಿ 20 ಕೋಟಿ ರೂ.ಗಳ ವೆಚ್ಚದಲ್ಲಿ ವಿಧಿ ವಿಜ್ಞಾನ ಹಾಗೂ ಪೊಲೀಸ್ ತಾಂತ್ರಿಕ ಕೇಂದ್ರವನ್ನು ಸ್ಥಾಪಿಸಲಾಗುವುದು.

458. ವಿಧಾನ ಮಂಡಲಗಳ ಅಧಿವೇಶನದ ಸಮಯದಲ್ಲಿ ನಿಯೋಜಿಸುವ ಪೊಲೀಸ್ ಸಿಬ್ಬಂದಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಬೆಳಗಾವಿಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಬಹು ಉದ್ದೇಶಿತ ಭವನದ ಜೊತೆಗೆ ಬರಾಕ್‌ಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

459. 8 ಕೇಂದ್ರ ಕಾರಾಗೃಹಗಳಿಗೆ ಎಫ್‌ಜಿ–1 ಸೆಕ್ಯೂರಿಟಿ ಪೋಲ್ ಖರೀದಿಸಲಾಗುವುದು ಮತ್ತು ಎಲ್ಲಾ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳಿಗೆ ಹ್ಯಾಂಡ್ ಮೆಟಲ್ ಡಿಟೆಕ್ಟರ್, ಡೋರ್ ಫ್ರೇಮ್ ಡಿಟೆಕ್ಟರ್ ಹಾಗೂ ಮೂಲಭೂತ ವೈದ್ಯಕೀಯ ತಪಾಸಣಾ ಉಪಕರಣಗಳನ್ನು ಒದಗಿಸಲಾಗುವುದು.

460. ಸುಗಮ ಆಡಳಿತ ಹಾಗೂ ಸುರಕ್ಷತೆ ದೃಷ್ಟಿಯಿಂದ ಕಾರಾಗೃಹಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಬಲಪಡಿಸಲಾಗುವುದು.

461. ಕಾರವಾರ, ತಿಪಟೂರು ವಿರಾಜಪೇಟೆ, ಗಂಗಾವತಿ, ಬೀದರ್ ಮತ್ತು ತರೀಕೆರೆಗಳಲ್ಲಿ ನೂತನ ಕಾರಾಗೃಹ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು.

462. ಬೆಂಗಳೂರು ಕೇಂದ್ರ ಕಾರಾಗೃಹದ 3ನೇ ಹಂತದ ಮಹಿಳಾ ಮತ್ತು ಸಜಾಬಂಧಿಗಳ ಕಾರಾಗೃಹದ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

463. 2017–18ನೇ ಸಾಲಿನಲ್ಲಿ ಒಳಾಡಳಿತ ಇಲಾಖೆಗೆ ಒಟ್ಟಾರೆಯಾಗಿ 4,938 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

## ಸಾರಿಗೆ

464. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ಗಣಕೀಕರಣ ಮತ್ತು ಸ್ಮಾರ್ಟ್ ಕಾರ್ಡ್ ಯೋಜನೆ ಅಡಿಯಲ್ಲಿ, ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ 226 ಲಕ್ಷ ಸ್ಮಾರ್ಟ್ ಕಾರ್ಡ್ ಮತ್ತು ಚಾಲನಾ ಲೈಸನ್ಸ್‌ಗಳು ಮತ್ತು ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.

- ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳು 23,746 ವಾಹನಗಳಿಂದ 67 ಲಕ್ಷ ಕಿ.ಮೀ. ಕಾರ್ಯನಿರ್ವಹಿಸಿವೆ ಮತ್ತು ಪ್ರತಿ ದಿನ 112 ಲಕ್ಷ ಪ್ರಯಾಣಿಕರು ಪ್ರಯಾಣ ಕೈಗೊಂಡಿರುತ್ತಾರೆ. ಕಳೆದ 4 ವರ್ಷಗಳಲ್ಲಿ ಒಟ್ಟು 6,957 ಬಸ್ಸುಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ.

- 21 ಹೊಸ ಡಿಪೋಗಳು ಮತ್ತು 21 ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸಲು ಕ್ರಮ ಜರುಗಿಸಲಾಗಿದೆ. ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ರಾಜ್ಯದ ಪ್ರಮುಖ ನಗರಗಳಲ್ಲಿ 1793 ನಗರ ಬಸ್ ಸೇವೆಗಳನ್ನು ಪ್ರಾರಂಭಿಸಲಾಗಿದೆ. .

- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವೈಶಿಷ್ಟ್ಯಪೂರ್ಣ ಉಪಕ್ರಮಗಳು ಮತ್ತು ಉತ್ತಮ ಆಚರಣೆಗಳಿಗಾಗಿ, ದೇಶದಲ್ಲಿಯೇ 164 ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಏಕೈಕ ರಾಜ್ಯ ಸಾರಿಗೆ ಉದ್ಯಮವಾಗಿದೆ.

- ಬಿ.ಎಂ.ಟಿ.ಸಿ.ಯು ಇದುವರೆಗೆ 100 ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ಸಮರ್ಥ ನಗರ ನಿರ್ವಹಣೆಗಳಿಗಾಗಿ 2016ರ ರಾಷ್ಟ್ರ ಮಟ್ಟದ ನಗರ ಸಂಚಾರ ಪ್ರಶಸ್ತಿ. ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ನವೀನ ನಗರ ಸಾರಿಗೆಗಾಗಿ "ಭಾರತ ಬಸ್ ಪ್ರಶಸ್ತಿ"ಯನ್ನು ಪಡೆದಿವೆ.

- ಸಾಮಾಜಿಕ ಭಾದ್ಯತೆಗಾಗಿ, ರಸ್ತೆ ಸಾರಿಗೆ ನಿಗಮಗಳು ವಿವಿಧ ನಾಗರಿಕರ ಪ್ರವರ್ಗಗಳಿಗೆ ರಿಯಾಯಿತಿ ಮತ್ತು ಉಚಿತ ಬಸ್ ಪಾಸ್‌ಗಳನ್ನು ವಿತರಿಸಿವೆ. 17.8 ಲಕ್ಷ ವಿದ್ಯಾರ್ಥಿಗಳಿಗೆ, 1.5 ಲಕ್ಷ ವಿಕಲಚೇತನರಿಗೆ ಮತ್ತು 18 ಸಾವಿರ ಅಂಧರಿಗೆ ರಿಯಾಯಿತಿ ಪಾಸ್‌ಗಳನ್ನು ವಿತರಿಸಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

465. **"ರೈತ ಸಾರಥಿ"** ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಟ್ರ್ಯಾಕ್ಟರ್ ಮತ್ತು ಟ್ರೈಲರ್‌ಗಳ ಚಾಲಕರ ಅನುಕೂಲಕ್ಕಾಗಿ ರೈತರಿಗೆ ತರಬೇತಿ ಮತ್ತು ಕಲಿಕಾ ಲೈಸೆನ್ಸ್ ನೀಡಲಾಗುವುದು. ಜೊತೆಗೆ ದ್ವಿಚಕ್ರ ವಾಹನ ಲೈಸೆನ್ಸ್ ನೀಡಿಕೆ ಹಾಗೂ ರಸ್ತೆ ಸುರಕ್ಷಾ ಕ್ರಮಗಳ ಬಗ್ಗೆ ಅರಿವು ಮೂಡಿಸುವ ತರಬೇತಿಗಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

466. ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ರಸ್ತೆ ಸುರಕ್ಷತೆಯನ್ನು ಸುಧಾರಿಸಲು, ರಾಜ್ಯ ರಸ್ತೆ ಸುರಕ್ಷತೆ ಪ್ರಾಧಿಕಾರವನ್ನು ರಚಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

467. ಬೆಂಗಳೂರಿನಲ್ಲಿ ವಾಯು ಮತ್ತು ಶಬ್ಧ ಮಾಲಿನ್ಯವನ್ನು ಕಡಿಮೆ ಮಾಡಲು, 01–04–2018 ರಿಂದ ಜಾರಿಗೆ ಬರುವಂತೆ ಎರಡು ಸ್ಟ್ರೋಕ್ ಆಟೋ ರಿಕ್ಷಾಗಳನ್ನು ರದ್ದುಗೊಳಿಸಿ ಅದರ ಬದಲು ನಾಲ್ಕು ಸ್ಟ್ರೋಕ್ ಎಲ್‌ಪಿಜಿಯ 10,000 ಆಟೋ ರಿಕ್ಷಾಗಳಿಗೆ

ಪ್ರತಿ ಆಟೋ ರಿಕ್ಷಾಗೆ 30,000 ರೂ.ಗಳ ಸಹಾಯಧನಕ್ಕಾಗಿ 30 ಕೋಟಿ ರೂ.ಗಳನ್ನು ಒದಗಿಸಲಾಗುವುದು.

468. ಚಿಂತಾಮಣಿ, ರಾಣೆಬೆನ್ನೂರು ಮತ್ತು ಬಂಟ್ವಾಳದಲ್ಲಿ 3 ಹೊಸ RTO ಕಛೇರಿಗಳನ್ನು ಪ್ರಾರಂಭಿಸಲಾಗುವುದು.

469. ರಸ್ತೆ ಸಾರಿಗೆ ನಿಗಮಗಳು

- ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ವಿಶ್ವಾಸಾರ್ಹ ಸಾರಿಗೆ ವ್ಯವಸ್ಥೆ ಕಲ್ಪಿಸಲು ಬಿ.ಎಂ.ಟಿ.ಸಿ.ಗೆ ಬಸ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲು ಉದ್ದೇಶಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 3000 ಹೊಸ ಬಸ್ಸುಗಳನ್ನು ಸೇರ್ಪಡೆ ಮಾಡಿಕೊಳ್ಳಲಿದೆ. ಇದರಲ್ಲಿ 1500 ಹೊಸ ಬಸ್‌ಗಳನ್ನು ಖರೀದಿ ಮೂಲಕ ಮತ್ತು ಉಳಿದ 1500 ಬಸ್ಸುಗಳನ್ನು ಗುತ್ತಿಗೆ ಮೂಲಕ ಪಡೆಯಲಾಗುವುದು. ಬಿಎಂಟಿಸಿಯು ಬಸ್‌ಗಳನ್ನು ಖರೀದಿಸಲು ಪಡೆಯುವ ಸಾಲ ಹಾಗೂ ಬಡ್ಡಿಯ ಮರುಪಾವತಿ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೂಲಕ ಸರ್ಕಾರವು ಬಸ್ ಖರೀದಿ ಪ್ರಕ್ರಿಯೆಯನ್ನು ಬೆಂಬಲಿಸಲಿದೆ.

- ಪ್ರಸಕ್ತ ಸಾಲಿನಲ್ಲಿ, ಸಾರಿಗೆ ನಿಗಮಗಳಿಂದ ಒಟ್ಟು 3250 ಹೊಸ ಬಸ್‌ಗಳನ್ನು ಖರೀದಿಸಲಾಗುವುದು. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು 1050 ಬಸ್‌ಗಳನ್ನು,

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು 700 ಬಸ್‌ಗಳನ್ನು ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 1500 ಬಸ್‌ಗಳನ್ನು ಖರೀದಿಸಲಿವೆ.

- ಕೇಂದ್ರ ಅನುದಾನಗಳೊಂದಿಗೆ ಬೆಂಗಳೂರು ನಗರದಲ್ಲಿ 150 ಎಲೆಕ್ಟ್ರಿಕ್ ಬಸ್‌ಗಳು ಮತ್ತು ಮೈಸೂರು ನಗರದಲ್ಲಿ 50 ಎಲೆಕ್ಟ್ರಿಕ್ ಬಸ್‌ಗಳನ್ನು ಸಂಚಾರಕ್ಕೆ ಬಿಡಲು ಉದ್ದೇಶಿಸಲಾಗಿದೆ.

- ಕಾರ್ಯದಕ್ಷತೆಯನ್ನು ಸುಧಾರಿಸಲು ಶಿವಮೊಗ್ಗದಲ್ಲಿ ಹೊಸ ವಿಭಾಗವನ್ನು ಆರಂಭಿಸಲಾಗುವುದು.

- ಎಲ್ಲ ಸಾರಿಗೆ ನಿಗಮಗಳ ಮೂಲಕ 44 ಹೊಸ ಬಸ್ ನಿಲ್ದಾಣಗಳನ್ನು, 14 ಹೊಸ ಬಸ್ ಡಿಪೋಗಳನ್ನು ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

- ರಾಜ್ಯದ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸ್‌ಗಳನ್ನು ನೀಡಲಾಗುವುದು. ಅರ್ಜುನ ಮತ್ತು ಖೇಲ್ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಉಚಿತ ಬಸ್ ಪಾಸುಗಳನ್ನು ನೀಡಲಾಗುವುದು.

- ಮಹಿಳಾ ಪ್ರಯಾಣಿಕರಿಗೆ ಹೆಚ್ಚಿನ ಸುರಕ್ಷತೆ ಒದಗಿಸುವ ಸಲುವಾಗಿ ಬಿ.ಎಂ.ಟಿ.ಸಿ. ಮೊಬೈಲ್ ಅಪ್ಲಿಕೇಷನ್‌ನಲ್ಲಿ

ಹೊಸದಾಗಿ ಎಸ್‌ಒಎಸ್ ಬಟನ್ ಮತ್ತು ಟ್ರಾಕಿಂಗ್ ಸೌಲಭ್ಯವನ್ನು ಅಳವಡಿಸಲಾಗುವುದು.

- ಉಚಿತ ಹಾಗೂ ರಿಯಾಯಿತಿ ದರದ ಪಾಸ್‌ಗಳನ್ನು ಹೊಂದಿರುವ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಲಾಗುವುದು.
- ಚಾಲಕರು ಮತ್ತು ಮೆಕ್ಯಾನಿಕ್‌ಗಳಿಗೆ ಸಾಮರ್ಥ್ಯವೃದ್ಧಿಗಾಗಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಜೊತೆಗೆ ಈಗಿರುವ ಕೇಂದ್ರಗಳನ್ನು ಸಹ ಪ್ರತಿವರ್ಷ 25,000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಅನುವಾಗುವಂತೆ ಮೇಲ್ದರ್ಜೆಗೇರಿಸಲಾಗುವುದು.

470. 2017–18ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ ಒಟ್ಟಾರೆಯಾಗಿ 2,354 ಕೋಟಿ ರೂ. ಒದಗಿಸಲಾಗಿದೆ.

## ಕಾನೂನು ಮತ್ತು ನ್ಯಾಯಾಲಯಗಳು

471. **ಕಳೆದ ನಾಲ್ಕು ವರ್ಷಗಳ ಸಾಧನೆಗಳು**

- ರಾಜ್ಯದಲ್ಲಿ ನ್ಯಾಯಾಲಯಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಹಾಗೂ ಕಕ್ಷಿಗಾರರಿಗೆ ತ್ವರಿತ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಕಳೆದ 04

ವರ್ಷಗಳಿಂದ ಇಲ್ಲಿಯವರೆಗೆ 252 ವಿವಿಧ ಸ್ತರದ ಹೊಸ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

- ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳ ವಿಲೇವಾರಿಗಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

- ರಾಜ್ಯದ 176 ಕಂದಾಯ ತಾಲ್ಲೂಕುಗಳಲ್ಲಿ ಕನಿಷ್ಠ ಪಕ್ಷ ತಲಾ ಒಂದರಂತೆ ಸುಮಾರು 200 ಹೆಚ್ಚುವರಿ ನೋಟರಿ ಹುದ್ದೆಗಳನ್ನು ಸೃಜಿಸಲಾಗಿದೆ.

- ಅರ್ಹ ಕಾನೂನು ಪದವೀಧರರಿಗೆ ಇದುವರೆವಿಗೆ 24 ತಿಂಗಳುಗಳ ಅವಧಿಗೆ ನೀಡಲಾಗುತ್ತಿದ್ದ ಮಾಸಿಕ 1,000 ರೂ.ಗಳ ಪ್ರೋತ್ಸಾಹಧನವನ್ನು 2015–16ನೇ ಸಾಲಿನಿಂದ ಮಾಸಿಕ 2,000 ರೂ.ಗಳಿಗೆ ಹೆಚ್ಚಿಸಲಾಗಿದೆ.

- 2016ರ ನವೆಂಬರ್ ಅಂತ್ಯದವರೆಗೆ ಜರುಗಿದ ಲೋಕ್ ಅದಾಲತ್ ಮುಖೇನ ಒಟ್ಟಾರೆ 21 ಲಕ್ಷ ಪ್ರಕರಣಗಳನ್ನು ರಾಜಿ ಮುಖೇನ ಇತ್ಯರ್ಥಪಡಿಸಲಾಗಿದೆ

- ರಾಜ್ಯದಲ್ಲಿನ ವಕೀಲರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಕೀಲರ ಪರಿಷತ್ತಿಗೆ ಪ್ರಸ್ತುತ ನೀಡಲಾಗುತ್ತಿರುವ 2 ಕೋಟಿ

ರೂ. ಗಳ ಅನುದಾನವನ್ನು 2016–17ನೇ ಸಾಲಿನಲ್ಲಿ 5 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

## 2017–18ನೇ ಸಾಲಿನ ಹೊಸ ಯೋಜನೆಗಳು

472. ಎಲ್ಲಾ ರೀತಿಯ ಸರ್ಕಾರಿ ವ್ಯಾಜ್ಯಗಳ ಪರಿಣಾಮಕಾರಿ ಮೇಲ್ವಿಚಾರಣೆ, ನಿರ್ವಹಣೆ ಹಾಗೂ ನಿಯಂತ್ರಣಕ್ಕಾಗಿ ಹಾಗೂ ಕಾನೂನು ಅಧಿಕಾರಿಗಳ ಕೆಲಸ ಹಾಗೂ ಕಾರ್ಯನಿರ್ವಹಣೆಯನ್ನು ಸಹ ಮೇಲ್ವಿಚಾರಣೆ ಮಾಡುವ ದೃಷ್ಟಿಯಿಂದ **"**ಕರ್ನಾಟಕ ಏಕೀಕೃತ ಸರ್ಕಾರಿ ವ್ಯಾಜ್ಯ ನಿರ್ವಹಣಾ ವ್ಯವಸ್ಥೆ**"** ಯನ್ನು ಸ್ಥಾಪಿಸಲಾಗುವುದು. ಇದನ್ನು ನ್ಯಾಯಾಲಯಗಳು, ನ್ಯಾಯಾಧೀಕರಣಗಳು ಮತ್ತು ಬಾರ್ ಕೌನ್ಸಿಲ್‌ಗಳ ಪೋರ್ಟಲ್‌ಗಳಿಗೆ ಜೋಡಿಸಲಾಗುವುದು.

473. ಕೆಆರ್‌ಇಡಿಎಲ್‌ನ ನೆರವಿನೊಂದಿಗೆ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮೈಸೂರು, ಗದಗ, ಕಲ್ಬುರ್ಗಿ, ತುಮಕೂರು ಮತ್ತು ಮಂಗಳೂರು ಜಿಲ್ಲಾ ನ್ಯಾಯಾಲಯದ ಸಂಕೀರ್ಣಗಳಿಗೆ ಗ್ರಿಡ್ ಸಂಪರ್ಕವಿರುವ ಸೌರ ಛಾವಣಿಯನ್ನು ಅಳವಡಿಸಲಾಗುವುದು.

474. ಸಾರ್ವಜನಿಕರ ಹಾಗೂ ನ್ಯಾಯವಾದಿಗಳ ಅನುಕೂಲಕ್ಕಾಗಿ ಎಲ್ಲಾ ತಾಲೂಕು ನ್ಯಾಯಾಲಯ ಸಂಕೀರ್ಣಗಳಲ್ಲಿ 8.12

ಕೋಟಿ ರೂ.ಗಳ ವೆಚ್ಚದಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗುವುದು.

475. 2017–18ನೇ ಸಾಲಿನಲ್ಲಿ ಕಾನೂನು ಮತ್ತು ನ್ಯಾಯಾಲಯಗಳ ಇಲಾಖೆಗೆ ಒಟ್ಟಾರೆಯಾಗಿ 731 ಕೋಟಿ ರೂ. ಒದಗಿಸಲಾಗಿದೆ.

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

476. ಕಾಗದ ರಹಿತ ವಿಧಾನಮಂಡಲದ ವ್ಯವಹರಣೆಗಳನ್ನು ಕಾರ್ಯಗತಗೊಳಿಸಲು ಒಟ್ಟು 60.84 ಕೋಟಿ ರೂ.ಗಳ ವೆಚ್ಚದಲ್ಲಿ "ಇ–ವಿಧಾನಮಂಡಲ" ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಪ್ರಾಥಮಿಕ ಹಂತದ ಚಟುವಟಿಕೆಗಳಿಗಾಗಿ 2017–18ನೇ ಸಾಲಿನಲ್ಲಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

477. 2017–18ನೇ ಸಾಲಿನಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಒಟ್ಟಾರೆಯಾಗಿ 256 ಕೋಟಿ ರೂ. ಒದಗಿಸಲಾಗಿದೆ.

## ಸಾರ್ವಜನಿಕ ಉದ್ದಿಮೆ

478. ಅತ್ಯುತ್ತಮ ಸಾಧನೆ ಮಾಡುವ ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಿ, ಪ್ರಶಂಸಿಸಿ, ಪ್ರೇರೇಪಿಸಲು 4 ಅತ್ಯುತ್ತಮ ಸಾರ್ವಜನಿಕ ಉದ್ದಿಮೆಗಳಿಗೆ ಒಟ್ಟು 3.75 ಲಕ್ಷ ರೂ. ನಗದು

ಬಹುಮಾನ ಹಾಗೂ ಪ್ರಶಂಸಾ ಪತ್ರವನ್ನೊಳಗೊಂಡ ಮುಖ್ಯಮಂತ್ರಿಗಳ ರತ್ನ ಪ್ರಶಸ್ತಿ ಪ್ರತಿ ವರ್ಷ ನೀಡಲಾಗುವುದು.

479. ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಕರ್ನಾಟಕದ ಸಾರ್ವಜನಿಕ ಉದ್ದಿಮೆಗಳ ಕಾರ್ಯನಿರ್ವಹಣಾ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಗರಿಷ್ಠ ಮಟ್ಟಕ್ಕೇರಿಸಲು ಅನುವಾಗುವ ಸ್ಥೂಲವರದಿಯನ್ನು (Road Map) ಸಿದ್ಧಪಡಿಸಲು ಅವುಗಳ ಕಾರ್ಯ ತಾಂತ್ರಿಕ ಮೌಲ್ಯಮಾಪನ ಕಾರ್ಯವನ್ನು ನಡೆಸಲಾಗುವುದು.

480. 2017–18ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆ ಇಲಾಖೆಗೆ ಒಟ್ಟಾರೆಯಾಗಿ 250 ಕೋಟಿ ರೂ. ಒದಗಿಸಲಾಗಿದೆ.

**ತೆರಿಗೆ ಪ್ರಸ್ತಾವನೆಗಳು**

**ಸರಕು ಮತ್ತು ಸೇವಾ ತೆರಿಗೆ**

481. ಸರಕು ಮತ್ತು ಸೇವಾ ತೆರಿಗೆಯನ್ನು 01ನೇ ಜುಲೈ 2017 ರಿಂದ ದೇಶದಲ್ಲಿ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಅವಶ್ಯಕವಾದ ಸಂವಿಧಾನ ತಿದ್ದುಪಡಿಗಳನ್ನು ಈಗಾಗಲೇ ಮಾಡಲಾಗಿದ್ದು, ಮಹತ್ವಪೂರ್ಣ ತೆರಿಗೆ ವಿಧೇಯಕಗಳು ಈಗಾಗಲೇ ಸಿದ್ಧಗೊಂಡಿವೆ. ಸರಕು ಮತ್ತು ಸೇವಾ ತೆರಿಗೆ ಪರಿಷತ್ ಈ ತೆರಿಗೆ ವಿಧೇಯಕಗಳಿಗೆ ಅಂಗೀಕಾರವನ್ನು ನೀಡಿದೆ.

482. ಸರಕು ಮತ್ತು ಸೇವಾ ತೆರಿಗೆಯನ್ನು ಬೇಗನೆ ಅನುಷ್ಠಾನಗೊಳ್ಳುವುದನ್ನು ಹಾಗೂ ಅದರ ನೀತಿಯ ರೂಪುರೇಷೆಗಳನ್ನು ಸಿದ್ಧಗೊಳಿಸುವಿಕೆಯನ್ನು ಬೆಂಬಲಿಸುವಲ್ಲಿ ಯಾವಾಗಲೂ ಕರ್ನಾಟಕವು ಮುಂಚೂಣಿಯಲ್ಲಿದೆ. ಸರಕು ಮತ್ತು ಸೇವಾ ತೆರಿಗೆ ನೀತಿಯ ಚೌಕಟ್ಟನ್ನು ರಚಿಸುವ ಪ್ರಕ್ರಿಯೆಯಲ್ಲಿ ನಾವು ಸಕ್ರಿಯವಾಗಿ ಪಾಲ್ಗೊಂಡಿರುತ್ತೇವೆ. ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನಗೊಳ್ಳುವ ಮೊದಲೇ ಇ–ಉಪಾಸ್‌ನಂತಹ ವಿವಿಧ ಇ–ಉಪಕ್ರಮಗಳನ್ನು ನಾವು ಜಾರಿಗೊಳಿಸಿರುವುದರಿಂದ ನಮ್ಮ ರಾಜ್ಯವು ಸುಗಮವಾಗಿ ಸ್ಥಿತ್ಯಂತರಗೊಳ್ಳಲು ಅನುಕೂಲವಾಗಲಿದೆ.

483. ಅಸ್ತಿತ್ವದಲ್ಲಿರುವ ಕರದಾತರು ಸರಕು ಮತ್ತು ಸೇವಾ ತೆರಿಗೆಗೆ ಸ್ಥಿತ್ಯಂತರಗೊಳ್ಳುವ ಕಾರ್ಯವು ಈಗಾಗಲೇ ಪ್ರಗತಿಯಲ್ಲಿದ್ದು, ಕರ್ನಾಟಕ ರಾಜ್ಯದ ಕರದಾತರು ಸರಕು ಮತ್ತು ಸೇವಾ ತೆರಿಗೆಗೆ ಸ್ಥಿತ್ಯಂತರಕ್ಕೆ ಆದರ್ಶಪ್ರಾಯವಾದ ಉತ್ಸುಕತೆಯನ್ನು ತೋರಿಸಿರುತ್ತಾರೆ. ಇವರುಗಳ ತೊಡಗಿಸಿಕೊಳ್ಳುವಿಕೆಯಿಂದ ಹಾಗೂ ಸರ್ಕಾರದ ಬೆಂಬಲದಿಂದ, ಕರ್ನಾಟಕವು ದೇಶದಲ್ಲಿಯೇ ಅತೀ ಹೆಚ್ಚಿನ ಮಟ್ಟದ ಸ್ಥಿತ್ಯಂತರದ ಪ್ರಗತಿಯನ್ನು ಸಾಧಿಸಿದೆ. ಈ ಸದಾವಕಾಶವನ್ನು ಬಳಸಿಕೊಂಡು ನಾನು ರಾಜ್ಯದ ಕರದಾತರನ್ನು ಅಭಿನಂದಿಸುತ್ತಾ, ಸರಕು ಮತ್ತು ಸೇವಾ ತೆರಿಗೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಅವರ ಬೆಂಬಲವನ್ನು ಕೋರುತ್ತೇನೆ.

484. ಸರಕು ಮತ್ತು ಸೇವಾ ತೆರಿಗೆಯ ಸುಗಮ ಅನುಷ್ಠಾನಕ್ಕಾಗಿ ಪ್ರಸ್ತಾವಿತ ತೆರಿಗೆ ಸುಧಾರಣೆಯ ಕುರಿತು ಅರಿವು ಮೂಡಿಸಲು ಕರದಾತರು ಹಾಗೂ ವೃತ್ತಿನಿರತರೊಂದಿಗೆ ಸಂಹವನಕ್ಕಾಗಿ ನಾವು 100 ಕ್ಕೂ ಹೆಚ್ಚು ಕಾರ್ಯಾಗಾರಗಳ ಹಾಗೂ ರೋಡ್ ಶೋಗಳ ಮೂಲಕ ಬೃಹತ್ ಪ್ರಮಾಣದ ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತೇವೆ. ಇದಲ್ಲದೇ, ನಾವು ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸಾಕಷ್ಟು ಸಾಮರ್ಥ್ಯ ಸಂವರ್ಧನೆಗಾಗಿ ಸಹ ಕ್ರಮಗಳನ್ನು ಕೈಗೊಂಡಿರುತ್ತೇವೆ. ಇದುವರೆಗೂ ಇಲಾಖೆಯ 3000 ಕ್ಕೂ ಹೆಚ್ಚಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

**ವಾಣಿಜ್ಯ ತೆರಿಗೆಗಳು**

485. ಪ್ರಸ್ತುತ ವರ್ಷದ ಆಯವ್ಯಯ ಅಂದಾಜುಗಳನ್ನು 51338 ಕೋಟಿ ರೂ.ಗಳು ಎಂದು ನಿಗದಿಪಡಿಸಲಾಗಿತ್ತು. ಪ್ರಸ್ತುತ ವರ್ಷದಲ್ಲಿ ನೋಟುಗಳ ಅಪಮೌಲ್ಯೀಕರಣದಿಂದಾಗಿ ಆರ್ಥಿಕತೆ ಹಾಗೂ ತೆರಿಗೆ ಸಂಗ್ರಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದ್ದರೂ ಸಹ, ನಮ್ಮ ವೆಚ್ಚಗಳ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದು, ಪ್ರಸಕ್ತ ಸಾಲಿನ ಗುರಿಯನ್ನು ತಲುಪುವ ನಿರೀಕ್ಷೆಯನ್ನು ಹೊಂದಲಾಗಿದೆ. ಮುಂದಿನ ವರ್ಷದಲ್ಲಿ ಅನುಷ್ಠಾನಗೊಳ್ಳಲಿರುವ ಸರಕು ಮತ್ತು ಸೇವಾ ತೆರಿಗೆಯನ್ನು ಗಮನದಲ್ಲಿರಿಸಿಕೊಂಡು, ವಾಣಿಜ್ಯ

ತೆರಿಗೆಗಳ ಇಲಾಖೆಯ ಆಯವ್ಯಯ ಅಂದಾಜನ್ನು 55000 ಕೋಟಿ ರೂ.ಗಳು ಎಂದು ನಿಗದಿಪಡಿಸಲಾಗಿದೆ.

**ಮೌಲ್ಯವರ್ಧಿತ ತೆರಿಗೆ**

**ಪರಿಹಾರಗಳು ಮತ್ತು ಸುಧಾರಣಾ ಕ್ರಮಗಳು**

486. ಸರಕು ಮತ್ತು ಸೇವಾ ತೆರಿಗೆ ಜಾರಿಯಾಗುವ ಹಿನ್ನೆಲೆಯಲ್ಲಿ, ಪ್ರಸಕ್ತ ತೆರಿಗೆ ಸಂರಚನೆಯಲ್ಲಿ ಯಾವುದೇ ಪ್ರಮುಖ ಬದಲಾವಣೆಗಳನ್ನು ಮಾಡಲು ನಾನು ಪ್ರಸ್ತಾಪಿಸುವುದಿಲ್ಲ. ಆದರೆ ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ, ರಾಗಿರೈಸ್ (ಸಂಸ್ಕರಿಸಿದ ರಾಗಿ) ಮತ್ತು ಗೋಧಿ ಪದಾರ್ಥಗಳ ಮೇಲಿನ ತೆರಿಗೆಯ ವಿನಾಯಿತಿಯನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ. ಇದಲ್ಲದೇ ಸಿರಿಧಾನ್ಯಗಳಾದ ನವಣೆ, ಸಾಮೆ, ಆರಕ ಮತ್ತು ಬರಗು ಇವುಗಳ ಹಿಟ್ಟುಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲು ಸಹ ನಾನು ಪ್ರಸ್ತಾಪಿಸುತ್ತೇನೆ. ದ್ವಿದಳ ಧಾನ್ಯಗಳು ಮತ್ತು ತೆಂಗಿನಕಾಯಿಯ ಸಿಪ್ಪೆಯ ಮೇಲಿನ ತೆರಿಗೆಯನ್ನು ಸಹ ವಿನಾಯಿತಿಗೊಳಿಸಲು ನಾನು ಪ್ರಸ್ತಾಪಿಸುತ್ತೇನೆ.

**ಆಡಳಿತಾತ್ಮಕ ಕ್ರಮಗಳು**

487. 2012–13 ಹಾಗೂ 2013–14ರ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಕರನಿರ್ಧರಣೆ ಮತ್ತು ಮರುಕರನಿರ್ಧರಣೆಗಳ ಕಾಲಮಿತಿಯು ಅನುಕ್ರಮವಾಗಿ 2010–11 ಮತ್ತು 2011–12ರ

ತೆರಿಗೆ ಅವಧಿಗಳಿಗೆ ನಿಗದಿಪಡಿಸಿದ ಕಾಲಮಿತಿಯೊಂದಿಗೆ ಅಂತ್ಯಗೊಳ್ಳುತ್ತದೆ. ಇದರಿಂದಾಗಿ, ನಾವು ವಿಶೇಷವಾಗಿ ಪರೋಕ್ಷ ತೆರಿಗೆಯ ಬಹುದೊಡ್ಡ ಸುಧಾರಣೆಯ ಅನುಷ್ಠಾನದ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಂದರ್ಭದಲ್ಲಿ, ಕರದಾತರಿಗೆ ಹಾಗೂ ತೆರಿಗೆ ಆಡಳಿತಕ್ಕೆ ಅನಪೇಕ್ಷಣೀಯ ಒತ್ತಡ ಉಂಟಾಗಲಿದೆ. ಈ ಒತ್ತಡವನ್ನು ಕಡಿಮೆಗೊಳಿಸಲು, ನಾನು 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ 2012–13 ಹಾಗೂ 2013–14ರ ತೆರಿಗೆ ಅವಧಿಗಳಿಗೆ ಸಂಬಂಧಿಸಿದ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗಳನ್ನು ಅಂತಿಮಗೊಳಿಸಲು ಇದ್ದ ಕಾಲಮಿತಿಯನ್ನು ಒಂದು ವರ್ಷ ವಿಸ್ತರಿಸಲು ಪ್ರಸ್ತಾಪಿಸುತ್ತೇನೆ. ಅದೇ ರೀತಿ ಪ್ರಕರಣ 40ಕ್ಕೆ ತಿದ್ದುಪಡಿ ಮಾಡುವ ಮೂಲಕ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗೆ ಕಾಲಮಿತಿಯನ್ನು ಪರಿಗಣಿಸುವಾಗ ಮರುಪರಿಶೀಲನಾ ನಡಾವಳಿಗಳನ್ನು ವಿಲೇ ಮಾಡಲು ತೆಗೆದುಕೊಳ್ಳುವ ಅವಧಿಯನ್ನು ಹೊರತುಪಡಿಸಲು ಸಹ ನಾನು ಪ್ರಸ್ತಾಪಿಸುತ್ತೇನೆ.

488. ನಾವು ಪ್ರಸ್ತುತ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆಯ ಬದಲಾಗಿ ಸರಕು ಮತ್ತು ಸೇವಾ ತೆರಿಗೆಯತ್ತ ಮುನ್ನಡೆಯುತ್ತಿರುವುದರಿಂದ, ಬಾಕಿ ಇರುವ ಪೂರ್ಣ ತೆರಿಗೆ ಹಾಗೂ ಬಾಕಿ ಇರುವ ದಂಡ ಮತ್ತು ಬಡ್ಡಿಯ ಶೇಕಡ 10ರಷ್ಟನ್ನು 31ನೇ ಮೇ 2017ರ ಒಳಗೆ ಪಾವತಿಸಿದಲ್ಲಿ,

ಇನ್ನುಳಿದ ಶೇಕಡ 90ರ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಅನುಕೂಲವಾಗುವಂತೆ ಕರಸಮಾಧಾನ ಯೋಜನೆಯನ್ನು ಜಾರಿಗೆ ತರಲು ನಾನು ಪ್ರಸ್ತಾಪಿಸುತ್ತೇನೆ. ಇದರಿಂದಾಗಿ ವಾಣಿಜ್ಯೋದ್ಯಮಗಳಿಗೆ ಬಾಕಿ ಇರುವ ತೆರಿಗೆ ಬಾದ್ಯತೆಗಳಿಂದ ಮುಕ್ತವಾಗಿ ಸರಕು ಮತ್ತು ಸೇವಾ ತೆರಿಗೆಯಲ್ಲಿ ನಿಷ್ಕಳಂಕ ಆರಂಭಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ.

**ಅಬಕಾರಿ**

489. ನಾವು ಅಬಕಾರಿ ಇಲಾಖೆಗೆ 2016–17ನೇ ಸಾಲಿಗೆ 16510 ಕೋಟಿ ರೂ.ಗಳ ರಾಜಸ್ವ ಗುರಿ ನಿಗಧಿಪಡಿಸಿದ್ದೆವು. ನಾವು ಈ ಗುರಿಯನ್ನು ಸಾಧಿಸಲಾಗುವುದೆಂಬ ನಿರೀಕ್ಷೆಯನ್ನು ಹೊಂದಿದ್ದೇವೆ.

490. ಸ್ಪಿರಿಟ್ (ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ.1 ರಂತೆ ವಿಧಸಲಾಗಿದ್ದ ಆಡಳಿತಾತ್ಮಕ ಶುಲ್ಕವನ್ನು ಹಿಂಪಡೆಯಲು ಉದ್ದೇಶಿಸಲಾಗಿದೆ.

491. ನಾವು ಪ್ರಸ್ತುತ 17 ಘೋಷಿತ ಹೆಚ್ಚುವರಿ ಅಬಕಾರಿ ಸುಂಕದ ಸ್ಲಾಬ್‌ಗಳನ್ನು ಹೊಂದಿದ್ದೇವೆ. ಇವುಗಳನ್ನು ತರ್ಕಬದ್ಧಗೊಳಿಸುವ ಕ್ರಮವಾಗಿ 5ನೇ ಮತ್ತು 11ನೇ ಸ್ಲಾಬ್‌ಗಳ ಮೇಲೆ ಶೇಕಡ 6 ರಷ್ಟು ಮತ್ತು ಉಳಿದ 15 ಸ್ಲಾಬ್‌ಗಳ ಮೇಲೆ ಶೇಕಡ 10 ಮತ್ತು ಶೇಕಡ 16 ರಷ್ಟು ಹೆಚ್ಚುವರಿ ಅಬಕಾರಿ

ಸುಂಕವನ್ನು ಅನುಬಂಧ–I ರಲ್ಲಿರುವಂತೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಈ ಬದಲಾವಣೆಗಳಿಂದಾಗಿ ಬಿಯರ್, ಫೆನ್ನಿ, ಲಿಕ್ಯುಯೆರ್ ಮತ್ತು ವೈನ್ ಸೇರಿದಂತೆ ಮದ್ಯದ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು 01.04.2017 ರಿಂದ ಜಾರಿಗೆ ಬರುವಂತೆ ತೆಗೆದುಹಾಕಲಾಗುವುದು.

492. ಇದರೊಂದಿಗೆ ಮತ್ತು ಪರಿಣಾಮಕಾರಿಯಾದ ಜಾರಿ ಮತ್ತು ನಿಯಂತ್ರಣ ಕ್ರಮಗಳ ಮೂಲಕ ಇಲಾಖೆಯು 2017–18ನೇ ಆರ್ಥಿಕ ಸಾಲಿಗೆ ನಿಗಧಿಪಡಿಸಲಾದ 18050 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆಯ ಗುರಿಯನ್ನು ಸಾಧಿಸಲಿದೆ.

**ನೋಂದಣಿ ಮತ್ತು ಮುದ್ರಾಂಕ**

493. 2016–17ನೇ ಸಾಲಿಗೆ 9100 ಕೋಟಿ ರೂ.ಗಳ ರಾಜಸ್ವ ಗುರಿ ನಿಗಧಿಪಡಿಸಲಾಗಿದ್ದು, ರಾಜಸ್ವ ಗುರಿಯನ್ನು ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರದ ಹೆಚ್ಚಿನ ಮೌಲ್ಯದ ನೋಟುಗಳ ಅಪಮೌಲ್ಯೀಕರಣ ತೀರ್ಮಾನದಿಂದ, ರಾಜಸ್ವ ಗುರಿ ಸಾಧಿಸಲು ಪ್ರಮುಖ ವ್ಯತಿರಿಕ್ತ ಪರಿಣಾಮ ಉಂಟಾಗಿ, ನವೆಂಬರ್ 2016ರ ನಂತರ, ದಸ್ತಾವೇಜುಗಳ ನೋಂದಣಿ ಸಂಖ್ಯೆಯಲ್ಲಿ ಶೇ.25ರಷ್ಟು ಇಳಿಮುಖವುಂಟಾಗಿರುತ್ತದೆ. ಇದರ ಪರಿಣಾಮವಾಗಿ 1350 ಕೋಟಿ ರೂ.ಗಳಷ್ಟು ರಾಜಸ್ವ ನಷ್ಟ ನಿರೀಕ್ಷಿಸಿದ್ದು, ಮಾರ್ಚ್

ಅಂತ್ಯಕ್ಕೆ 7750 ಕೋಟಿ ರೂ.ಗಳಷ್ಟು ರಾಜಸ್ವ ಸಂಗ್ರಹಣೆ ನಿರೀಕ್ಷಿಸಿದೆ.

494. **ಕರ್ನಾಟಕ ಮುದ್ರಾಂಕ ಕಾಯ್ದೆ 1957 ಕ್ಕೆ ತಿದ್ದುಪಡಿ**

- ಸದರಿ ಕಾಯ್ದೆಯ ಷಡ್ಯೂಲ್/ಅನುಸೂಚಿಯಲ್ಲಿನ ಅನುಚ್ಛೇದ 37ಕ್ಕೆ ತಿದ್ದುಪಡಿ ತರಲಾಗಿದೆ. ಅನುಬಂಧ–II ರಲ್ಲಿ ವಿವರಿಸಿರುವಂತೆ ಸರಳೀಕರಣಗೊಳಿಸಲಾಗುವುದು.
- ಸದರಿ ಕಾಯ್ದೆಯ ಷಡ್ಯೂಲ್/ಅನುಸೂಚಿಯಲ್ಲಿನ ಅನುಚ್ಛೇದ 20(4)ಕ್ಕೆ ಕಂಪನಿ ಕಾಯ್ದೆ 2013 ರಂತೆ ಕಂಪನಿಗಳ ಸಂಯೋಜನೆಗೆ ತಿದ್ದುಪಡಿ ಮಾಡಲು ಉದ್ದೇಶಿಸಿದೆ.
- ಸದರಿ ಕಾಯ್ದೆಯ ಕಲಂ 30ರಲ್ಲಿ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕವನ್ನು ಯಾರು ಪಾವತಿಸಬೇಕು ಎಂಬುದನ್ನು ನಿರ್ದಿಷ್ಟಪಡಿಸಲು ಉದ್ದೇಶಿಸಿದೆ.
- ಸದರಿ ಕಾಯ್ದೆಯ ಕಲಂ 52–ಎ, ರಲ್ಲಿ ಮುದ್ರಾಂಕಗಳನ್ನು ಎಷ್ಟು ಅವಧಿಯೊಳಗಾಗಿ ಉಪಯೋಗಿಸಬೇಕು ಹಾಗೂ ಉಪಯೋಗಿಸದೇ ಇರುವ ಮುದ್ರಾಂಕಗಳ ಮರುಪಾವತಿ ಕುರಿತು ತಿದ್ದುಪಡಿ ತರಲು ಉದ್ದೇಶಿಸಿದೆ.

495. 2017–18ನೇ ಸಾಲಿಗೆ 9000 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನಿಗಧಿಪಡಿಸಲಾಗಿದೆ.

**ಸಾರಿಗೆ**

496. 2016–17 ಸಾಲಿಗೆ ನಿಗಧಿಪಡಿಸಿದ ಗುರಿ ರೂ 5160 ಕೋಟಿಗಳಾಗಿತ್ತು, ಆದರೆ ವಾಹನಗಳ ನೊಂದಣಿಯಲ್ಲಿ ಏರಿಕೆ ಕಂಡುಬಂದಿದ್ದರಿಂದ ಸುಮಾರು 5450 ಕೋಟಿ ರೂ.ಗಳು ಅಂದರೆ 290 ಕೋಟಿ ರೂ.ಗಳ ಹೆಚ್ಚುವರಿಯಾಗಿ ಗುರಿ ಮೀರಿದ ಸಾಧನೆ ಹೊಂದುವ ಆಶಯ ಹೊಂದಿದ್ದೇವೆ.

497. ದ್ವಿಚಕ್ರ ವಾಹನಗಳಿಗೆ ಸಂಬಂಧಿಸಿದಂತೆ 2010ನೇ ಸಾಲಿನಿಂದ ಇಲ್ಲಿಯವರೆಗೆ ಮೋಟಾರು ವಾಹನ ತೆರಿಗೆಯನ್ನು ಹೆಚ್ಚಳ ಮಾಡಿರುವುದಿಲ್ಲ. ಆದ್ದರಿಂದ 1 ಲಕ್ಷಕ್ಕೂ ಮೇಲ್ಪಟ್ಟ ಬೆಲೆಯುಳ್ಳ ದ್ವಿಚಕ್ರ ವಾಹನಗಳಿಗೆ ಮಾತ್ರ ಈಗಿನ ತೆರಿಗೆ ಶೇಕಡ 12% ರಿಂದ ಶೇಕಡ 18%ಕ್ಕೆ ದ್ವಿಚಕ್ರ ವಾಹನಗಳ ಬೆಲೆಗಳ ಮೇಲೆ ಹೆಚ್ಚಳ ಮಾಡುವ ಬಗ್ಗೆ ಪ್ರಸ್ತಾಪಿಸಿದೆ, ಅನುಬಂಧ–III ರಲ್ಲಿ ತೋರಿಸಿದಂತೆ. ಸದರಿ ಪ್ರಸ್ತಾವನೆಯಿಂದ ರೂ. 60 ಕೋಟಿಗಳಷ್ಟು ಹೆಚ್ಚುವರಿ ತೆರಿಗೆಯನ್ನು ನಿರೀಕ್ಷಿಸಬಹುದಾಗಿದೆ.

498. 2017–18ನೇ ಸಾಲಿಗೆ ರೂ.6006 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನೀಡಲಾಗಿದೆ.

**ಪರಿಷ್ಕೃತ ಅಂದಾಜು 2016–17**

499. 2016–17ರ ಪರಿಷ್ಕೃತ ಅಂದಾಜುಗಳನ್ವಯ ಆಯವ್ಯಯದಲ್ಲಿ ಅಂದಾಜಿಸಲಾದ 1,61,956 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ

ಒಟ್ಟಾರೆ ಜಮೆ 1,64,104 ಕೋಟಿ ರೂ.ಗಳಾಗಿದೆ. ರಾಜ್ಯದ ರಾಜಸ್ವ ಕ್ರೋಢೀಕರಣದ ಪ್ರಯತ್ನಗಳು 1,32,867 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯು 82,211 ಕೋಟಿ ರೂ.ಗಳಾಗಿರುತ್ತದೆ.

500. ಪರಿಷ್ಕೃತ ಅಂದಾಜಿನ ಪ್ರಕಾರ ಒಟ್ಟು ವೆಚ್ಚವು 1,64,479 ಕೋಟಿ ರೂ.ಗಳಾಗಿದೆ. 2016–17ರ ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನಾ ವೆಚ್ಚವು ರಾಜ್ಯ ಸಂಪನ್ಮೂಲಗಳಿಂದ 75,769 ಕೋಟಿ ರೂ.ಗಳು ಹಾಗೂ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸಂಪನ್ಮೂಲಗಳಿಂದ 10,164 ಕೋಟಿ ರೂ.ಗಳು ಸೇರಿದಂತೆ 85,933 ಕೋಟಿ ರೂ.ಗಳಾಗಿದೆ. ಇದು 2015–16ಕ್ಕೆ ಹೋಲಿಸಿದಲ್ಲಿ ಶೇ.19.43ರಷ್ಟು ಹೆಚ್ಚಳ ಕಂಡಿದೆ.

**ಆಯವ್ಯಯ ಅಂದಾಜುಗಳು 2017–18**

**ಸನ್ಮಾನ್ಯ ಸಭಾಧ್ಯಕ್ಷರೇ,**

501. 2017–18ನೇ ಸಾಲಿನಲ್ಲಿ ಒಟ್ಟು ಜಮೆಗಳು 1,82,119 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,44,892 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 37,092 ಕೋಟಿ ರೂ.ಗಳ ಸಾಲ ಸೇರಿದಂತೆ 37,227 ಕೋಟಿ ರೂ.ಗಳ ಬಂಡವಾಳ ಜಮೆಗಳು ಒಳಗೊಂಡಿರುತ್ತದೆ. 1,44,755 ಕೋಟಿ ರೂ.ಗಳ ರಾಜಸ್ವ ವೆಚ್ಚ, 33,630 ಕೋಟಿ ರೂ.ಗಳ ಬಂಡವಾಳ ಹಾಗೂ ಸಾಲದ ಮರುಪಾವತಿ 8,176 ಕೋಟಿ ರೂ.ಗಳ

ವೆಚ್ಚವನ್ನು ಒಳಗೊಂಡು, ಒಟ್ಟು ವೆಚ್ಚವು 1,86,561 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.

502. ರಾಜಸ್ವ ಹೆಚ್ಚುವರಿಯನ್ನು 137 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ವಿತ್ತೀಯ ಕೊರತೆಯು 33,359 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದ್ದು, ಅದು ರಾಜ್ಯದ ಆಂತರಿಕ ಉತ್ಪನ್ನದ ಶೇ. 2.61 ರಷ್ಟಾಗಿರುತ್ತದೆ. 2017-18ರ ಕೊನೆಯಲ್ಲಿ 2,42,420 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇ.18.93 ರಷ್ಟಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಡಿ 2017-18ನೇ ವರ್ಷಕ್ಕೆ ನಿಗದಿಪಡಿಸಿರುವ ಶೇ.25 ರ ಮಿತಿಯೊಳಗಿರುತ್ತದೆ.

503. ಆದ್ದರಿಂದ, ಎಲ್ಲಾ ಮೂರು ವಿತ್ತೀಯ ಪರಿಮಾಣಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವು ನಿಗದಿಪಡಿಸಿರುವ ಮಿತಿಯೊಳಗಿರುತ್ತದೆ ಹಾಗು ಇದು ರಾಜ್ಯದ ವಿತ್ತೀಯ ಶಿಸ್ತನ್ನು ಪ್ರತಿಬಿಂಬಿಸುತ್ತದೆ.

**ಸಂಪನ್ಮೂಲಗಳ ಕ್ರೋಢೀಕರಣ**

504. 2017-18ನೇ ಸಾಲಿನ ರಾಜ್ಯದ ಒಟ್ಟು ಸ್ವಂತ ತೆರಿಗೆ ರಾಜಸ್ವವನ್ನು 2016-17ನೇ ಸಾಲಿನ ಪರಿಷ್ಕೃತ ಅಂದಾಜು ಮೀರಿ ಶೇ.9.42ರ ಹೆಚ್ಚಳದೊಂದಿಗೆ 89,957 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.

505. ತೆರಿಗೆಯೇತರ ರಾಜಸ್ವಗಳಿಂದ 6,945 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 31,908 ಕೋಟಿ ರೂ.ಗಳನ್ನು ಹಾಗೂ 16,082 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಹಾಯಾನುದಾನ ರೂಪದಲ್ಲಿ ರಾಜ್ಯ ಸರ್ಕಾರವು ನಿರೀಕ್ಷಿಸಿದೆ. ಈ ರಾಜಸ್ವ ಜಮೆಗಳಿಗೆ ಪೂರಕವಾಗಿ 37,092 ಕೋಟಿ ರೂ.ಗಳ ಒಟ್ಟು ಸಾಲಗಳು, 75 ಕೋಟಿ ರೂ.ಗಳ ಋಣೇತರ ಸ್ವೀಕೃತಿಗಳು ಮತ್ತು 60 ಕೋಟಿ ರೂ.ಗಳ ಸಾಲಗಳ ವಸೂಲು ಮೊತ್ತವನ್ನು ಅಂದಾಜಿಸಲಾಗಿದೆ.

506. ರಾಜ್ಯದ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 11,279 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ.

**ಸನ್ಮಾನ್ಯ ಸಭಾಧ್ಯಕ್ಷರೇ,**

507. ಈ ಆಯವ್ಯಯ ಪತ್ರವು ನಮ್ಮ ಸರ್ಕಾರದ ಆದ್ಯತೆಗಳನ್ನು ಬಿಂಬಿಸುತ್ತದೆ. ನಮ್ಮ ಆಶಯಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಇವುಗಳ ಅನುಷ್ಠಾನಕ್ಕೆ ಅಗತ್ಯವಾದ ಸಹಕಾರವನ್ನು ನಾನು ಈ ಸದನದ ಗೌರವಾನ್ವಿತ ಸದಸ್ಯರಿಂದ ಅಪೇಕ್ಷಿಸುತ್ತೇನೆ.

508. ಈಗ ಆಯವ್ಯಯವನ್ನು ಗೌರವಾನ್ವಿತ ಸದನದ ಪರಿಗಣನೆಗಾಗಿ ಮಂಡಿಸುತ್ತಿದ್ದೇನೆ. ಹಾಗೂ ಆಯವ್ಯಯ ಅಂದಾಜಿನನ್ವಯ 2017–18ನೇ ಸಾಲಿನ 30ನೇ ಜೂನ್ 2017ರವರೆಗಿನ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

**ಜೈ ಹಿಂದ್**

**ಜೈ ಕರ್ನಾಟಕ**

## ಆಯವ್ಯಯ ವಿಹಂಗಮ ನೋಟ

*ಕೋಟಿ ರೂಗಳಲ್ಲಿ*

| | | ಬಜೆಟ್ ಅಂದಾಜು | ಪರಿಷ್ಕೃತ ಅಂದಾಜು | ಬಜೆಟ್ ಅಂದಾಜು |
|---|---|---|---|---|
| | | **2016-17** | **2016-17** | **2017-18** |
| | **ಪ್ರಾರಂಭ ಶಿಲ್ಕು** | **-139.36** | **-74.89** | **-176.04** |
| **ಎ** | **ರಾಜಸ್ವ ಲೆಕ್ಕ** | | | |
| **I** | ಜಮೆ | | | |
| | ರಾಜ್ಯ ತೆರಿಗೆ | 83864.45 | 82210.82 | 89956.56 |
| | ಕೇಂದ್ರ ತೆರಿಗೆಯಲ್ಲಿ ಪಾಲು | 26978.84 | 28759.94 | 31908.05 |
| | ಕೇಂದ್ರ ಸರ್ಕಾರದ ಅನುದಾನಗಳು | 13694.34 | 14797.69 | 16082.31 |
| | ತೆರಿಗೆಯೇತರ ರಾಜಸ್ವ | 6220.45 | 7098.82 | 6944.62 |
| | **ಒಟ್ಟು–ಎ (I)** | **130758.08** | **132867.27** | **144891.54** |
| **II** | **ವೆಚ್ಚ** | | | |
| | ಸಾಮಾಜಿಕ ಸೇವೆ | 50960.26 | 53662.74 | 55887.39 |
| | ಆರ್ಥಿಕ ಸೇವೆ | 38277.08 | 39160.69 | 43671.14 |
| | ಸಾಮಾನ್ಯ ಸೇವೆ | 35018.42 | 33091.78 | 38009.10 |
| | ಸಹಾಯಾನುದಾನ ಮತ್ತು ಅಂಶದಾನ | 5980.31 | 5889.55 | 7187.37 |
| | **ಒಟ್ಟು–ಎ (II)** | **130236.07** | **131804.76** | **144755.00** |
| ಎ | ರಾಜಸ್ವ ಲೆಕ್ಕ ಹೆಚ್ಚುವರಿ/ಕೊರತೆ | ***522.01*** | ***1062.51*** | ***136.54*** |

| | | ಬಜೆಟ್ ಅಂದಾಜು | ಪರಿಷ್ಕೃತ ಅಂದಾಜು | ಬಜೆಟ್ ಅಂದಾಜು |
|---|---|---|---|---|
| | | **2016-17** | **2016-17** | **2017-18** |
| ಬಿ | **ಬಂಡವಾಳ ಲೆಕ್ಕ** | | | |
| **I** | **ಜಮೆ:** | | | |
| | ಕೇಂದ್ರ ಸರ್ಕಾರದಿಂದ ಸಾಲ | 1798.00 | 1798.00 | 1670.74 |
| | ಬಹಿರಂಗ ಮಾರುಕಟ್ಟೆ ಸಾಲ | 25537.00 | 28007.00 | 34716.51 |
| | ಎನ್‌ಎಸ್‌ಎಸ್‌ಎಫ್, ಎನ್‌ಸಿಡಿಸಿ ಮತ್ತು ಆರ್.ಐ.ಡಿ.ಎಫ್ ಗಳಿಂದ ಸಾಲ | 3701.00 | 1231.00 | 705.00 |
| | ವಿವಿಧ ಬಂಡವಾಳ ಜಮೆಗಳು | 75.00 | 97.00 | 75.00 |
| | ಸಾಲಗಳು ಮತ್ತು ಮುಂಗಡಗಳ ವಸೂಲಿ | 86.99 | 104.14 | 60.20 |
| | ಸಾರ್ವಜನಿಕ ಲೆಕ್ಕ | 343321.25 | 341281.56 | 513869.86 |
| | **ಒಟ್ಟು–ಬಿ (I)** | **374519.24** | **372518.70** | **551097.31** |
| | | | | |
| **II** | **ಬಟವಾಡೆ:** | | | |
| | ಬಂಡವಾಳ ವೆಚ್ಚ | 25715.90 | 24773.54 | 32033.04 |
| | ಕೇಂದ್ರ ಸರ್ಕಾರದ ಸಾಲಗಳ ಮರುಸಂದಾಯ | 964.92 | 962.42 | 1083.22 |
| | ಮಾರುಕಟ್ಟೆ ಸಾಲಗಳ ಮರುಪಾವತಿ | 3981.21 | 3981.21 | 4750.17 |
| | ಎಲ್‌ಐಸಿ, ಜಿಐಸಿ. ಎನ್‌ಎಸ್‌ಎಸ್‌ಎಫ್, ಎನ್‌ಸಿಡಿಸಿ ಮತ್ತು ಆರ್.ಐ.ಡಿ.ಎಫ್ ಸಾಲಗಳ ಮರುಸಂದಾಯ | 1895.28 | 2312.69 | 2342.26 |
| | ಸಾಲಗಳ ಮತ್ತು ಮುಂಗಡಗಳ ಬಟವಾಡೆ | 625.19 | 643.97 | 1597.40 |
| | ಸಾರ್ವಜನಿಕ ಲೆಕ್ಕ | 342035.92 | 341008.53 | 509623.76 |
| | **ಒಟ್ಟು–ಬಿ (II)** | **375218.42** | **373682.36** | **551429.85** |
| ಬಿ | ***ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ (–)*** | ***-699.18*** | ***-1163.66*** | ***-332.54*** |
| ಸಿ | ***ವರ್ಷದ ಒಟ್ಟು ಹೆಚ್ಚಳ/ಕೊರತೆ*** | ***-177.17*** | ***-101.15*** | ***-196.00*** |
| ಡಿ | ***ಮುಕ್ತಾಯ ಶಿಲ್ಕು*** | ***-316.53*** | ***-176.04*** | ***-372.04*** |

## ಅನುಬಂಧ – ಅ

1. ಬಾಗಲಕೋಟೆ ಜಿಲ್ಲೆ – ಗುಳೇದಗುಡ್ಡ, ರಬಕವಿ–ಬನಹಟ್ಟಿ ಮತ್ತು ಇಳಕಲ್
2. ಬೆಳಗಾವಿ ಜಿಲ್ಲೆ – ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ
3. ಚಾಮರಾಜನಗರ ಜಿಲ್ಲೆ – ಹನೂರು
4. ದಾವಣಗೆರೆ ಜಿಲ್ಲೆ – ನ್ಯಾಮತಿ
5. ಬೀದರ್ ಜಿಲ್ಲೆ – ಚಿಟಗುಪ್ಪ, ಹುಲಸೂರು ಮತ್ತು ಕಮಲಾನಗರ
6. ಬಳ್ಳಾರಿ ಜಿಲ್ಲೆ – ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ
7. ಧಾರವಾಡ ಜಿಲ್ಲೆ – ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರ
8. ಗದಗ ಜಿಲ್ಲೆ – ಗಜೇಂದ್ರಗಡ ಮತ್ತು ಲಕ್ಷ್ಮೇಶ್ವರ
9. ಕಲಬುರಗಿ ಜಿಲ್ಲೆ – ಕಾಳಗಿ, ಕಮಲಾಪುರ, ಯಡ್ರಾವಿ ಮತ್ತು ಶಹಾಬಾದ್,
10. ಯಾದಗಿರ್ ಜಿಲ್ಲೆ – ಹುಣಸಗಿ, ವಡಗೆರ ಮತ್ತು ಗುರುಮಿಟ್ಕಲ್
11. ಕೊಪ್ಪಳ ಜಿಲ್ಲೆ – ಕುಕನೂರು, ಕನಕಗಿರಿ ಮತ್ತು ಕಾರಟಗಿ
12. ರಾಯಚೂರು ಜಿಲ್ಲೆ – ಮಸ್ಕಿ ಮತ್ತು ಸಿರವಾರ
13. ಉಡುಪಿ ಜಿಲ್ಲೆ – ಬ್ರಹ್ಮಾವರ, ಕಾಪು ಮತ್ತು ಬೈಂದೂರು
14. ದಕ್ಷಿಣ ಕನ್ನಡ ಜಿಲ್ಲೆ – ಮೂಡುಬಿದರೆ ಮತ್ತು ಕಡಬ

15. ಬೆಂಗಳೂರು ನಗರ ಜಿಲ್ಲೆ – ಯಲಹಂಕ
16. ವಿಜಯಪುರ ಜಿಲ್ಲೆ – ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ
17. ಹಾವೇರಿ ಜಿಲ್ಲೆ – ರಟ್ಟೀಹಳ್ಳಿ
18. ಮೈಸೂರು ಜಿಲ್ಲೆ – ಸರಗೂರು
19. ಚಿಕ್ಕಮಗಳೂರು ಜಿಲ್ಲೆ – ಅಜ್ಜಂಪುರ
20. ಉತ್ತರ ಕನ್ನಡ ಜಿಲ್ಲೆ – ದಾಂಡೇಲಿ
21. ಕೋಲಾರ ಜಿಲ್ಲೆ – ಕೆಜಿಎಫ್

## ಅನುಬಂಧ– I

(ಕಂಡಿಕೆ–491)

ಮದ್ಯದ ಮೇಲಿನ ಪ್ರಸ್ತುತ ಮತ್ತು ಪ್ರಸ್ತಾವಿತ ಹೆಚ್ಚುವರಿ ಅಬಕಾರಿ ಸುಂಕದ ದರಗಳು

| ಕ್ರಮ ಸಂಖ್ಯೆ | ಘೋಷಿತ ಬೆಲೆ (ಪ್ರತಿ ರಟ್ಟಿನ ಪೆಟ್ಟಿಗೆ) | ಪ್ರಸ್ತುತ ಹೆಚ್ಚುವರಿ ಅಬಕಾರಿ ಸುಂಕ (ಪ್ರತಿ ಬಲ್ಕ್ ಲೀ.ಗೆ.) | ಪ್ರಸ್ತಾವಿತ ಹೆಚ್ಚುವರಿ ಅಬಕಾರಿ ಸುಂಕ (ಪ್ರತಿ ಬಲ್ಕ್ ಲೀ.ಗೆ.) |
|---|---|---|---|
| 1 | 0 – 449 | 125 | 138 |
| 2 | 450 – 499 | 159 | 175 |
| 3 | 500 – 549 | 199 | 231 |
| 4 | 550 – 599 | 256 | 297 |
| 5 | 600 – 699 | 364 | 386 |
| 6 | 700 – 799 | 407 | 472 |
| 7 | 800 – 899 | 434 | 503 |
| 8 | 900 – 999 | 468 | 543 |
| 9 | 1000 – 1099 | 490 | 568 |
| 10 | 1100 – 1199 | 549 | 637 |
| 11 | 1200 – 1299 | 700 | 742 |
| 12 | 1300 – 1399 | 744 | 863 |
| 13 | 1400 – 1799 | 804 | 933 |
| 14 | 1800 – 2199 | 898 | 1042 |
| 15 | 2200 – 4924 | 1026 | 1190 |
| 16 | 4925 – 7650 | 1198 | 1390 |
| 17 | 7651 ಮತ್ತು ಅದಕ್ಕಿಂತ ಹೆಚ್ಚು | ಘೋಷಿತ ಬೆಲೆಯ ಮೇಲೆ 18% | ಘೋಷಿತ ಬೆಲೆಯ ಮೇಲೆ 21% |

## ಅನುಬಂಧ – II
## (ಕಂಡಿಕೆ–494)
## ಪ್ರಸ್ತುತ ಮತ್ತು ಪ್ರಸ್ತಾವಿತ ಮುದ್ರಾಂಕ ಶುಲ್ಕ ದರಗಳು

| 1 | 2 | 3 | |
|---|---|---|---|
| ಅನುಚ್ಛೇದ ಸಂಖ್ಯೆ | ದಸ್ತಾವೇಜಿನ ವಿವರಣೆ | ಸರಿಯಾದ ಮುದ್ರಾಂಕ ಶುಲ್ಕ | |
| | | ಪ್ರಸ್ತುತ | ಪ್ರಸ್ತಾವಿತ |
| 37 | **ವ್ಯವಹಾರಗಳ (ವಿದ್ಯುನ್ಮಾನ ಅಥವಾ ಇತರ ರೀತಿಯ) ಟಿಪ್ಪಣಿ ಅಥವಾ ಜ್ಞಾಪನ ಪತ್ರ**–ದಳ್ಳಾಳಿ ಅಥವಾ ಏಜೆಂಟನು ಯಜಮಾನನಿಗಾಗಿ ಖರೀದಿ ಅಥವಾ ಮಾರಾಟವನ್ನು ಸೂಚಿಸಿ ಯಜಮಾನನಿಗೆ ಕಳುಹಿಸಿದ್ದು ಅಥವಾ ಕರ್ನಾಟಕ ರಾಜ್ಯದಲ್ಲಿ ಅಥವಾ ಬೇರೆಡೆ ನಿವಾಸಿಯಾಗಿರುವ ಕಕ್ಷಿದಾರ (ಯಜಮಾನನ) ಪರವಾಗಿ ಸ್ಟಾಕ್ ಎಕ್ಸ್‌ಚೇಂಜ್ ಅಥವಾ ಸಂಘ ಸಂಸ್ಥೆ ಮೂಲಕ ಅಥವಾ ಅನ್ಯಥಾ, ವ್ಯಾಪಾರಿ ಸದಸ್ಯರು (ಏಜೆಂಟ್) ಮಾಡಿದ ವ್ಯವಹಾರ. | | |

| | | | |
|---|---|---|---|
| (ಎ) | ಯಾವುದೇ ಸರಕುಗಳ ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳು | ಸರಕುಗಳು ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಗರಿಷ್ಠ ಐವತ್ತು ರೂಪಯಿಗಳಿಗೊಳಪಟ್ಟು ಒಂದು ರೂಪಾಯಿ. | ಸರಕುಗಳು ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |
| (ಬಿ) | ಯಾವುದೇ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕ್ ಬಂಧಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕ್ ಅಥವಾ ಸರ್ಕಾರಿ ಭದ್ರತಾ ಪತ್ರವಾಗಿಲ್ಲದ ಇಂಥದೇ ಸ್ವರೂಪದ ಮಾರಾಟ ಮಾಡಬಹುದಾದ ಇತರೆ ಭದ್ರತಾ ಪತ್ರಗಳು | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |
| (ಸಿ) | ಸರ್ಕಾರಿ ಭದ್ರತಾ ಪತ್ರಗಳು | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಆ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಗರಿಷ್ಠ ಐವತ್ತು ರೂಪಾಯಿಗಳಿಗೆ ಒಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟ ಕಾಲದಲ್ಲಿ ಆ ಭದ್ರತಾ ಪತ್ರಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |

| | | | |
|---|---|---|---|
| **(ಡಿ)** | ವಶಾವಣೆ ಅಥವಾ ವಶಾವಣೇತರ ಆಧಾರಿತ (ವೃತ್ತಿಯ ಮತ್ತು ವ್ಯಾಪಾರದ) ವ್ಯವಹಾರಗಳಿಗೆ ಸಂಬಂಧ ಪಟ್ಟಂತೆ, ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂಥವುಗಳನ್ನು ಹೊರುತುಪಡಿಸಿದ ಭದ್ರತಾ ಪತ್ರಗಳು | ಗರಿಷ್ಠ ಐವತ್ತು ರೂಪಾಯಿಗಳಿ ಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ | ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |
| (ಇ) | ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂಥವು ಗಳನ್ನು ಹೊರತುಪಡಿಸಿ ಭವಿಷ್ಯತ್ ಭದ್ರತಾ ಪತ್ರಗಳು ಭಾವೀ ಮತ್ತು ಐಚ್ಛಿಕ–ವ್ಯಾಪಾರ | ಗರಿಷ್ಠ ಐವತ್ತು ರೂಪಾಯಿಗಳಿಗೊಳ ಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ | ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |
| (ಎಫ್) | ವ್ಯಾಪಾರ ಸರಕುಗಳ ವಾಯಿದಾ ಕರಾರುಗಳ ಬಗ್ಗೆ | ಗರಿಷ್ಠ ಐವತ್ತು ರೂಪಾಯಿಗಳಿ ಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ | ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ. |
| | **ವಿವರಣೆ**– (ಬಿ), (ಡಿ) ಮತ್ತು (ಇ) ಖಂಡಗಳ ಉದ್ದೇಶಗಳಿಗಾಗಿ "ಭದ್ರತಾ ಪತ್ರಗಳು" ಎಂದರೆ ಭದ್ರತಾ ಪತ್ರಗಳ ಕರಾರು (ವಿನಿಮಯ) ಅಧಿನಿಯಮ, 1956ರ (2)ನೇ ಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಲಾದ ಭದ್ರತಾ ಪತ್ರಗಳು | | |

| | | | |
|---|---|---|---|
| | **ವಿನಾಯಿತಿಗಳು:–**<br>(1) ಅಂಥ ಯಜಮಾನನಿಗಾಗಿ ಖರೀದಿ ಮಾಡಿರುವುದನ್ನು ಅಥವಾ ಮಾರಾಟ ಮಾಡಿರುವುದನ್ನು ತಿಳಿಸಿ ತನ್ನ ಯಜಮಾನನಿಗಾಗಿ ದಳ್ಳಾಳಿಯು ಅಥವಾ ಏಜೆಂಟನು ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪನ ಪತ್ರ ಅಥವಾ ಸರ್ಕಾರಿ ಭದ್ರತಾ ಪತ್ರ ಅಥವಾ ಯಾವುದೇ ನಿಗಮಿತ ಕಂಪನಿಯಲ್ಲಿ ಅಥವಾ ಇತರ ನಿಗಮಿತ ನಿಕಾಯದಲ್ಲಿ ಅಥವಾ ಅದರ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕು, ಬಂಧ ಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕು ಅಥವಾ ಅದೇ ಸ್ವರೂಪದ ಮಾರಾಟ ಮಾಡಬಹುದಾದ ಇತರೆ ಭದ್ರತಾ ಪತ್ರಗಳು– ಇವುಗಳಿಗೆ ಸಂಬಂಧಪಟ್ಟಂತೆ 18ಎ ಅನುಚ್ಛೇದದ (1), (2) ಮತ್ತು (3) ನೇ ಖಂಡಗಳಲ್ಲಿ ವಿವರಿಸಿದ ತೀರುವಳಿ ಪಟ್ಟಿಗಳಲ್ಲಿ ಮಾಡಬೇಕಾದ ನಮೂದು.<br>(2) ಲಿಖಿತ ಪತ್ರದಲ್ಲಿ ಹೇಳಿರುವ ಮೊಬಲಗು ಒಂದು ನೂರು ರೂಪಾಯಿಗಳಿಗಿಂತ ಕಡಿಮೆ ಇರುವಲ್ಲಿ, ಮೇಲ್ಕಂಡ ಯಾವುದೇ ಪ್ರಕರಣದಲ್ಲಿ ದಳ್ಳಾಳಿಯು ಅಥವಾ ಏಜೆಂಟನು ತನ್ನ ಯಜಮಾನನಿಗೆ ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪನಾ ಪತ್ರ. | | |

# <u>ಅನುಬಂಧ– III</u>

**“Part A1”**
(PARA-498)
**(Taxation Schedule)**
**(See Section3 (1))**
**Lifetime Tax for Two Wheelers**

| Sl. No. | Class of vehicles | Motor cycles whose cost does not exceeds Rs. 50,000/- | Motor cycles cost of which exceeds Rs.50,000/- but does not exceeds Rs. 1,00,000/- | Motor cycles cost which exceeds Rs. 1,00,000/- |
|---|---|---|---|---|
| **A** | At the time of Registration of New Vehicles | 10 percent of cost of the Vehicle | 12 percent of the cost of the Vehicle | 18 percent of the cost of the Vehicle |
| **B** | If the vehicle is already registered and its age from the month of Registration is: | Percentage of the Life Time Tax levied under Clause A | Percentage of the Life Time Tax levied under Clause A | Percentage of the Life Time Tax levied under Clause A |
| **1** | Not more than 2 years | 93% | 93% | 93% |
| **2** | More than 2 Years but not more than 3 Years | 87% | 87% | 87% |
| **3** | More than 3 Years but not more than 4 Years | 81% | 81% | 81% |


| | | | | |
|---|---|---|---|---|
| **4** | More than 4 Years but not more than 5 Years | 75% | 75% | 75% |
| **5** | More than 5 Years but not more than 6 Years | 69% | 69% | 69% |
| **6** | More than 6 Years but not more than 7 Years | 64% | 64% | 64% |
| **7** | More than 7 Years but not more than 8 Years | 59% | 59% | 59% |
| **8** | More than 8 Years but not more than 9 Years | 54% | 54% | 54% |
| **9** | More than 9 Years but not more than 10 Years | 49% | 49% | 49% |
| **10** | More than 10 Years but not more than 11 Years | 45% | 45% | 45% |
| **11** | More than 11 Years but not more than 12 Years | 41% | 41% | 41% |
| **12** | More than 12 Years but not more than 13 Years | 37% | 37% | 37% |


| | | | | |
|---|---|---|---|---|
| **13** | More than 13 Years but not more than 14 Years | 33% | 33% | 33% |
| **14** | More than 14 Years but not more than 15 Years | 29% | 29% | 29% |
| **15** | More than 15 years | 25% | 25% | 25% |


**Notes:**


1. In respect of vehicles for which life time tax was due prior to the 1st day of April 2017, but has not been paid, such tax shall be collected at the rates prevailing prior to such day along with the penalty due, if any.
2. Purchase Invoice shall be produced in respect of vehicles which are registered on or after 1st day of April 2007.
3. Cost of the vehicle in relation to a motor vehicle means –
   (a) In respect of a vehicle manufactured in India, cost of the vehicle as per the purchase invoice issued either by the manufacturer or by the dealer of the vehicle including the excise duty, sales tax, surcharge or cess, entry tax etc., as payable in the State of Karnataka; and
   (b) In respect of an imported motor vehicle, irrespective of its place of manufacture, the total cost incurred in importing the vehicle, that is to say, the value of the motor vehicle as endorsed in the Bill of Entry or such other document and assessed as such under the Customs Act. 1962, together with the Customs Duty levied, freight charges incurred and other taxes levied thereupon including additional duty/penalty levied if any, by the Customs Department or any other Department."

## ಜಮೆ – ರೂಪಾಯಿ ಎಷ್ಟು ಭಾಗ ಯಾವುದರಿಂದ
## (2017–18 ಆಯವ್ಯಯ ಅಂದಾಜು)




ವೆಚ್ಚ - ೨೦೧೭-೧೮ ಆಯವ್ಯಯ ಅಂದಾಜು
ರೂಪಾಯಿ ಯಾವ ಭಾಗ ಎಷ್ಟೆಷ್ಟು?
ನೀರು ಪೂರೈಕೆ ಮತ್ತು ನೈರ್ಮಲ್ಯ, ೨ ಪೈಸೆ
ಕೃಷಿ, ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿ, ೧೯ ಪೈಸೆ
ಆರೋಗ್ಯ, ೪ ಪೈಸೆ
ಇತರ ಸಾಮಾಜಿಕ ಸೇವೆಗಳು , ೮ ಪೈಸೆ
ಸಮಾಜ ಕಲ್ಯಾಣ, ೧೦ ಪೈಸೆ
ಇತರ ಸಾಮಾನ್ಯ ಸೇವೆಗಳು, ೧೭ ಪೈಸೆ
ಶಿಕ್ಷಣ, ೧೧ ಪೈಸೆ
ಸಾಲ ತೀರಿಕೆ, ೧೨ ಪೈಸೆ
ಇತರ ಆರ್ಥಿಕ ಸೇವೆಗಳು, ೧೭ ಪೈಸೆ


ರಾಜ್ಯ ಸ್ವಂತ ತೆರಿಗಗಳ ವಿವರಗಳು 2017–18 ಆಯವ್ಯಯ ಅಂದಾಜುಗಳು
ರೂ.ಕೋಟಿಗಳಲ್ಲಿ
ಮೋಟಾರು ವಾಹನಗಳು, ೬೦೦೬, ೭%
ಇತರೆ, ೧೯೧೧, ೨%
ಸ್ಟ್ಯಾಂಪುಗಳು ಮತ್ತು ನೋಂದಣಿ ಶುಲ್ಕ ೯೦೦೦, ೧೧%
ವಾಣಿಜ್ಯ ತೆರಿಗೆಗಳು, ೫೫೦೦೦, ೬೧%
ರಾಜ್ಯ ಅಬಕಾರಿ, ೧೮೦೫೦, ೨೦%


ಒಟ್ಟಾರೆ ಹಂಚಿಕೆ (ಒಟ್ಟು ಅಭಿಯಾಚನೆ + ಐ.ಇ.ಬಿ.ಆರ್) ೨೦೧೭–೧೮ (ರೂ.ಕೋಟಿಗಳಲ್ಲಿ) (ಒಟ್ಟಾರೆ ಹಂಚಿಕೆಯ ಶೇಕಡವಾರು)
ಶಿಕ್ಷಣ 22667, 11%
ನಗರಾಭಿವೃದ್ಧಿ 18127, 9%
ಜಲಸಂಪನ್ಮೂಲ 18028, 9%
ಇಂಧನ 14094, 7%
ಗ್ರಾಮೀಣಾಭಿವೃದ್ಧಿ & ಪಂಚಾಯತಿ ರಾಜ್ 14061, 7%
ಸಮಾಜ ಕಲ್ಯಾಣ 11717, 6%
ಲೋಕೋಪಯೋಗಿ 8559, 4%
ಒಳಾಡಳಿತ & ಸಾರಿಗೆ 7292, 4%
ಆರೋಗ್ಯ & ಕುಟುಂಬ ಕಲ್ಯಾಣ 7122, 3%
ಕೃಷಿ & ತೋಟಗಾರಿಕೆ 6601, 3%
ಕಂದಾಯ 5900, 3%
ಮಹಿಳಾ & ಮಕ್ಕಳ ಕಲ್ಯಾಣ 4926, 2%
ವಸತಿ 4708, 2%
ಆಹಾರ ಮತ್ತು ನಾಗರೀಕ ಸರಬರಾಜು 3636, 2%
ಇತರೆ 58758, 28%